
ಬುಧವಾರ, ಏಪ್ರಿಲ್ 7, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 97 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಸಾಮಾಜಿಕ ಮಾಧ್ಯಮಗಳಲ್ಲಿ ವೈಯಕ್ತಿಕ ಮಾಹಿತಿಗಳನ್ನು ಹಂಚಿಕೊಳ್ಳುವ ಮುನ್ನ ಅದರ ಅಗತ್ಯ ಏನು ಎನ್ನುವ ಕುರಿತು ಆಲೋಚಿಸದಿದ್ದರೆ ಮುಂದೆ ಪಶ್ಚಾತ್ತಾಪ ಪಡಬೇಕಾಗಬಹುದು!



ಸೆನ್ಸೆಕ್ಸ್	ನಿಫ್ಟಿ	₹/$
49,201 ▲	14,683 ▲	73.42 ▼

₹200 ಕೋಟಿ ಮೌಲ್ಯದ ಆಸ್ತಿಗಾಗಿ ಖಾಲಿ ನಿವೇಶನದ ವಿಳಾಸ!

• ಮಂಜುನಾಥ ಹೆಬ್ಬಾರ್

ಬೆಂಗಳೂರು: ನಗರ ಜಿಲ್ಲೆಯ ಹೆಸರಘಟ್ಟ ಹೋಬಳಿಯ ಮಾದಪ್ಪನಹಳ್ಳಿಯ ₹200 ಕೋಟಿ ಮೌಲ್ಯದ ಆಸ್ತಿಗಾಗಿ ವರ್ಷಾನುಗಟ್ಟಲೆ ಕಾನೂನು ಹೋರಾಟ ಮಾಡಿದ್ದ ಕುಟುಂಬ ಖಾಲಿ ನಿವೇಶನದಲ್ಲಿ ವಾಸವಿತ್ತೇ?

32 ಎಕರೆ ಭೂವಿವಾದದ ಪ್ರಮುಖ ಪ್ರತಿವಾದಿಯಾದ ನರಸಿಂಹಯ್ಯ ಮೃತಪಟ್ಟ ವೇಳೆ ಅವರ ಪುತ್ರ ನರಸಿಂಹಮೂರ್ತಿ ನೀಡಿದ ಮರಣ ಪ್ರಮಾಣಪತ್ರದಲ್ಲಿರುವ ವಿಳಾಸ ನೋಡಿದಾಗ ಅಧಿಕಾರಿಗಳಿಗೆ ಮೂಡಿದ ಅನುಮಾನವಿದು.

ಕೂಲಂಕಷವಾಗಿ ಪರಿಶೀಲಿಸಿದಾಗ ವಿಳಾಸ ನಕಲಿ ಎಂಬುದು ಅಧಿಕಾರಿಗಳಿಗೆ ಖಾತ್ರಿಯಾಗಿತ್ತು. ನಕಲಿ ದಾಖಲೆಗಳನ್ನು ಸೃಷ್ಟಿಸಿಯೇ 32 ಎಕರೆ ಬಂಜರು ಭೂಮಿ ಮೇಲೆ ಹಕ್ಕು ಸ್ಥಾಪಿಸಿದ್ದ ಕುಟುಂಬ ನೀಡಿದ ಮತ್ತೊಂದು ದಾಖಲೆಯೂ ನಕಲಿ. ನಕಲಿ ದಾಖಲೆ ಸೃಷ್ಟಿಸುವ ಕೈಚಳಕಕ್ಕೆ ಅಧಿಕಾರಿಗಳೇ ದಂಗಾಗಿದ್ದರು. ಇದಾದ ಬಳಿಕ ಕುಟುಂಬದ ವಿರುದ್ಧ ಯಲಹಂಕ ತಹಶೀಲ್ದಾರ್ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು. ಅಷ್ಟೂ ಜಾಗವನ್ನು ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ವಿಶೇಷ ಜಿಲ್ಲಾಧಿಕಾರಿ ಎಂ.ಕೆ.ಜಗದೀಶ್ ಆದೇಶ ಹೊರಡಿಸುವ ವೇಳೆ ಈ ಅಂಶಗಳನ್ನು ಪೂರಕ ದಾಖಲೆಗಳನ್ನಾಗಿ ಪರಿಗಣಿಸಿದ್ದಾರೆ.

'ಮಾದಪ್ಪನಹಳ್ಳಿಯ ಸರ್ವೆ ನಂಬರ್ 62ರ ಜಮೀನು ತಮಗೆ ಸೇರಿದ್ದು' ಎಂದು ಕೋರಿ ನರಸಿಂಹಯ್ಯ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಅಂದಿನ ಜಿಲ್ಲಾಧಿಕಾರಿ ಎಂ.ಕೆ. ಅಯ್ಯಪ್ಪ, ಪ್ರತಿವಾದಿಗಳ ಪರ ಆದೇಶ ಹೊರಡಿಸಿದ್ದರು. ಬಳಿಕ ಜಿಲ್ಲಾಧಿಕಾರಿ, 'ಅದು ಸರ್ಕಾರಿ ಜಮೀನು' ಎಂದು ಮರು ಆದೇಶ ಹೊರಡಿಸಿದ್ದರು. ಇದರ ವಿರುದ್ಧ ನರಸಿಂಹಯ್ಯ ಕುಟುಂಬದ ಸದಸ್ಯರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. 'ಮರು ಆದೇಶ ಮಾಡುವ ಅಧಿಕಾರ ಜಿಲ್ಲಾಧಿಕಾರಿಗಿಲ್ಲ' ಎಂದು ಹೈಕೋರ್ಟ್ ಹೇಳಿತ್ತು.

ಈ ನಡುವೆ, 2016ರಲ್ಲಿ ನರಸಿಂಹಯ್ಯ ಮೃತಪಟ್ಟಿದ್ದರು. ಅವರ ಪುತ್ರ ನರಸಿಂಹಮೂರ್ತಿ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾಯಿಸುವಂತೆ ಕೋರಿದ್ದರು. ತಂದೆಯ ಮರಣ ಪ್ರಮಾಣಪತ್ರವನ್ನೂ ನೀಡಿದ್ದರು.

ಈ ದಾಖಲೆಗಳ ಬಗ್ಗೆ ಯಲಹಂಕದ ಆಗಿನ ತಹಶೀಲ್ದಾರ್ ಬಿ.ಆರ್.ಮಂಜುನಾಥ್ ಅವರಿಗೆ ಅನುಮಾನ ಮೂಡಿತ್ತು. ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದ್ದ ವಿಳಾಸವು ಯಲಹಂಕ ತಾಲ್ಲೂಕಿನಲ್ಲಿತ್ತು. ಕಂದಾಯ ಅಧಿಕಾರಿಯು ಆ ವಿಳಾಸಕ್ಕೆ ಹೋಗಿ ಪರಿಶೀಲಿಸಿದಾಗ ಅಲ್ಲಿದ್ದುದು ಖಾಲಿ ನಿವೇಶನ! ಪ್ರತಿವಾದಿಗಳು ಸುಳ್ಳು ವಿಳಾಸ ನೀಡಿದ್ದಾರೆ ಎಂದು ಕಂದಾಯ ಅಧಿಕಾರಿ ವರದಿ ನೀಡಿದ್ದರು.

ನರಸಿಂಹಯ್ಯ ಮರಣ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡುವಂತೆ ಬಿಬಿಎಂಪಿಗೆ ಜಿಲ್ಲಾಡಳಿತ ಪತ್ರ ಬರೆದಿತ್ತು. ರಾಜಾನುಕುಂಟೆ ಠಾಣಾ ವ್ಯಾಪ್ತಿಯ ಸ್ಮಶಾನದಲ್ಲಿ ಹೆಣವನ್ನು ಹೂಳಿದ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ನೀಡಿರುವ ಪ್ರಮಾಣಪತ್ರ, ಅಶ್ವಿನಿ ಆಸ್ಪತ್ರೆಯಲ್ಲಿ ನರಸಿಂಹಯ್ಯ ಚಿಕಿತ್ಸೆ ಪಡೆದಿದ್ದ ದಾಖಲೆ ಹಾಗೂ ನರಸಿಂಹಯ್ಯ ಅವರ ಮತದಾರರ ಗುರುತಿನ ಚೀಟಿಯನ್ನು ಪಾಲಿಕೆ ನೀಡಿತ್ತು.

'ನಾನು ಈ ಪ್ರಮಾಣಪತ್ರ ನೀಡಿಲ್ಲ' ಎಂದು ಪಿಡಿಒ ಸ್ಪಷ್ಟಪಡಿಸಿದ್ದರು. 'ಆಸ್ಪತ್ರೆಯಲ್ಲಿ ನರಸಿಂಹಯ್ಯ ಚಿಕಿತ್ಸೆ ಪಡೆದಿಲ್ಲ' ಎಂದು ಅಶ್ವಿನಿ ಆಸ್ಪತ್ರೆ ತಿಳಿಸಿತ್ತು. ನಕಲಿ ದಾಖಲೆಗಳನ್ನು ಸೃಷ್ಟಿಸಿ ಮರಣ ಪ್ರಮಾಣಪತ್ರ ಪಡೆಯಲಾಗಿದೆ ಎಂದು ತಹಶೀಲ್ದಾರ್ ವರದಿ ಸಲ್ಲಿಸಿದ್ದರು.

ಮತದಾರರ ಗುರುತಿನ ಚೀಟಿಯೂ ನಕಲಿ

ಮರಣ ಪ್ರಮಾಣಪತ್ರಕ್ಕಾಗಿ ಅರ್ಜಿಯೊಂದಿಗೆ ನರಸಿಂಹಮೂರ್ತಿ ಅವರು ತಮ್ಮ (ಗುರುತಿನ ಚೀಟಿನ ಸಂಖ್ಯೆ 3906393) ಹಾಗೂ ತಂದೆಯ (ಗುರುತಿನ ಚೀಟಿನ ಸಂಖ್ಯೆ 3806783) ಮತದಾರರ ಗುರುತಿನ ಚೀಟಿಗಳನ್ನು ನೀಡಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿದಾಗ ಒಂದು ಗುರುತಿನ ಚೀಟಿ (ಸಂಖ್ಯೆ 3806783) ಅನಂತರಾಮ್ ಎಂಬುವರ ಪುತ್ರ ಮಂಜುನಾಥ ಎ. ಹಾಗೂ ಮತ್ತೊಂದು (ಸಂಖ್ಯೆ 3906393) ಸತ್ಯಪ್ರಕಾಶ್ ಎಂಬುವರ ಪತ್ನಿ ದೀಪಿಕಾ ಎಂಬುವರದ್ದು ಎಂದು ಗೊತ್ತಾಗಿದೆ.

ಪ್ರಜಾವಾಣಿ ವಿಶೇಷ

ಮಂಗಳವಾರ ಸಂಜೆಯಿಂದಲೇ ಬಸ್ ವಿರಳ • ಸರ್ಕಾರದ ಎಚ್ಚರಿಕೆಗೆ ಬಗ್ಗದ ಸಾರಿಗೆ ನೌಕರರು

ಮುಷ್ಕರ: ಓಡಾಟಕ್ಕೆ ಸಂಚಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರನೇ ವೇತನ ಆಯೋಗದ ಶಿಫಾರಸು ಅನ್ವಯ ಆಗಲೇಬೇಕು ಎಂದು ಸಾರಿಗೆ ನೌಕರರ ಕೂಟ ಪಟ್ಟು ಹಿಡಿದಿದ್ದರೆ, ಸದ್ಯಕ್ಕೆ ಈ ಬೇಡಿಕೆ ಈಡೇರಿಸಲು ಸಾಧ್ಯವೇ ಇಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಈ ಜಟಾಪಟಿಯಿಂದಾಗಿ ಓಡಾಟಕ್ಕೆ ಬಸ್ಸನ್ನೇ ನೆಚ್ಚಿಕೊಂಡಿರುವ ನಾಗರಿಕರು ಪರದಾಡಬೇಕಾದ ಸ್ಥಿತಿ ಎದುರಾಗುವ ಸಾಧ್ಯತೆ ಇದೆ.

'ನೌಕರರ 9 ಬೇಡಿಕೆಗಳಲ್ಲಿ 8 ಬೇಡಿಕೆಗಳನ್ನು ಈಡೇರಿಸಲಾಗಿದೆ. ಶೇ 8ರಷ್ಟು ವೇತನ ಹೆಚ್ಚಿಸಲು ನಿರ್ಧರಿಸಲಾಗಿದ್ದು, 6ನೇ ವೇತನ ಆಯೋಗದ ಶಿಫಾರಸು ಜಾರಿ ಸದ್ಯಕ್ಕೆ ಸಾಧ್ಯವೇ ಇಲ್ಲ. ಮತ್ತೆ ಸಂಧಾನದ ಪ್ರಶ್ನೆಯೇ ಇಲ್ಲ. ಮುಷ್ಕರ ನಡೆಸಿದರೆ ಎಸ್ಮಾ ಕಾಯ್ದೆ ಹೇರಲು ಹಿಂಜರಿಯುವುದಿಲ್ಲ' ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

'ಎಂಟು ಬೇಡಿಕೆಗಳ ಈಡೇರಿಕೆಯಿಂದ ಯಾವುದೇ ಉಪಯೋಗವಾಗಿಲ್ಲ. ಪ್ರಮುಖ ಬೇಡಿಕೆಯನ್ನೇ ಕೈಬಿಟ್ಟಿರುವ ಕಾರಣ ಮುಷ್ಕರಕ್ಕೆ ಕರೆ ನೀಡಲಾಗಿದೆ. ಎಸ್ಮಾ ಕಾಯ್ದೆಯಾದರೂ ಜಾರಿಯಾಗಲಿ, ಸರ್ಕಾರ ನಮ್ಮನ್ನು ಜೈಲಿಗೆ ತಳ್ಳಿದರೂ ಹೆದರುವುದಿಲ್ಲ. ಈ ಬೇಡಿಕೆ ಈಡೇರದೇ ಮುಷ್ಕರ ಕೈಬಿಡುವ ಪ್ರಶ್ನೆಯೇ ಇಲ್ಲ' ಎಂದು ನೌಕರರ ಕೂಟ ತಿರುಗೇಟು ನೀಡಿದೆ.

ಈ ಬೆಳವಣಿಗೆಯಿಂದಾಗಿ ಸರ್ಕಾರ ಮತ್ತು ನೌಕರರ ಮಧ್ಯೆ ಸಂಘರ್ಷದ ವಾತಾವರಣ ನಿರ್ಮಾಣವಾಗಿದೆ. ಅಧಿಕೃತವಾಗಿ ಮುಷ್ಕರ ಬುಧವಾರ ನಡೆಯಬೇಕಿದ್ದರೂ ಬೆಂಗಳೂರು ಸೇರಿ ರಾಜ್ಯದಲ್ಲೆಡೆ ಮಂಗಳವಾರ ಮಧ್ಯಾಹ್ನವೇ ಮುಷ್ಕರದ ಕಾವು ಏರತೊಡಗಿತ್ತು. ಇದರಿಂದಾಗಿ ಬಸ್ ಸಂಚಾರ ವಿರಳವಾಯಿತು.

11ನೇ ಪುಟ ನೋಡಿ

ನೌಕರರ ನಿಲುವುಗಳೇನು?

ಯಾವುದೇ ಕಾರಣಕ್ಕೂ ಮುಷ್ಕರದ ನಿರ್ಧಾರ ಬದಲಿಸುವುದಿಲ್ಲ ಎಂದು ಪಟ್ಟು ಹಿಡಿದಿರುವ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ಮೆರವಣಿಗೆ, ಧರಣಿ ನಡೆಸದೇ ಕರ್ತವ್ಯದಿಂದ ದೂರ ಇರಲು ನೌಕರರಿಗೆ ಕರೆ ನೀಡಿದೆ.

'ಆರನೇ ವೇತನ ಆಯೋಗದ ಶಿಫಾರಸುಗಳು ಸಾರಿಗೆ ನೌಕರರಿಗೂ ಅನ್ವಯಿಸುವವರೆಗೂ ಈ ಹೋರಾಟ ಕೈಬಿಡುವುದಿಲ್ಲ. ಸಾರ್ವಜನಿಕರಿಗೆ ಆಗುವ ತೊಂದರೆಗಳಿಗೆ ಸರ್ಕಾರವೇ ಹೊಣೆ' ಎಂದು ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.



ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ನಿಂತಿರುವ ಬಸ್‌ಗಳು –ಪ್ರಜಾವಾಣಿ ಚಿತ್ರ

11ನೇ ಪುಟ ನೋಡಿ

ಸರ್ಕಾರದ ಸಿದ್ಧತೆಗಳೇನು?

ಬೇಡಿಕೆ ಈಡೇರಿಕೆಯ ಬಗ್ಗೆ ತಲೆಕೆಡಿಸಿಕೊಳ್ಳದ ಸರ್ಕಾರ, ಪ್ರಯಾಣಿಕರಿಗೆ ಆಗಲಿರುವ ತೊಂದರೆ ತಪ್ಪಿಸಲು ಬೇಕಿರುವ ಕ್ರಮಗಳತ್ತ ಹೆಚ್ಚು ಗಮನ ಹರಿಸಿದೆ. ಮುಷ್ಕರದ ಸಂದರ್ಭದಲ್ಲಿ ಅನಗತ್ಯ ರಜೆಗೆ ಅವಕಾಶ ಇಲ್ಲ. ಕರ್ತವ್ಯಕ್ಕೆ ಹಾಜರಾಗದಿದ್ದರೆ ವೇತನ ಕಡಿತ ಮಾಡಲು ನಾಲ್ಕೂ ನಿಗಮಗಳು ನಿರ್ಧರಿಸಿವೆ.

11ನೇ ಪುಟ ನೋಡಿ

ನಮ್ಮ ಮಾತಿಗೆ ಬೆಲೆ ಕೊಟ್ಟು ಮುಷ್ಕರ ವಾಪಸ್ ಪಡೆಯುತ್ತಾರೆಯೇ ಕಾದು ನೋಡುತ್ತೇವೆ. ಕಠಿಣ ಕ್ರಮ ತೆಗೆದುಕೊಳ್ಳುವುದಕ್ಕೆ ದಾರಿ ಮಾಡಿಕೊಡಬೇಡಿ
ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಕೋಡಿಹಳ್ಳಿ ಚಂದ್ರಶೇಖರ್ ಅವರು ಅನವಶ್ಯಕವಾಗಿ ಸರ್ಕಾರ ಮತ್ತು ನೌಕರರ ಮಧ್ಯೆ ಗೊಂದಲ ಸೃಷ್ಟಿಸುವುದಕ್ಕೆ ಮುಂದಾಗಿದ್ದಾರೆ
ಲಕ್ಷ್ಮಣ ಸವದಿ
ಸಾರಿಗೆ ಸಚಿವ



ಪೂಜೆ ಕುಂಭಮೇಳದ ಅಂಗವಾಗಿ ಹರಿದ್ವಾರದ ಗಂಗಾ ನದಿದಡದ ಹರ್ ಕಿ ಪೌಡಿ ಘಾಟ್‌ನಲ್ಲಿ ಸಾಧುಗಳು ಮಂಗಳವಾರ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು – ಪಿಟಿಐ ಚಿತ್ರ

'ಸುಪ್ರೀಂ' ಮುಖ್ಯ ನ್ಯಾಯಮೂರ್ತಿಯಾಗಿ ಎನ್.ವಿ.ರಮಣ ನೇಮಕ



ನವದೆಹಲಿ: ಸುಪ್ರೀಂ ಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ಎನ್.ವಿ.ರಮಣ ಅವರನ್ನು ರಾಷ್ಟ್ರಪತಿ ರಾಮನಾಥ ಕೋವಿಂದ್ ನೇಮಿಸಿದ್ದಾರೆ. 3A

ಕೆಂಗೇರಿ ಮಾರ್ಗ: ಪರೀಕ್ಷಾರ್ಥ ಸಂಚಾರ ಆರಂಭ

ಬೆಂಗಳೂರು: ಮೆಟ್ರೊರೈಲಿನ ಸೇವೆಯ ನಿರೀಕ್ಷೆಯಲ್ಲಿದ್ದ ಕೆಂಗೇರಿ ಸುತ್ತ-ಮುತ್ತಲಿನ ಜನರಿಗೆ ಜೂನ್‌ನಲ್ಲಿ ಆ ಭಾಗ್ಯ ಲಭಿಸಲಿದೆ. 'ನಮ್ಮ ಮೆಟ್ರೊ' ಎರಡನೇ ಹಂತದ ಮೈಸೂರು ರಸ್ತೆ ವಿಸ್ತರಿತ ಮಾರ್ಗದಲ್ಲಿ ಮಂಗಳವಾರ ಮೆಟ್ರೊ ರೈಲಿನ ಪರೀಕ್ಷಾರ್ಥ ಸಂಚಾರ ನಡೆಸಲಾಯಿತು. 3A

ಒಳ ಪುಟಗಳು



ಎಸ್ಸೆಸ್ಸೆಲ್ಸಿ- ಪಿಯುಸಿ



ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-7

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಂದೇ ದಿನ ಲಕ್ಷಕ್ಕೂ ಹೆಚ್ಚು ಮಂದಿಗೆ ಕೋವಿಡ್ ಪರೀಕ್ಷೆ


6 ಸಾವಿರ ಹೊಸ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿದ್ದು, 24 ಗಂಟೆಗಳ ಅವಧಿಯಲ್ಲಿ 6,150 ಹೊಸ ಪ್ರಕರಣಗಳು ವರದಿಯಾಗಿವೆ.

ಸುಮಾರು ಐದೂವರೆ ತಿಂಗಳ ಹಿಂದೆ (ಅಕ್ಟೋಬರ್‌ನಲ್ಲಿ) ಈ ರೀತಿ ಒಂದೇ ದಿನದಲ್ಲಿ ಆರು ಸಾವಿರದ ಆಸು-ಪಾಸು ಪ್ರಕರಣಗಳು ವರದಿಯಾಗುತ್ತಿದ್ದವು. ಈ ವರ್ಷದಲ್ಲಿ 24 ತಾಸುಗಳ ಅವಧಿಯಲ್ಲಿ ಗರಿಷ್ಠ ಸಾವು (39) ಸಂಭವಿಸಿರುವುದೂ ಇದೇ ಮೊದಲು.

ಸೋಮವಾರಕ್ಕೆ ಹೋಲಿಸಿದರೆ ಮಂಗಳವಾರ ಪರೀಕ್ಷೆಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಳವಾಗದಿದ್ದರೂ ಹೊಸ ಪ್ರಕರಣಗಳು 871ರಷ್ಟು ಹೆಚ್ಚಾಗಿದೆ.



ತೀವ್ರ ನಿಗಾ ಘಟಕಕ್ಕೆ ದಾಖಲಾಗುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಏರುತ್ತಿದ್ದು, ಸದ್ಯ 351 ಮಂದಿ ಐಸಿಯುದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರಾಜಧಾನಿಯಲ್ಲಿ ಸೋಂಕು ಹರಡುತ್ತಿದ್ದು, ಹೊಸದಾಗಿ 4,266 ಮಂದಿಗೆ ಕೋವಿಡ್ ದೃಢಪಟ್ಟಿದೆ. 26 ಜನ ಸಾವಿಗೀಡಾಗುವ ಮೂಲಕ ಬೆಂಗಳೂರಿನಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 4,693ಕ್ಕೆ ಏರಿದೆ.

1.02 ಲಕ್ಷ ಪರೀಕ್ಷೆ: ರಾಜ್ಯದಲ್ಲಿ ಏ.6ರಂದು 1.02 ಲಕ್ಷ ಮಂದಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಇವರಲ್ಲಿ 9,168 ಮಂದಿಗೆ ಆ್ಯಂಟಿಜೆನ್ ಪರೀಕ್ಷೆ ಮಾಡಲಾಗಿದ್ದರೆ, 92,853 ಮಂದಿ ಆರ್‌ಟಿ ಪಿಸಿಆರ್ ಪರೀಕ್ಷೆಗೆ ಒಳಗಾಗಿದ್ದಾರೆ.

49 ಸಾವಿರ ಲಸಿಕೆ: 44ರಿಂದ 59 ವರ್ಷದೊಳಗಿನ 27,136 ಮಂದಿಗೆ, 60 ವರ್ಷ ಮೇಲ್ಪಟ್ಟ 19,280 ಮಂದಿಗೆ ಮಂಗಳವಾರ ಲಸಿಕೆ ಹಾಕಲಾಗಿದೆ. ಎರಡನೇ ಡೋಸ್ ಪಡೆದವರ ಸಂಖ್ಯೆಯೂ ಸೇರಿದಂತೆ ಒಟ್ಟಾರೆ 49,646 ಜನರು ಲಸಿಕೆ ಪಡೆದುಕೊಂಡಿದ್ದಾರೆ. ಈವರೆಗೆ 48 ಲಕ್ಷಕ್ಕೂ ಹೆಚ್ಚು ಜನರಿಗೆ ಲಸಿಕೆ ಹಾಕಲಾಗಿದೆ ಎಂದು ಆರೋಗ್ಯ ಇಲಾಖೆ ಹೇಳಿದೆ.

ಇನ್ನಷ್ಟು ಸುದ್ದಿಗಳು 3B

ಕೋವಿಡ್ ಏರುಗತಿ: 4 ವಾರ ನಿರ್ಣಾಯಕ

ನವದೆಹಲಿ (ಪಿಟಿಐ): 'ಕೋವಿಡ್–19 ಪರಿಸ್ಥಿತಿ ದೇಶದಲ್ಲಿ ಹದಗೆಡುತ್ತಿದ್ದು, ಸೋಂಕು ತ್ವರಿತಗತಿಯಲ್ಲಿ ಹರಡುತ್ತಿದೆ. ಮುಂದಿನ ನಾಲ್ಕು ವಾರಗಳ ಅವಧಿ ಗಂಭೀರ ಮತ್ತು ನಿರ್ಣಾಯಕವಾಗಿದೆ' ಎಂದು ಕೇಂದ್ರ ಸರ್ಕಾರ ಎಚ್ಚರಿಸಿದೆ. 6

ರಾಜ್ಯ ಕೋವಿಡ್ ಅಂಕಿ–ಅಂಶ

10,26,584 ಒಟ್ಟು ಸೋಂಕಿತರು ▲
(10,20,434 ನಿನ್ನೆಯ ವಿವರ)

45,107 ಸಕ್ರಿಯ ಪ್ರಕರಣಗಳು ▲

9,68,762 ಗುಣಮುಖರಾದವರು ▲

12,610 ಒಟ್ಟು ಸಾವು ▼

ದಿನದ ಏರಿಕೆ

ಹೊಸ ಪ್ರಕರಣ	6,150	▲
ಗುಣಮುಖ	3,487	▲
ಸಾವು	39	▲

351 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಕ್ಕರೆ ಕಾರ್ಖಾನೆ ಮಾಲೀಕನಿಗೆ ಹಂಪಿ ಕನ್ನಡ ವಿ.ವಿ. ನಾಡೋಜ ಗೌರವ


ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಜಮಖಂಡಿಯ 'ಪ್ರಭುಲಿಂಗೇಶ್ವರ ಶುಗರ್ಸ್' ಕಾರ್ಖಾನೆಯ ಮಾಲೀಕರಾದ ಜಗದೀಶ ಎಸ್. ಗುಡಗುಂಟಿ ಹಾಗೂ ಉಡುಪಿಯ ನೇತ್ರ ತಜ್ಞರಾದ ಡಾ.ಕೆ. ಕೃಷ್ಣಪ್ರಸಾದ್ ಅವರನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ ಪದವಿಗೆ ಆಯ್ಕೆ ಮಾಡಲಾಗಿದೆ.

ಜಗದೀಶ ಅವರು ವಿಜಯಪುರ ಜಿಲ್ಲೆ ಹೊನವಾಡ ಗ್ರಾಮದವರು. ಬಿಜೆಪಿಯೊಂದಿಗೆ ಗುರುತಿಸಿಕೊಂಡಿರುವ ಅವರು ಈ ಹಿಂದೆ ಜಮಖಂಡಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಪಕ್ಷದ ಟಿಕೆಟ್‌ಗೆ ಪ್ರಯತ್ನಿಸಿದ್ದರು. ಕೃಷ್ಣಪ್ರಸಾದ್ ಅವರು ಅನೇಕ ಉಚಿತ ಶಿಬಿರಗಳನ್ನು ಸಂಘಟಿಸಿ, ಕಣ್ಣು ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ.



ಜಗದೀಶ ಎಸ್. ಗುಡಗುಂಟಿ



ಡಾ.ಕೆ.ಕೃಷ್ಣಪ್ರಸಾದ್

'ಜಗದೀಶ ಅವರು ಅನೇಕ ಸಕ್ಕರೆ ಕಾರ್ಖಾನೆಗಳನ್ನು ಪುನರುತ್ಥಾನ ಮಾಡಿ, ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಕೃಷ್ಣಪ್ರಸಾದ್ ಅವರು ಬುಡಕಟ್ಟು ಜನ ವಾಸಿಸುವ ಪ್ರದೇಶಗಳು ಸೇರಿದಂತೆ ಹಲವೆಡೆ ಶಿಬಿರಗಳನ್ನು ನಡೆಸಿ ಸಾವಿರಾರು ಜನರಿಗೆ ದೃಷ್ಟಿ ಭಾಗ್ಯ ಕಲ್ಪಿಸಿದ್ದಾರೆ. ನಾಡೋಜ ಸಮಿತಿಯು ಮೂವರ ಹೆಸರನ್ನು ರಾಜ್ಯಪಾಲರಿಗೆ ಶಿಫಾರಸು ಮಾಡಿತು. ಈ ಪೈಕಿ ರಾಜ್ಯಪಾಲರು ಇಬ್ಬರ ಹೆಸರಿಗೆ ಅಂಕಿತ ಹಾಕಿದ್ದಾರೆ. ಕನ್ನಡ ನಾಡು, ನುಡಿಗೆ ಸಂಬಂಧಿಸಿದಂತೆ ಯಾರಿಗೆ ಬೇಕಾದರೂ ನಾಡೋಜ ಕೊಡಬಹುದು. ಈ ಹಿಂದೆಯೂ ಸಾಹಿತ್ಯ ಹೊರತುಪಡಿಸಿ ಅನ್ಯ ಕ್ಷೇತ್ರದವರಿಗೆ ನಾಡೋಜ ನೀಡಿರುವ ಸಾಕಷ್ಟು ನಿದರ್ಶನಗಳಿವೆ' ಎಂದು ಕುಲಪತಿ ಪ್ರೊ. ಸ.ಚಿ. ರಮೇಶ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಏ.9ರಂದು ಸಂಜೆ 5.30ಕ್ಕೆ ವಿಶ್ವವಿದ್ಯಾಲಯದಲ್ಲಿ ನಡೆಯಲಿರುವ ನುಡಿಹಬ್ಬದಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಅವರು ನಾಡೋಜ ಪ್ರದಾನ ಮಾಡುವರು. ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಹತ್ತು ಜನರಿಗೆ ಡಿ.ಲಿಟ್ ಪದವಿ ಸೇರಿದಂತೆ ಎಂ.ಎ. ಪಿಎಚ್‌.ಡಿ., ಡಿಪ್ಲೊಮಾ ಕೋರ್ಸ್ ಮುಗಿಸಿರುವ ಒಟ್ಟು 365 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡುವರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪದ್ಮಾ ಶೇಖರ್ ಘಟಿಕೋತ್ಸವ ಭಾಷಣ ಮಾಡುವರು. ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಸ.ಚಿ.ರಮೇಶ ಉಪಸ್ಥಿತರಿರುವರು.

ಬೆಂಗಳೂರು ವಿ.ವಿ: ಭೌತಿಕ ತರಗತಿ ಸ್ಥಗಿತ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳನ್ನು ಹೊರತು ಪಡಿಸಿ ಉಳಿದ ಎಲ್ಲರಿಗೂ ಭೌತಿಕ ತರಗತಿಗಳನ್ನು ಏ.20ರವರೆಗೆ ಸ್ಥಗಿತಗೊಳಿಸಲಾಗಿದೆ.

ವಿಶ್ವವಿದ್ಯಾಲಯದ ವಸತಿ ನಿಲಯಗಳನ್ನೂ ಈ ಅವಧಿಯವರೆಗೆ ಸ್ಥಗಿತಗೊಳಿಸಲಾಗುವುದು. ಬಾಕಿ ಉಳಿದಿರುವ ಪಠ್ಯಕ್ರಮಗಳನ್ನು ಆನ್‌ಲೈನ್ ಮೂಲಕ ಬೋಧಿಸಲಾಗುವುದು ಎಂದು ವಿಶ್ವವಿದ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಗೋವಾಕ್ಕೆ ವಿದ್ಯುತ್ ಮಾರ್ಗ: ಅನುಮತಿ ನೀಡದಂತೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವಾ ರಾಜ್ಯಕ್ಕೆ ಹೆಚ್ಚುವರಿ ವಿದ್ಯುತ್ ಒದಗಿಸಲು ಪಶ್ಚಿಮ ಘಟ್ಟದ ಮೂಲಕ ಹಾದು ಹೋಗಲಿರುವ ವಿದ್ಯುತ್ ಮಾರ್ಗಕ್ಕೆ ಅನುಮತಿ ನೀಡಬಾರದು' ಎಂದು ಶಾಸಕಿ ಸೌಮ್ಯಾ ರೆಡ್ಡಿ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.


ಸೌಮ್ಯಾ ರೆಡ್ಡಿ

ಧಾರವಾಡ ಜಿಲ್ಲೆಯ ನರೇಂದ್ರದಿಂದ ಗೋವಾಕ್ಕೆ ವಿದ್ಯುತ್ ಮಾರ್ಗ ನಿರ್ಮಿಸಲು ಗೋವಾ ತಮ್ನಾರ್ ಟ್ರಾನ್ಸ್‌ಮಿಷನ್ ಪ್ರಾಜೆಕ್ಟ್ ಲಿಮಿಟೆಡ್ ಎಂಬ ಬಳಕೆದಾರ ಸಂಸ್ಥೆ ಗೋವಾ ಮತ್ತು ಕರ್ನಾಟಕದ ಅರಣ್ಯ ಭೂಮಿ ಪರಿವರ್ತನೆಗೆ ಅರ್ಜಿ ಸಲ್ಲಿಸಿದೆ.

'ಧಾರವಾಡ ಜಿಲ್ಲೆಯಲ್ಲಿ ಅಂದಾಜು 4.7 ಹೆಕ್ಟೇರ್, ಬೆಳಗಾವಿ ಜಿಲ್ಲೆಯಲ್ಲಿ 101 ಹೆಕ್ಟೇರ್, ಉತ್ತರ ಕನ್ನಡ ಜಿಲ್ಲೆಯಲ್ಲಿ 70 ಹೆಕ್ಟೇರ್ ಸೇರಿ 177 ಹೆಕ್ಟೇರ್ ಅರಣ್ಯ ಪ್ರದೇಶ ಪರಿವರ್ತನೆಗೆ ಕೋರಲಾಗಿದೆ. ಬಹುಪಾಲು ಜಾಗ ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿದೆ. ದಾಂಡೇಲಿಯ ಅನೆಧಾಮ, ಭೀಮಗಢ ಅಭಯಾರಣ್ಯ, ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ ಅಭಯಾರಣ್ಯದ ಮೂಲಕ ಈ ಮಾರ್ಗ ಹಾದು ಹೋಗಲಿದೆ. ಆನೆ, ಹುಲಿ, ಚಿರತೆ, ಕೆನ್ನಾಯಿ, ಕಾಳಿಂಗ ಸರ್ಪ, ಮಂಗಟ್ಟೆ (ಹಾರ್ನ್‌ಬಿಲ್) ಸೇರಿ ಅಳಿವಿನಂಚಿನಲ್ಲಿರುವ ಇನ್ನೂ ಅನೇಕ ವನ್ಯಜೀವಿಗಳ ಆಶ್ರಯ ತಾಣ ಇದಾಗಿದೆ' ಎಂದು ಅವರು ಹೇಳಿದ್ದಾರೆ.

'ಅರಣ್ಯ ಭೂಮಿ ಪರಿವರ್ತನೆಗೆ ಸರ್ಕಾರ ಅವಕಾಶ ನೀಡಿದರೆ 60 ಸಾವಿರಕ್ಕೂ ಹೆಚ್ಚು ಮರಗಳ ಹನನವಾಗಲಿದೆ. ಅರಣ್ಯ ನಾಶವಾಗುವ ಕಾರಣಕ್ಕೆ ಗೋವಾ ರಾಜ್ಯದಲ್ಲೇ ಈ ಯೋಜನೆಗೆ ವಿರೋಧ ವ್ಯಕ್ತವಾಗುತ್ತಿದೆ. ಇನ್ನೂ ಪರಿಶೀಲನೆ ಹಂತದಲ್ಲಿರುವ ಪ್ರಸ್ತಾವನೆಯನ್ನು ಸರ್ಕಾರ ತಿರಸ್ಕರಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

ನಗರದಲ್ಲಿ ಇಂದು

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬ ಹಾಗೂ ವಿಶ್ವ ಆರೋಗ್ಯ ದಿನಾಚರಣೆಯ ಅಂಗವಾಗಿ ವಾಕಥಾನ್ (ಬೆಳಿಗ್ಗೆ 8): ಉದ್ಘಾಟನೆ- ಆರೋಗ್ಯ ಸಚಿವ ಕೆ.ಸುಧಾಕರ್, ಸ್ಥಳ-ವಿಧಾನ ಸೌಧದ ಭವ್ಯ ಮೆಟ್ಟಿಲುಗಳ ಮುಂಭಾಗ, ಬೆಳಿಗ್ಗೆ 11-ವಿಶ್ವವಿದ್ಯಾಲಯದ ನವೀಕೃತ ಕಟ್ಟಡ ಉದ್ಘಾಟನೆ, 12.15ಕ್ಕೆ- ವಿಶೇಷ ಅಂಚೆ ಲಕೋಟೆ ಬಿಡುಗಡೆ- ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಶಾರದಾ ಸಂಪತ್, ಅತಿಥಿಗಳು-ಬೆಂಗಳೂರು ವಿಭಾಗದ ಪೋಸ್ಟ್ ಮಾಸ್ಟರ್ ಜನರಲ್ ಶ್ಯೂಲಿ ಬರ್ಮನ್, ಅಧ್ಯಕ್ಷತೆ- ಕುಲಪತಿ ಎಸ್.ಸಚ್ಚಿದಾನಂದ, ಮಧ್ಯಾಹ್ನ 1ಕ್ಕೆ-ವಿಶ್ವ ಆರೋಗ್ಯ ದಿನ, ಆಯೋಜನೆ, ಸ್ಥಳ-ಧನ್ವಂತರಿ ಸಭಾಂಗಣ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ.


ಶಾರದಾ ಸಂಪತ್

'ನೀರಿನ ಸಂರಕ್ಷಣೆಯ ಪುನರ್ ಪರಿಚಯ' ಕುರಿತು ವೆಬಿನಾರ್: ಮಾತನಾಡುವವರು-ಜಲತಜ್ಞ ಎಸ್.ವಿಶ್ವನಾಥ್, ಫ್ರೆಂಡ್ಸ್ ಆಫ್ ಲೇಕ್ಸ್ ಸಂಸ್ಥೆಯ ವಿ.ರಾಮಪ್ರಸಾದ್, ಆಯೋಜನೆ-ನಮ್ಮ ಬೆಂಗಳೂರು ಪ್ರತಿಷ್ಠಾನ, ಸಂಜೆ 7




ರಸ್ತೆ ದಾಟುವಾಗ ಆಯತಪ್ಪಿ ಬಿದ್ದ ಬೈಕ್ ಸವಾರನನ್ನು ರಕ್ಷಿಸಿದ ಸಾರ್ವಜನಿಕರು (ಎಡ ಚಿತ್ರ), ರಸ್ತೆ ದಾಟಲು ಪರದಾಡುತ್ತಿರುವ ಬೈಕ್ ಸವಾರರು ಹಾಗೂ ಜನರು –ಪ್ರಜಾವಾಣಿ ಚಿತ್ರಗಳು

ಕುಂಟುತ್ತಾ ಸಾಗಿದೆ 'ಸ್ಮಾರ್ಟ್‌ಸಿಟಿ' ಕಾಮಗಾರಿ • ರಸ್ತೆ ದಾಟುವಾಗ ಜಾರಿ ಬೀಳುತ್ತಿರುವ ಜನ

ಅವೆನ್ಯೂ ರಸ್ತೆ: ಜನರ ಸಂಚಾರಕ್ಕೆ ಸಂಚಕಾರ

• ಮನೋಹರ್ ಎಂ.

ಬೆಂಗಳೂರು: ಅವೆನ್ಯೂ ರಸ್ತೆಯಲ್ಲಿ ಕುಂಟುತ್ತಾ ಸಾಗುತ್ತಿರುವ 'ಸ್ಮಾರ್ಟ್ ಸಿಟಿ' ಹಾಗೂ ಟೆಂಡರ್‌ಶ್ಯೂರ್ ಕಾಮಗಾರಿಗಳಿಂದ ಜನರ ಸಂಚಾರಕ್ಕೆ ಸಂಚಕಾರ ಎದುರಾಗಿದೆ. ಅಗೆದು ಹಾಗೆಯೇ ಬಿಟ್ಟಿರುವ ಈ ರಸ್ತೆಯಲ್ಲಿ, ದಾರಿ ತೋಚದ ಪಾದಚಾರಿಗಳು ಹಳ್ಳ ಹಾಗೂ ಗುಂಡಿಗಳನ್ನು ದಾಟುತ್ತಾ ಮುಂದಡಿ ಇಡಬೇಕಾಗಿದೆ. ದ್ವಿಚಕ್ರ ವಾಹನ ಸವಾರರು ಬಿದ್ದು, ಎದ್ದು ಸಾಗಬೇಕಾದ ಸ್ಥಿತಿ ಇದೆ.

ಅವೆನ್ಯೂ ರಸ್ತೆಯ ಕಾಮತ್ ಹೋಟೆಲ್‌ನಿಂದ ಶುರುವಾಗಿ ಚಿಕ್ಕಪೇಟೆಯತ್ತ ಸಾಗುವ ಮಾರ್ಗದಲ್ಲಿ ಅಂದಾಜು 300 ಮೀಟರ್‌ವರೆಗೆ 'ಸ್ಮಾರ್ಟ್‌ಸಿಟಿ' ಕಾಮಗಾರಿಗಳು ಪ್ರಗತಿಯಲ್ಲಿವೆ. ಹೆಚ್ಚು ಜನ ಸಂಚಾರವಿರುವ ಈ ರಸ್ತೆಯಲ್ಲಿ ಕಾಮಗಾರಿಯ ಆಮೆವೇಗ ಜನರನ್ನು ಹೈರಾಣಾಗಿಸಿದೆ.

ಕೆ.ಆರ್. ಮಾರುಕಟ್ಟೆ ವೃತ್ತದಿಂದ ಮೈಸೂರು ಬ್ಯಾಂಕ್ ವೃತ್ತ ಸಂಪರ್ಕಿಸುವ ಈ ರಸ್ತೆಯಲ್ಲಿ ಸದಾ ಜನಸಂದಣಿ ಇರುತ್ತದೆ. ಇಕ್ಕಟ್ಟಾದ ರಸ್ತೆಯಲ್ಲಿ ಏಕಮುಖ ವಾಹನ ಸಂಚಾರವಿದ್ದರೂ ಹಲವು ಅಡ್ಡರಸ್ತೆಗಳಿರುವುದರಿಂದ ವಾಹನ ದಟ್ಟಣೆಯೂ ಅಧಿಕ.

ಪ್ರಜಾವಾಣಿ ವಿಶೇಷ

ವ್ಯಾಪಾರ ಹಾಗೂ ಖರೀದಿ ಉದ್ದೇಶ ಗಳಿಗೆ ಈ ರಸ್ತೆಗೆ ಬರುವ ವಾಹನಗಳಿಗೆ ಜಾಗವಿಲ್ಲ. ಕಾಮಗಾರಿಗಾಗಿ ರಸ್ತೆಯಲ್ಲಿ ಆಳೆತ್ತರದ ಗುಂಡಿಗಳನ್ನು ಅಗೆದಿರುವುದರಿಂದ ವಾಹನದಲ್ಲಿ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಹಳ್ಳಗಳನ್ನು ದಾಟುವಾಗ ಹಲವರು ತಮ್ಮ ವಾಹನದ ಸಮೇತ ಉರುಳುವ ಘಟನೆಗಳು ಪ್ರತಿನಿತ್ಯ ಸಂಭವಿಸುತ್ತಿವೆ.

'ಸಾರ್ವಜನಿಕರ ಅನುಕೂಲಕ್ಕೆ ನಡೆಯುತ್ತಿರುವ ಕಾಮಗಾರಿಗಳು ಸಾರ್ವಜನಿಕರಿಗೇ ಕಿರಿಕಿರಿ ಉಂಟು ಮಾಡುತ್ತಿವೆ. ಈ ಚಿಕ್ಕ ರಸ್ತೆಯಲ್ಲಿ ಇಂತಹ ದೊಡ್ಡ ಕಾಮಗಾರಿಗಳನ್ನು ಆರಂಭಿಸಿದ್ದಾರೆ. ಆದರೆ, ಇಲ್ಲಿಗೆ ಬರುವ ಜನರ ಪ್ರಾಣಕ್ಕೆ ರಕ್ಷಣೆ ನೀಡುವ ಸುರಕ್ಷತಾ ಕ್ರಮಗಳನ್ನು ಇಲ್ಲಿ ಕೈಗೊಂಡಿಲ್ಲ' ಎನ್ನುವುದು ಅವೆನ್ಯೂ ರಸ್ತೆಯಲ್ಲಿರುವ ವ್ಯಾಪಾರಿಗಳ ಆರೋಪ.

'ಔಷಧ ಖರೀದಿಗೆ ಈ ರಸ್ತೆಯಲ್ಲಿರುವ ಮೆಡಿಕಲ್ ಅಂಗಡಿಗೆ ಬರುತ್ತೇನೆ. ಈಗ ಅಂಗಡಿಗೆ ಹೋಗಲು ಜಾಗವಿಲ್ಲ. ವಯಸ್ಸಾದವರು ಗುಂಡಿಗಳನ್ನು ದಾಟಿ ಸಾಗುವುದಾದರೂ ಹೇಗೆ. ವೃದ್ಧರ ಜೀವಕ್ಕೆ ಅಪಾಯವಾದರೆ ಹೊಣೆ ಯಾರು' ಎಂದು ಸ್ಥಳೀಯ ನಿವಾಸಿ ಗೋಪಾಲ್ ಪ್ರಶ್ನಿಸಿದರು.

'ಅನಿವಾರ್ಯ ಇರುವ ವಸ್ತುಗಳ ಖರೀದಿಗೆ ಜನ ಇಲ್ಲಿಗೆ ಬಂದೇ ಬರುತ್ತಾರೆ. ಅವರ ಸಂಚಾರಕ್ಕೆ ಯಾವುದೇ ಅನುಕೂಲ ಮಾಡಿಲ್ಲ. ವಾಹನಗಳು ಎರಡೂ ಕಡೆಯಿಂದ ಬಂದು ದಟ್ಟಣೆ ಉಂಟಾಗುತ್ತಿದೆ. ರಸ್ತೆ ಮಧ್ಯದಲ್ಲಿ ಗುಂಡಿಗಳು ಹಾಗೂ ಕಬ್ಬಿಣದ ಸಲಕರಣೆಗಳು ಅನಾಹುತಕ್ಕೆ ಆಹ್ವಾನ ನೀಡುವಂತಿವೆ. ಇಲ್ಲಿ ಯಾವುದೇ ರಕ್ಷಣಾ ಕ್ರಮಗಳನ್ನು ತೆಗೆದು ಕೊಂಡಿಲ್ಲ' ಎಂದು ವಿವರಿಸಿದರು.

ವ್ಯಾಪಾರಕ್ಕೂ ಹೊಡೆತ: 'ಇದು ವ್ಯಾಪಾರಕ್ಕೆ ಹೆಸರುವಾಸಿಯಾದ ರಸ್ತೆ. ದಿನಕ್ಕೆ ಲಕ್ಷಾಂತರ ಗ್ರಾಹಕರು ಇಲ್ಲಿಗೆ ಬಂದು ಹೋಗುತ್ತಾರೆ. ಕಾಮಗಾರಿಗೆ ನಮ್ಮ ವಿರೋಧವಿಲ್ಲ. ಆದರೆ, ಕಾಮಗಾರಿ ಹೆಸರಿನಲ್ಲಿ ಜನರಿಗೆ ತೊಂದರೆಯಾಗಬಾರದು. ಕಾಮಗಾರಿ ನಡೆಯುವಾಗ ನಮ್ಮ ಹೋಟೆಲ್‌ಗೂ ಹಾನಿಯಾಗಿದೆ' ಎಂದು ಇಲ್ಲಿನ ಕಾಮತ್ ಹೋಟೆಲ್‌ನ ಮಾಲೀಕ ವೀರೇಂದ್ರ ಕಾಮತ್ ದೂರಿದರು.

'ಕೊರೊನಾದಿಂದ ಈಗಾಗಲೇ ಹೋಟೆಲ್ ಉದ್ಯಮ ನೆಲಕಚ್ಚಿದೆ. ಈಗ ತಾನೇ ಹೋಟೆಲ್‌ಗೆ ನಿತ್ಯ ಸ್ವಲ್ಪ ಮಟ್ಟಿಗೆ ಗ್ರಾಹಕರು ಬರಲಾರಂಭಿಸಿದ್ದರು. ಕಾಮಗಾರಿ ನಡೆಯುತ್ತಿರುವುದರಿಂದ ಗ್ರಾಹಕರ ಸಂಖ್ಯೆ ಮತ್ತೆ ಕಡಿಮೆಯಾಗಿದೆ' ಎಂದು ತಿಳಿಸಿದರು.

'ವೃದ್ಧರು ಜಾರುತ್ತಾರೆ, ಬೈಕ್ ಸವಾರರು ಬೀಳುತ್ತಾರೆ'

'ಅಂಗಡಿಗಳಿಗೆ ಗ್ರಾಹಕರು ತೆರಳಲು ಜಾಗವಿಲ್ಲದಂತೆ ಗುಂಡಿಗಳನ್ನು ತೋಡಿದ್ದಾರೆ. ಒಳರಸ್ತೆಗಳಲ್ಲಿ ವಾಸವಿರುವ ನಿವಾಸಿಗಳ ಸಂಚಾರಕ್ಕೆ ಕಷ್ಟವಾಗಿದೆ. ಅಂಗಡಿಗಳಿಗೆ ಬರುವ ವೃದ್ಧರು ಗುಂಡಿ ದಾಟುವ ಸಮಯದಲ್ಲಿ ಕಾಲು ಜಾರಿ ಬೀಳುತ್ತಾರೆ. ಬೈಕ್ ಸವಾರರು ಸ್ಕಿಡ್ ಆಗಿ ವಾಹನದೊಂದಿಗೆ ಉರುಳುತ್ತಾರೆ. ಇಂತಹ ಘಟನೆಗಳು ಪ್ರತಿನಿತ್ಯ ನಡೆಯುತ್ತಿವೆ' ಎಂದು ಅವೆನ್ಯೂ ರಸ್ತೆಯ ಶಾಂತಿ ಮೆಡಿಕಲ್ಸ್‌ನ ವಿವೇಕ್ ವಿವರಿಸಿದರು.

'ರಸ್ತೆಯ ಎರಡೂ ಬದಿ ವಿವಿಧ ವ್ಯಾಪಾರಿ ಮಳಿಗೆಗಳಿವೆ. ಕಾಮಗಾರಿಗಳು ಸ್ವಾಗತಾರ್ಹ. ಅವುಗಳಿಗೆ ನೀಡುವ ಆದ್ಯತೆಯನ್ನು ಸಾರ್ವಜನಿಕರ ಸುರಕ್ಷತೆಗೂ ಕೊಡಬೇಕು. ಸ್ಮಾರ್ಟ್ ಸಿಟಿ ಯೋಜನೆಯು ಜನರಿಗೆ ಭದ್ರತೆ ನೀಡುವಂತಹ ಸ್ಮಾರ್ಟ್ ಕ್ರಮಗಳನ್ನು ಅನುಸರಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

6 ತಿಂಗಳಲ್ಲಿ ಕಾಮಗಾರಿ ಪೂರ್ಣ: ಚೋಳನ್



'ಅವೆನ್ಯೂ ರಸ್ತೆಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಮೊದಲ ಹಂತದ ಕಾಮಗಾರಿಗಳು ಪ್ರಗತಿಯಲ್ಲಿವೆ. ರಸ್ತೆಯ ಒಂದು ಬದಿಯ ಕೆಲಸ ಪೂರ್ಣಗೊಂಡಿದೆ. ಮುಂದಿನ ಆರು ತಿಂಗಳಿನಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ ಇದೆ' ಎಂದು ಬೆಂಗಳೂರು 'ಸ್ಮಾರ್ಟ್‌ಸಿಟಿ' ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಪಿ.ರಾಜೇಂದ್ರ ಚೋಳನ್ 'ಪ್ರಜಾವಾಣಿ'ಗೆ ತಿಳಿಸಿದರು.

'ಅವೆನ್ಯೂ ರಸ್ತೆಯ ವ್ಯಾಪಾರಿಗಳ ಜೊತೆಗೆ ಚರ್ಚಿಸಿದ ಬಳಿಕವೇ ಅವರ ಸಹಕಾರ ಪಡೆದು, ಕಾಮಗಾರಿ ಆರಂಭಿಸಲಾಗಿದೆ. ಪಾಲಿಕೆ, ಜಲಮಂಡಳಿ, ಬೆಸ್ಕಾಂಗಳ ಜಂಟಿ ಆಶ್ರಯದಲ್ಲಿ ಒಳಚರಂಡಿ, ಕೊಳಚೆ ನೀರು ಮಾರ್ಗ, ಒಎಫ್‌ಸಿ ಕೇಬಲ್ ಅಳವಡಿಕೆ ಕಾಮಗಾರಿಗಳು ನಡೆಯುತ್ತಿದ್ದು, ಸಾರ್ವಜನಿಕರಿಗೆ ತೊಂದರೆ ಆಗದಂತೆ ಕೆಲಸಗಳು ಮುಂದುವರಿದಿವೆ' ಎಂದು ಅವರು ತಿಳಿಸಿದರು.

ಬಿಜೆಪಿ ಸಂಸ್ಥಾಪನಾ ದಿನಾಚರಣೆ

'ಅಂಬಾನಿ, ಅದಾನಿ ನಮ್ಮ ಆದ್ಯತೆಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡವರ ಕಲ್ಯಾಣಕ್ಕೆ ಪೂರಕ ಯೋಜನೆಗಳು ಮೋದಿ ಸರ್ಕಾರದ ಆದ್ಯತೆಯೇ ಹೊರತು ಅದಾನಿ, ಅಂಬಾನಿ ಕೇಂದ್ರಿತ ಯೋಜನೆಗಳಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಜಗನ್ನಾಥ ಭವನದಲ್ಲಿ ನಡೆದ ಪಕ್ಷದ 41 ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೃಷಿ ಸಮ್ಮಾನ್, ಜನಧನ್, ಉಜ್ವಲಾ ಮತ್ತು ಆಯುಷ್ಮಾನ್ ಮುಂತಾದ ಜನಪರ ಯೋಜನೆಗಳ ಮೂಲಕ ಕಡು ಬಡ ಕುಟುಂಬಗಳು ಸ್ವಾವಲಂಬಿಗಳಾಗಿಸುವ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಬಿಜೆಪಿ ವಿಶ್ವದ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಹೊರ ಹೊಮ್ಮಿದೆ. ಅತಿ ಹೆಚ್ಚು ಸಂಸದರು, ಗರಿಷ್ಠ ಕಾರ್ಯಕರ್ತರು, ಅತಿ ಹೆಚ್ಚು ಶಾಸಕರು, ಅತಿ ಹೆಚ್ಚು ಸಂಖ್ಯೆಯ ಪರಿಶಿಷ್ಟ ಜಾತಿ, ಪಂಗಡಗಳ ಹಾಗೂ ಮಹಿಳಾ ಶಾಸಕರನ್ನು ಹೊಂದಿರುವ ಪಕ್ಷವಾಗಿ ಬಿಜೆಪಿ ಬೆಳೆದಿದೆ ಎಂದರು.

1951 ರಲ್ಲಿ ಜನಸಂಘ ಆರಂಭಗೊಂಡಿತು. 1980 ರಲ್ಲಿ ಮುಂಬೈ ಮಹಾಧಿವೇಶನದಲ್ಲಿ ಬಿಜೆಪಿ ಸ್ಥಾಪನೆಗೊಂಡಿತು. ಆರಂಭಿಕ ದಿನಗಳಲ್ಲಿ ಕನಿಷ್ಠ ಸ್ಥಾನ ಪಡೆದರೂ ಈಗ ಪಕ್ಷವು ಅತಿ ದೊಡ್ಡದಾಗಿ ಬೆಳೆದು ನಿಂತಿದೆ ಎಂದು ರವಿ ವಿವರಿಸಿದರು.



ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಬಿಜೆಪಿ ಸಂಸ್ಥಾಪನಾ ದಿನದ ಪ್ರಯುಕ್ತ ಶ್ಯಾಮಪ್ರಸಾದ್ ಮುಖರ್ಜಿ ಮತ್ತು ಪಂಡಿತ್ ದೀನದಯಾಳ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ವೈದ್ಯಕೀಯ ಸಂಸ್ಥೆ ನವೀಕರಣಕ್ಕೆ ಷರತ್ತು ಸಡಿಲ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ ಮತ್ತು ನವೀಕರಣಕ್ಕೆ ವ್ಯಾಪಾರ ಪರವಾನಗಿ (ಟ್ರೇಡ್ ಲೈಸೆನ್ಸ್) ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ಕಡ್ಡಾಯ ಎಂಬ ಷರತ್ತು ಸಡಿಲಗೊಳಿಸಿರುವ ಸರ್ಕಾರದ ಸುತ್ತೋಲೆ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಅಲ್ಲಿಕೆಯಾಗಿದೆ.

ಭಾರತ್ ಯುವಜನ ಸೇನೆ ಸಂಸ್ಥಾಪಕ ಅಧ್ಯಕ್ಷ ರಾಮಾನಂದ್ ಸಾಗರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ರಾಜ್ಯ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರಿಗೆ ನೋಟಿಸ್ ನೀಡಲು ಆದೇಶಿಸಿದೆ.

'ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ಕೆಪಿಎಂಇ) ಕಾಯ್ದೆ -2007ರಲ್ಲಿ ಸೂಚಿಸಿರುವ ನಿಯಮಗಳನ್ನು ಸಡಿಲಗೊಳಿಸಿ 2020ರ ಆಗಸ್ಟ್ 17ರಂದು ಸುತ್ತೋಲೆ ಹೊರಡಿಸಲಾಗಿದೆ. ಖಾಸಗಿ ವೈದ್ಯಕೀಯ ಸಂಸ್ಥೆಗಳ ಸಂಘಗಳಿಂದ ಪಡೆದ ಸಲಹೆಗಳನ್ನು ಆಧರಿಸಿ ಈ ಸುತ್ತೋಲೆ ಹೊರಡಿಸಲಾಗಿದೆ. ಇದರಿಂದ ಸರ್ಕಾರಕ್ಕೆ ಬರಬೇಕಾದ ವರಮಾನ ಖೋತಾ ಆಗಲಿದೆ. ಅಲ್ಲದೇ, ಕಾಯ್ದೆಯ ಮೂಲ ಉದ್ದೇಶಕ್ಕೆ ವಿರುದ್ಧವಾಗಿದೆ' ಎಂದು ಅರ್ಜಿದಾರರು ತಿಳಿಸಿದ್ದಾರೆ.

ವಿಚಾರಣೆಯನ್ನು ಪೀಠ ಜೂನ್ 7ಕ್ಕೆ ಮುಂದೂಡಿತು.

ಸಾರಿಗೆ ಮುಷ್ಕರ ಬೇಡ: ಮನವಿ

ಬೆಂಗಳೂರು: 'ಕೋವಿಡ್ ಎರಡನೇ ಅಲೆ ಶುರುವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸಾರಿಗೆ ನೌಕರರು ಮುಷ್ಕರ ಆರಂಭಿಸಿದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಬಹುದು. ಸಾರಿಗೆ ಸೇವೆಯನ್ನೇ ನಂಬಿಕೊಂಡಿರುವ ಶುಶ್ರೂಷಕಿಯರು, ಲ್ಯಾಬ್ ಟೆಕ್ನಿಷಿಯನ್‌ಗಳು ಹಾಗೂ ಸ್ವಚ್ಛತಾ ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಬಹುದು. ಇದನ್ನು ಗಮನದಲ್ಲಿಟ್ಟುಕೊಂಡು ನೌಕರರು ಮುಷ್ಕರ ಕೈಬಿಡಬೇಕು' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘವು ಮನವಿ ಮಾಡಿದೆ.

'ರೈತರು, ಹೋಟೆಲ್ ಕಾರ್ಮಿಕರು, ಬೀದಿ ಬದಿ ವ್ಯಾಪಾರಿ ಹಾಗೂ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುವವರೂ ಸಾರಿಗೆ ವ್ಯವಸ್ಥೆಯ ಮೇಲೆ ಅವಲಂಬಿತರಾಗಿದ್ದಾರೆ. ಸಾರಿಗೆ ಸೇವೆಯಲ್ಲಿ ವ್ಯತ್ಯಯವಾದರೆ ಇವರೆಲ್ಲಾ ತೊಂದರೆ ಅನುಭವಿಸಬೇಕಾಗುತ್ತದೆ. ಹೀಗಾಗಿ ಇನ್ನು ಆರು ತಿಂಗಳು ಪ್ರತಿಭಟನೆ ಅಥವಾ ಮುಷ್ಕರ ನಡೆಸದಿರುವುದು ಒಳಿತು' ಎಂದು ಪ್ರಕಟಣೆ ತಿಳಿಸಿದೆ.

ಮಧ್ಯಾಹ್ನದ ನಂತರದ ಪಾಳಿಗೆ ಗೈರಾದ ಸಿಬ್ಬಂದಿ

ಸಾರಿಗೆ ಮುಷ್ಕರ: ಪರದಾಡಿದ ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರದ ಮುನ್ನ ದಿನವೇ ನಗರದಲ್ಲಿ ಬಸ್ ಸಂಚಾರ ವಿರಳವಾಗಿ ಪ್ರಯಾಣಿಕರು ಪರದಾಡಿದರು.

ಕೆಂಪೇಗೌಡ ಬಸ್ ನಿಲ್ದಾಣ, ಶಾಂತಿನಗರ, ಬನಶಂಕರಿ, ಸ್ಯಾಟಲೈಟ್ ಬಸ್ ನಿಲ್ದಾಣ, ಯಶವಂತಪುರ, ಕೆಂಗೇರಿ ಸೇರಿ ಹಲವು ನಿಲ್ದಾಣಗಳಲ್ಲಿ ಬಸ್‌ಗಳಿಲ್ಲದೆ ಜನ ಪರಿಪಾಟಲು ಅನುಭವಿಸಿದರು.

ಬೆಳಿಗ್ಗೆ ಜನರಲ್ ಶಿಫ್ಟ್‌ನಲ್ಲಿ ಕರ್ತವ್ಯ ಆರಂಭಿಸಿರುವ ಬಸ್‌ಗಳು ಮಾತ್ರ ಕಾರ್ಯಾಚರಣೆಯಲ್ಲಿದ್ದವು. ಮಧ್ಯಾಹ್ನದ ನಂತರ ಕರ್ತವ್ಯಕ್ಕೆ ಹಾಜರಾಗುವ ಸಿಬ್ಬಂದಿ, ರಾತ್ರಿ ತಂಗುವ ಕರ್ತವ್ಯ ನಿರ್ವಹಿಸುತ್ತಾರೆ. ಈ ಸಿಬ್ಬಂದಿ ಮಂಗಳವಾರ ಕರ್ತವ್ಯಕ್ಕೆ ಹಾಜರಾಗಿಲ್ಲ. ಹೀಗಾಗಿ, ಮಧ್ಯಾಹ್ನದ ನಂತರ ಬಸ್‌ಗಳ ಕಾರ್ಯಾಚರಣೆ ಆರಂಭವಾಗಲಿಲ್ಲ. ಡಿಪೋಗಳಲ್ಲಿ ಬಸ್‌ಗಳು ನಿಂತಲ್ಲೇ ನಿಂತಿದ್ದವು.



ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ನಿಂತಿರುವ ಬಸ್‌ಗಳು –ಪ್ರಜಾವಾಣಿ ಚಿತ್ರ

ಇತ್ತ ಬಸ್ ನಿಲ್ದಾಣಗಳಲ್ಲಿ ಬರುತ್ತಿದ್ದ ಕೆಲವೇ ಬಸ್‌ಗಳಲ್ಲಿ ಪ್ರಯಾಣಿಕರು ಭರ್ತಿಯಾಗಿ ತುಂಬಿಕೊಳ್ಳುತ್ತಿದ್ದರು. ಕೋವಿಡ್ ನಿಯಮಾವಳಿ ಲೆಕ್ಕಿಸದೆ ಜನ ಬಸ್‌ಗಳಲ್ಲಿ ಪ್ರಯಾಣಿಸಿದರು. ರಾತ್ರಿಯಾದ ಬಳಿಕ ಆ ಬಸ್‌ಗಳ ಕಾರ್ಯಾಚರಣೆಯೂ ಸ್ಥಗಿತಗೊಂಡಿತು. ಬಸ್ ಇಲ್ಲದ ಕಾರಣ ಮೆಟ್ರೊ ರೈಲಿನಲ್ಲೂ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿತ್ತು.

ಬೇರೆ ಜಿಲ್ಲೆಗಳಿಂದ ಬರಬೇಕಿದ್ದ ಬಸ್‌ಗಳು ಮಂಗಳವಾರ ಸಂಜೆ ಬಳಿಕ ಕೆಂಪೇಗೌಡ ಬಸ್ ನಿಲ್ದಾಣ ಪ್ರವೇಶಿಸಲಿಲ್ಲ. ಬೇರೆ ಊರುಗಳಿಗೆ ತೆರಳಬೇಕಾದ ಪ್ರಯಾಣಿಕರು ಬಸ್‌ಗಳಿಲ್ಲದೆ ಪರದಾಡಿದರು. ಮುಷ್ಕರದ ಕಾರಣ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದಾರೆ.

ಕೋಡಿಹಳ್ಳಿ ವಿರುದ್ಧ ದೂರು

ಮುಷ್ಕರದ ನೇತೃತ್ವ ವಹಿಸಿರುವ ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಬಿಎಂಟಿಸಿ ನೌಕರ ತ್ಯಾಗರಾಜ್ ಎಂಬುವರು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಸಿ.ಶಿಖಾ ಅವರಿಗೆ ದೂರು ನೀಡಿದ್ದಾರೆ.

'ಸಾರ್ವಜನಿಕರಿಗೆ ಸೇವೆ ನೀಡುವುದು ನಮ್ಮ ಧ್ಯೇಯ. ಮುಷ್ಕರದ ವೇಳೆ ಅಹಿತಕರ ಘಟನೆಗಳು ನಡೆದರೆ ಕೋಡಿಹಳ್ಳಿ ಚಂದ್ರಶೇಖರ್ ಅವರೇ ಹೊಣೆ' ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ರಾಜಕೀಯದ ದಾಳ ಆಗಬೇಡಿ: ನೌಕರರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಸಂಸ್ಥೆ ಸಿಬ್ಬಂದಿ ರಾಜಕೀಯದ ಆಟದ ದಾಳವಾಗ ಬಾರದು. ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರ ಈಗಾಗಲೇ ಸಾರಿಗೆ ಸಿಬ್ಬಂದಿ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದೆ ಎಂದು ಅವರು ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

'ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಈಗಾಗಲೇ ವಸ್ತುಸ್ಥಿತಿಯನ್ನು ನೌಕರರಿಗೆ ತಿಳಿಸಿದ್ದಾರೆ. ಚುನಾವಣೆ ನೀತಿ ಸಂಹಿತೆ ತೆರವಾದ ಬಳಿಕ ವೇತನ ಪರಿಷ್ಕರಣೆ ಜಾರಿ ಮಾಡುವುದಾಗಿಯೂ ಹೇಳಿದ್ದಾರೆ. ಅವರ ಮೇಲೆ ವಿಶ್ವಾಸವಿಟ್ಟು ಮುಷ್ಕರ ಕೈಬಿಡಬೇಕು' ಎಂದು ರವಿ ಮನವಿ ಮಾಡಿದರು.

ಮೆಟ್ರೊ ರೈಲುಗಳ ಸಂಚಾರ ಸಂಖ್ಯೆ ಹೆಚ್ಚಳ

ಸಾರಿಗೆ ಸಂಸ್ಥೆ ನೌಕರರ ಮುಷ್ಕರದಿಂದ ಬಸ್ ಸಂಚಾರ ವ್ಯತ್ಯಯವಾಗುವ ನಿಟ್ಟಿನಲ್ಲಿ, ಬೆಂಗಳೂರು ಮೆಟ್ರೊ ರೈಲು ನಿಗಮವು ಬುಧವಾರ ಹೆಚ್ಚು ರೈಲುಗಳ ಸೇವೆ ಒದಗಿಸಲು ಮುಂದಾಗಿದೆ. ಅಂದರೆ, ರೈಲುಗಳ ನಡುವಿನ ಸಂಚಾರ ಸಮಯವನ್ನು ಅಥವಾ ಕಾಯುವ ಸಮಯವನ್ನು ತಗ್ಗಿಸಲಾಗಿದೆ.

ಏ.7ರಂದು ಬೆಳಿಗ್ಗೆ 7ರಿಂದ ರಾತ್ರಿ 9ರವರೆಗೆ ನೇರಳೆ ಮಾರ್ಗದಲ್ಲಿ 4.5 ನಿಮಿಷಕ್ಕೆ ಒಂದು, ಹಸಿರು ಮಾರ್ಗದಲ್ಲಿ 5 ನಿಮಿಷಕ್ಕೆ ಒಂದು ರೈಲು ಸಂಚರಿಸಲಿದೆ ಎಂದು ಬಿಎಂಆರ್‌ಸಿಎಲ್ ಹೇಳಿದೆ.

ಸಾಮಾನ್ಯ ದಿನಗಳಲ್ಲಿ ದಟ್ಟಣೆಯ ಅಲ್ಲದ ಸಂದರ್ಭದಲ್ಲಿ ನೇರಳೆ ಮಾರ್ಗದಲ್ಲಿ 10 ನಿಮಿಷಕ್ಕೊಂದು, ಹಸಿರು ಮಾರ್ಗದಲ್ಲಿ 12 ನಿಮಿಷಕ್ಕೊಂದು ರೈಲು ಸಂಚರಿಸುತ್ತಿತ್ತು.

ಸಾರ್ವಜನಿಕರು ಮೆಟ್ರೊ ಸ್ಮಾರ್ಟ್ ಕಾರ್ಡ್ ಬಳಸಿ ಪ್ರಯಾಣಿಸಬಹುದು. ಹೊಸ ಕಾರ್ಡ್‌ಗಳನ್ನು ಡೆಬಿಟ್ (ಎಟಿಎಂ) ಅಥವಾ ಕ್ರೆಡಿಟ್ ಕಾರ್ಡ್ ಅಥವಾ ಯುಪಿಐ ಮೂಲಕ ಹಣ ಪಾವತಿಸಿ ನಿಲ್ದಾಣಗಳಲ್ಲಿ ಖರೀದಿಸಬಹುದು ಎಂದು ನಿಗಮ ಪ್ರಕಟಣೆಯಲ್ಲಿ ಹೇಳಿದೆ.

ಸಾರಿಗೆ ಮುಷ್ಕರಕ್ಕೆ ಆಪ್ ಬೆಂಬಲ

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸಾರಿಗೆ ನೌಕರರು ಹಮ್ಮಿಕೊಂಡಿರುವ ಮುಷ್ಕರಕ್ಕೆ ಆಮ್ ಆದ್ಮಿ ಪಕ್ಷ ಬೆಂಬಲ ಸೂಚಿಸಿದೆ.

'ಸಾರಿಗೆ ಸಚಿವ ಲಕ್ಷ್ಮಣ ಸವದಿ ನೌಕರರೊಂದಿಗೆ ಚರ್ಚಿಸದೆ ಏಕಪಕ್ಷೀಯವಾಗಿ ಕೆಲ ನಿರ್ಣಯಗಳನ್ನು ಕೈಗೊಂಡಿದ್ದಾರೆ. ಇದನ್ನೇ ಮುಂದಿಟ್ಟುಕೊಂಡು ನೌಕರರ ಬೇಡಿಕೆ ಈಡೇರಿಸಿದ್ದೇವೆಂದು ಜನರ ದಾರಿ ತಪ್ಪಿಸುತ್ತಿದ್ದಾರೆ. ನೌಕರರನ್ನು ಜೀತದಾಳುಗಳ ರೀತಿ ನಡೆಸಿಕೊಳ್ಳುತ್ತಿರುವ ಸರ್ಕಾರದ ನಡೆಯನ್ನು ಪಕ್ಷವು ಖಂಡಿಸುತ್ತದೆ' ಎಂದು ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ ತಿಳಿಸಿದ್ದಾರೆ.

ಬಂದ್: ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರದಿಂದ ಬಸ್ ಸಂಚಾರ ವ್ಯತ್ಯಯವಾಗುವ ಸಾಧ್ಯತೆ ಇರುವುದರಿಂದ ಬುಧವಾರ (ಏ.7) ನಿಗದಿಯಾಗಿದ್ದ ಎಲ್ಲ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯ ಹೇಳಿದೆ.

ಬಿಎ ಬಿಎಸ್ಸಿಯ ಐದನೇ ಸೆಮಿಸ್ಟರ್‌ನ ಪರೀಕ್ಷೆ, ಬಿಎ,ಬಿ.ಕಾಂ, ಬಿಬಿಎನ 3ನೇ ವರ್ಷದ ಪದವಿ ಪರೀಕ್ಷೆ, ಎಂ.ಕಾಂನ ಪ್ರಥಮ ವರ್ಷದ ಪರೀಕ್ಷೆ ಮತ್ತು ಸ್ನಾತಕೋತ್ತರ ಡಿಪ್ಲೊಮಾ (ಗ್ರಾಮೀಣ ಅಭಿವೃದ್ಧಿ) ಪರೀಕ್ಷೆ ನಿಗದಿಯಾಗಿತ್ತು.

ಮುಂದೂಡಲಾಗಿರುವ ಪರೀಕ್ಷೆಗಳ ದಿನಾಂಕವನ್ನು ನಂತರ ತಿಳಿಸಲಾಗುವುದು ಎಂದು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಎಸ್ಸೆಸ್ಸೆಲ್ಸಿ: ಪರ್ಯಾಯ ಬೋಧನೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರದಿಂದಾಗುವ ತೊಂದರೆ ತಪ್ಪಿಸಲು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಆನ್‌ಲೈನ್ ಅಥವಾ ಪರ್ಯಾಯ ವಿಧಾನ ಬಳಸಿಕೊಂಡು ಪಾಠ ಬೋಧನೆಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಎಲ್ಲ ಜಿಲ್ಲೆಗಳ ಉಪ ನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಸೂಚಿಸಿದ್ದಾರೆ.

ತರಗತಿಗಳಿಗೆ ವಿದ್ಯಾರ್ಥಿಗಳ ನೇರ ಹಾಜರಾತಿ ಕಡ್ಡಾಯ ಅಲ್ಲ. ಆದರೆ, ತರಗತಿಗಳಿಗೆ ಹಾಜರಾಗುವವರಿಗೆ ಸಾರಿಗೆ ನೌಕರರ ಮುಷ್ಕರದಿಂದ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ, ತುರ್ತು ಸಂದರ್ಭಗಳಲ್ಲಿ ಆಯಾ ಜಿಲ್ಲಾಡಳಿತದ ಸೂಚನೆ ಅನ್ವಯ ಕ್ರಮ ತೆಗೆದುಕೊಳ್ಳಬೇಕು ಎಂದೂ ಅವರು ಸಲಹೆ ನೀಡಿದ್ದಾರೆ.

ಹಣ ದುರ್ಬಳಕೆ: ಸಮಗ್ರ ವರದಿಗೆ ಪಿಎಸಿ ಸೂಚನೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ಯೋಜನೆ ಜಾರಿಯಲ್ಲಿ ಅಕ್ರಮ, ಸರ್ಕಾರಿ ಮುದ್ರಣಾಲಯದಲ್ಲಿ ಸಾಮಗ್ರಿ ಖರೀದಿಯಲ್ಲಿ ಲೋಪ ಮತ್ತು ಅಂಗವಿಕಲ ವಿದ್ಯಾರ್ಥಿಗಳಿಗೆ ನೆರವು ನೀಡುವ ಯೋಜನೆಯಲ್ಲಿ ಹಣ ದುರ್ಬಳಕೆ ಕುರಿತಂತೆ ಮಂಗಳವಾರ ನಡೆದ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಸಭೆಯಲ್ಲಿ ಚರ್ಚೆ ನಡೆದಿದೆ.

ಸಮಿತಿಯ ಅಧ್ಯಕ್ಷರಾದ ರಾಮಲಿಂಗಾರೆಡ್ಡಿ ಅನುಪಸ್ಥಿತಿಯಲ್ಲಿ ಎ.ಟಿ. ರಾಮಸ್ವಾಮಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಿಎಜಿ ವರದಿ ಹಾಗೂ ಆರ್ಥಿಕ ಇಲಾಖೆಗೆ ಸಂಬಂಧಪಟ್ಟ ಧನವಿನಿಯೋಗ ಲೆಕ್ಕದಲ್ಲಿ ಆರ್ಥಿಕ ಮಿತಿಗಳ ಪರಿಷ್ಕರಣೆ ಪ್ರಸ್ತಾವನೆ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ.

2010ರಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳ ಕಂಪ್ಯೂಟರ್ ಶಿಕ್ಷಣಕ್ಕೆ ₹ 426 ಕೋಟಿ ಮೊತ್ತದಲ್ಲಿ ಪರಿಕರಗಳನ್ನು ಖರೀದಿಸಲಾಗಿತ್ತು. ಆದರೆ, ಈ ಬಗ್ಗೆ ಯೋಜನಾ ವಿವರ ಇರಲಿಲ್ಲ. ಕೆಲವು ಪರಿಕರ, ಸಾಫ್ಟ್‌ವೇರ್ ನೀಡಿ ಹಾಡ್‌ವೇರ್ ಪೂರೈಸದ ಕಾರಣ ಯೋಜನೆಯ ಉದ್ದೇಶ ಈಡೇರಿಲ್ಲ. ಇದರಲ್ಲಿ ಅವ್ಯವಹಾರ ನಡೆದಿರುವ ಆರೋಪವಿದೆ. ಕಿಯೋನಿಕ್ಸ್ ಸಂಸ್ಥೆ ನೀಡಿದ ತಪ್ಪು ಮಾಹಿತಿಯಿಂದ ಹಣ ದುರ್ಬಳಕೆ ಆಗಿರುವ ಬಗ್ಗೆಯೂ ಚರ್ಚೆ ನಡೆದು, 15 ದಿನಗಳಲ್ಲಿ ಸಮಗ್ರ ವರದಿ ಸಲ್ಲಿಸಲು ಸಮಿತಿ ಸೂಚಿಸಿದೆ ಎಂದು ಮೂಲಗಳು ಹೇಳಿವೆ.

ಸರ್ಕಾರಿ ಮುದ್ರಣಾಲಯದಲ್ಲಿ 2008ರಲ್ಲಿ ₹ 82.34 ಲಕ್ಷ ನಿಷ್ಫಲವಾಗಿತ್ತು ಎಂದು ಸಿಎಜಿ ವರದಿ ಆಕ್ಷೇಪಿಸಿತ್ತು. ತಪ್ಪಿತಸ್ಥ 19 ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಇಲಾಖೆ ಪ್ರಧಾನ ಕಾರ್ಯದರ್ಶಿ ವರದಿ ನೀಡಿದ್ದರು. ಆದರೆ, ಸೋಮವಾರ (ಏ. 5) ಈ ಅಧಿಕಾರಿಗಳನ್ನು ಆರೋಪ ಮುಕ್ತಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ. ಸಮಿತಿಯ ಮುಂದೆ ಈ ವಿಷಯ ಚರ್ಚೆಯಲ್ಲಿರುವಾಗಲೇ ಆರೋಪಕ್ಕೆ ಗುರಿಯಾದ ಅಧಿಕಾರಿಗಳನ್ನು ಆರೋಪ ಮುಕ್ತಗೊಳಿಸಿರುವ ಬಗ್ಗೆ ಚರ್ಚೆ ನಡೆದಿದ್ದು, ಪ್ರಕರಣ ಸಂಬಂಧ ನಡೆದಿರುವ ಬೆಳವಣಿಗೆಗಳ ಕುರಿತು ವರದಿ ಸಲ್ಲಿಸಲು ಸಭೆಯಲ್ಲಿ ಸೂಚಿಸಲಾಯಿತು.

ಅಂಗವಿಕಲ ವಿದ್ಯಾರ್ಥಿಗಳಿಗೆ ನೆರವು ನೀಡಲು ಕೇಂದ್ರ ಸರ್ಕಾರ ಜಾರಿಗೊಳಿಸಿದ್ದ ಯೋಜನೆಯಲ್ಲಿ ಅಸ್ತಿತ್ವದಲ್ಲೇ ಇಲ್ಲದ ಸ್ವಯಂಸೇವಾ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು ಎಂದೂ ತಿಳಿದುಬಂದಿದೆ.

ನಿಲ್ದಾಣಗಳ ಕಾಮಗಾರಿ ಬಹುತೇಕ ಪೂರ್ಣ: ಜೂನ್‌ನಲ್ಲಿ ವಾಣಿಜ್ಯ ಸಂಚಾರ ಪ್ರಾರಂಭ ನಿರೀಕ್ಷೆ

ಕೆಂಗೇರಿ ಮಾರ್ಗ: ಪರೀಕ್ಷಾರ್ಥ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸುತ್ತ–ಮುತ್ತಲಿನ ನಿವಾಸಿಗಳ ಬಹು ವರ್ಷಗಳ ಬೇಡಿಕೆ ಕೆಲವೇ ದಿನಗಳಲ್ಲಿ ಈಡೇರಲಿದೆ. ಮೆಟ್ರೊ ರೈಲಿನ ಸೇವೆಯ ನಿರೀಕ್ಷೆಯಲ್ಲಿದ್ದ ಈ ಭಾಗದ ಜನರಿಗೆ ಜೂನ್‌ನಲ್ಲಿ ಆ ಭಾಗ್ಯ ಲಭಿಸಲಿದೆ.

'ನಮ್ಮ ಮೆಟ್ರೊ' ಎರಡನೇ ಹಂತದ ಮೈಸೂರು ರಸ್ತೆ ವಿಸ್ತರಿತ ಮಾರ್ಗದಲ್ಲಿ ಮಂಗಳವಾರ ಮೆಟ್ರೊ ರೈಲಿನ ಪರೀಕ್ಷಾರ್ಥ ಸಂಚಾರ ನಡೆಸಲಾಯಿತು.

ನೇರಳೆ ಮಾರ್ಗದಲ್ಲಿನ 6.46 ಕಿ.ಮೀ. ಉದ್ದದ ಈ ವಿಸ್ತರಿತ ಮಾರ್ಗವು ಮೈಸೂರು ರಸ್ತೆ ನಿಲ್ದಾಣದಿಂದ ಕೆಂಗೇರಿಯವರೆಗೆ ಇದೆ.

'ಅಧಿಕೃತವಾಗಿ ಏ.15ರ ನಂತರ ಪರೀಕ್ಷಾರ್ಥ ಸಂಚಾರ ಆರಂಭಿಸುವಂತೆ ನಿಗಮ ಸೂಚಿಸಿತ್ತು. ಆದರೆ, ತಾಂತ್ರಿಕವಾಗಿ ಎಲ್ಲ ಕಾರ್ಯಗಳು ಪೂರ್ಣಗೊಂಡಿದ್ದರಿಂದ ಮಂಗಳವಾರದಿಂದಲೇ ಪ್ರಾರಂಭ ಮಾಡಿದ್ದೇವೆ' ಎಂದು ನಿಗಮದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

'ನಾಯಂಡಹಳ್ಳಿಯಿಂದ ಕೆಂಗೇರಿಯವರೆಗೆ ಒಂದು ಪಥದಲ್ಲಿ ಮೊದಲಿಗೆ ಪರೀಕ್ಷಾರ್ಥ ಸಂಚಾರ ನಡೆಸಲಾಗಿದೆ. ಬುಧವಾರ ಕೆಂಗೇರಿಯಿಂದ ನಾಯಂಡಹಳ್ಳಿಯವರೆಗಿನ ಪಥದಲ್ಲಿ ಪರೀಕ್ಷೆ ನಡೆಸಲಾಗುವುದು' ಎಂದು ಅವರು ತಿಳಿಸಿದರು.

'ಮೇ ತಿಂಗಳಲ್ಲಿ ವಾಣಿಜ್ಯ ಸಂಚಾರ ಆರಂಭವಾಗುವುದು ಅನುಮಾನ. ಜೂನ್ ಮೊದಲ ವಾರದಲ್ಲಿ ಈ ವಿಸ್ತರಿತ ಮಾರ್ಗದಲ್ಲಿ ಸಾರ್ವಜನಿಕ ಸೇವೆ ಆರಂಭವಾಗಬಹುದು' ಎಂದು ಅವರು ಹೇಳಿದರು.

'ನಿಲ್ದಾಣಗಳ ಒಳಾಂಗಣ ಕಾಮಗಾರಿ ಮತ್ತು ಪ್ರಯಾಣಿಕರಿಗೆ ಸೌಲಭ್ಯ ಒದಗಿಸುವ ಕಾರ್ಯಗಳು ಈ ತಿಂಗಳಲ್ಲಿ ಪೂರ್ಣಗೊಳ್ಳಲಿವೆ. ಪರೀಕ್ಷಾರ್ಥ ಸಂಚಾರದ ಜೊತೆ ಜೊತೆಗೆ ಉಳಿದ ಕಾಮಗಾರಿಗಳು ನಡೆಯಲಿವೆ' ಎಂದು ನಿಗಮದ ಅಧಿಕಾರಿಯೊಬ್ಬರು ಹೇಳಿದರು.

ನಿಗಮದ ಹಿರಿಯ ಅಧಿಕಾರಿಗಳು ಸೋಮವಾರವೇ ಈ ಸಿದ್ಧತೆಗಳ ಪರಿಶೀಲನೆ ನಡೆಸಿದ್ದರು. ರೈಲುಗಳಿಗೆ ವಿದ್ಯುತ್ ಪೂರೈಸುವ ಚಾರ್ಜಿಂಗ್ ವಾಹನಗಳ ಸಾಮರ್ಥ್ಯವನ್ನೂ ಪರೀಕ್ಷಿಸಲಾಗಿತ್ತು.

'ಮೇ ತಿಂಗಳಲ್ಲಿ ಮೆಟ್ರೊ ರೈಲು ಸುರಕ್ಷತಾ ಆಯುಕ್ತರಿಗೆ (ಸಿಎಂಆರ್‌ಎಸ್) ವಾಣಿಜ್ಯ ಸಂಚಾರಕ್ಕೆ ಅನುಮತಿ ಕೋರಿ ಪತ್ರ ಬರೆಯಲಾಗುವುದು. ಜೂನ್ ವೇಳೆಗೆ ವಾಣಿಜ್ಯ ಸಂಚಾರಕ್ಕೆ ಹಸಿರು ನಿಶಾನೆ ದೊರೆಯುವ ಸಾಧ್ಯತೆ ಇದೆ' ಎಂದು ನಿಗಮದ ಮೂಲಗಳು ಹೇಳಿವೆ.

ಚಲ್ಲಘಟ್ಟದಲ್ಲಿ ಡಿಪೊ ನಿರ್ಮಾಣ ಕಾರ್ಯ ಇನ್ನೂ ಒಂದು ವರ್ಷ ವಿಳಂಬವಾಗಬಹುದು. ಭೂಸ್ವಾಧೀನ ಬಾಕಿ ಇರುವ ಕಾರಣ ಇದು ತಡವಾಗಲಿದೆ.



ಮೈಸೂರು ರಸ್ತೆ ನಿಲ್ದಾಣದಿಂದ ಕೆಂಗೇರಿಯವರೆಗೆ ಮಂಗಳವಾರ ಮೆಟ್ರೊ ರೈಲಿನ ಪರೀಕ್ಷಾರ್ಥ ಸಂಚಾರ ನಡೆಯಿತುಪ್ರಜಾವಾಣಿ ಚಿತ್ರ

ವರ್ಷಗಳ ಹಿಂದೆಯೇ ಮುಗಿಯಬೇಕಿತ್ತು !

ಈ ವಿಸ್ತರಿತ ಮಾರ್ಗವು 2019ರ ಕೊನೆಯ ವೇಳೆಗೆ ಮುಕ್ತಾಯವಾಗಲಿದೆ ಎಂದು ಹೇಳಲಾಗಿತ್ತು. ಆದರೆ, ಹಲವು ಕಾರಣಗಳಿಂದ ವಿಳಂಬವಾಗಿತ್ತು. ಗುತ್ತಿಗೆದಾರರ ಬದಲಾವಣೆ, ಭೂಸ್ವಾಧೀನದಲ್ಲಾದ ವಿಳಂಬವೂ ಇದಕ್ಕೆ ಕಾರಣವಾಗಿತ್ತು.

ಪರಿಷ್ಕೃತ ಗಡುವಿನಂತೆ 2021ರ ಫೆಬ್ರುವರಿಯಲ್ಲಿಯೇ ರೈಲು ಸಂಚಾರ ಆರಂಭವಾಗಬೇಕಿತ್ತು. ಆದರೆ, ಕೋವಿಡ್‌ನಿಂದ ಕಾರ್ಮಿಕರು ಸ್ವಂತ ಊರಿಗೆ ತೆರಳಿದ್ದರಿಂದ ಮತ್ತಷ್ಟು ತಡವಾಯಿತು.

ಈ ಮಾರ್ಗದ ನಿಲ್ದಾಣಗಳು

- ನಾಯಂಡಹಳ್ಳಿ
- ರಾಜರಾಜೇಶ್ವರಿ ನಗರ
- ಬೆಂಗಳೂರು ವಿಶ್ವವಿದ್ಯಾಲಯ
- ಆರ್.ವಿ.ಕಾಲೇಜು
- ಮೈಲಸಂದ್ರ
- ಕೆಂಗೇರಿ

ನಮ್ಮ ಮೆಟ್ರೊ: ಮುಂದಿನ ಸಾರಥಿ ಯಾರು?

ಬೆಂಗಳೂರು: ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಅಜಯ್ ಸೇಠ್ ವರ್ಗಾವಣೆಗೊಂಡಿದ್ದಾರೆ.



ಅಜಯ್ ಸೇಠ್

ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿ ಮಂಗಳವಾರ ಅವರು ನೇಮಕಗೊಂಡಿದ್ದಾರೆ. ಈಗಿನ ಹುದ್ದೆಯಿಂದ ಮುಂದಿನ ವಾರ ಬಿಡುಗಡೆಯಾಗುವ ಸಾಧ್ಯತೆ ಇದೆ. ಈ ಸ್ಥಾನಕ್ಕೆ ಯಾರು ಬರಬಹುದು ಎಂಬ ಚರ್ಚೆ ಶುರುವಾಗಿದ್ದು, ಸದ್ಯ ಬಿಬಿಎಂಪಿ ಆಡಳಿತಾಧಿಕಾರಿ ಹಾಗೂ ಜಲಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ರಾಕೇಶ್ ಸಿಂಗ್ ಅವರನ್ನು ನೇಮಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಹಿಂದೆ ಜಲಮಂಡಳಿಯ ಅಧ್ಯಕ್ಷರಾಗಿದ್ದ ಮತ್ತು ಈಗ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿರುವ ತುಷಾರ್ ಗಿರಿನಾಥ್ ಅವರ ಹೆಸರೂ ಕೇಳಿ ಬರುತ್ತಿದೆ.

ಕರ್ನಾಟಕ ಕೇಡರ್ 1987ರ ಬ್ಯಾಚ್‌ನ ಅಜಯ್ ಸೇಠ್, 2018ರ ಜುಲೈನಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ್ದರು. ಈ ಎರಡೂವರೆ ವರ್ಷದಲ್ಲಿ 'ನಮ್ಮ ಮೆಟ್ರೊ' ಎರಡನೇ ಹಂತದ ಮೊದಲ ವಿಸ್ತರಿಸಿದ ಮಾರ್ಗ (ಯಲಚೇನಹಳ್ಳಿ–ರೇಷ್ಮೆ ಸಂಸ್ಥೆ) ಲೋಕಾರ್ಪಣೆಗೊಂಡಿತ್ತು.

ಇದೇ ಸಂದರ್ಭದಲ್ಲಿ ಅನುಮೋದನೆಗೊಂಡರೂ ನನೆಗುದಿಗೆ ಬಿದ್ದಿದ್ದ ಸುರಂಗ ಮಾರ್ಗದ ಸುಮಾರು ₹6 ಸಾವಿರ ಕೋಟಿ ಮೊತ್ತದ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದ್ದು ಇವರ ಅವಧಿಯಲ್ಲಿ.

ಸೇಠ್ ಆಗಷ್ಟೇ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ವೆಲ್ಲಾರ ಜಂಕ್ಷನ್–ಟ್ಯಾನರಿ ರಸ್ತೆ (ಪ್ಯಾಕೇಜ್ 2 ಮತ್ತು 3)ವರೆಗೆ ಟೆಂಡರ್ ಆದೇಶಿಸಲಾಗಿತ್ತು. ಆದರೆ, ಅದರಲ್ಲಿ ಅಂದಾಜು ವೆಚ್ಚಕ್ಕಿಂತ ಶೇ 80ರಷ್ಟು ಹೆಚ್ಚುವರಿ ಮೊತ್ತವನ್ನು ಗುತ್ತಿಗೆದಾರರು ನಮೂದಿಸಿದ್ದರು. ಅದನ್ನು ರದ್ದುಗೊಳಿಸಿ, ಕೆಲವು ಮಾರ್ಪಾಡುಗಳೊಂದಿಗೆ ಮರುಟೆಂಡರ್‌ಗೆ ಸೂಚಿಸಿದರು. ಪರಿಣಾಮ ಅಂದಾಜು ವೆಚ್ಚಕ್ಕಿಂತ ಕೇವಲ ಶೇ 10-15ರಷ್ಟು ಹೆಚ್ಚು ಮೊತ್ತವನ್ನು ಗುತ್ತಿಗೆದಾರರು ನಮೂದಿಸಿದರು. ಇದರಿಂದ ನಿಗಮಕ್ಕೆ ಸಾವಿರಾರು ಕೋಟಿ ರೂಪಾಯಿ ಉಳಿತಾಯ ಆಯಿತು.

ಈಗ ಕೆಂಗೇರಿ ಮಾರ್ಗ ಜೂನ್‌ನಲ್ಲಿ ಲೋಕಾರ್ಪಣೆಗೆ ಸಿದ್ಧಗೊಂಡಿರುವುದು ಸೇರಿದಂತೆ ಹಲವು ಮೈಲುಗಲ್ಲು ಸಾಧಿಸಲು ಇವರ ಅವಧಿಯಲ್ಲಿ ಸಾಧ್ಯವಾಯಿತು ಎಂದು ನಿಗಮದ ಅಧಿಕಾರಿಗಳು ಹೇಳುತ್ತಾರೆ. ಈ ಮಾರ್ಗದಲ್ಲಿ ಪರೀಕ್ಷಾರ್ಥ ಸಂಚಾರ ಆರಂಭವಾದ ದಿನವೇ ಸೇಠ್ ಅವರ ವರ್ಗಾವಣೆಯಾಗಿದೆ.

ಸುದ್ದಿ 2 ನಿಮಿಷ

ಡಿನೋಟಿಫಿಕೇಷನ್ ಆದೇಶ ರದ್ದು ಮಾಡಿದ ಹೈಕೋರ್ಟ್

ಬೆಂಗಳೂರು: ಬೇಗೂರು ಹೋಬಳಿ ಯೆಲ್ಲಕುಂಟೆ ಗ್ರಾಮದ 1 ಎಕರೆ 22 ಗುಂಟೆ ಭೂಮಿ ಡಿನೋಟಿಫಿಕೇಷನ್ ಮಾಡಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಡಿನೋಟಿಫೈ ಮಾಡಲು ಭೂಸ್ವಾಧೀನ ಕಾಯ್ದೆಯ ಕಾಯ್ದೆ ಸೆಕ್ಷನ್ 48(1)ರ ಪ್ರಕಾರ ಅಧಿಕಾರ ಇಲ್ಲ ಎಂದು ಪೀಠ ಹೇಳಿದೆ.

ವಸತಿ ಬಡಾವಣೆ ಉದ್ದೇಶದಿಂದ 50 ಎಕರೆ ಜಮೀನನ್ನು ಸರ್ಕಾರ ಸ್ವಾಧೀನ ಮಾಡಿಕೊಂಡಿತ್ತು. ಬಳಿಕ ಅದನ್ನು 2004ರಲ್ಲಿ ಐಟಿಐ ನೌಕರರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಹಸ್ತಾಂತರ ಮಾಡಲಾಗಿತ್ತು.

ಈ ನಡುವೆ ಭೂಸ್ವಾಧೀನ ಪ್ರಕ್ರಿಯೆ ಚಾಲ್ತಿಯಲ್ಲಿದ್ದಾಗಲೇ ಮೂಲ ಮಾಲೀಕರು 1 ಎಕರೆ 22 ಗುಂಟೆ ಭೂಮಿಯನ್ನು ಮಾರಿದ್ದರು. ಭೂಮಿ ಖರೀದಿ ಮಾಡಿದವರ ಕೋರಿಕೆ ಮೇರೆಗೆ 2010ರ ಸೆಪ್ಟೆಂಬರ್ 1ರಂದು ಡಿನೋಟಿಫೈ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು. ಈ ಆದೇಶವನ್ನು ಹೈಕೋರ್ಟ್ ಏಕ ಸದಸ್ಯ ಪೀಠ ಎತ್ತಿ ಹಿಡಿದಿತ್ತು.



ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ಪೀಠ, 'ಭೂಮಿ ಹಸ್ತಾಂತರ ಆದ ಬಳಿಕ ಡಿನೋಟಿಫೈ ಮಾಡಲು ಕಾನೂನಿನಲ್ಲಿ ಅಧಿಕಾರ ಇಲ್ಲ' ಎಂದು ಹೇಳಿತು.

17 ಡಿವೈಎಸ್‌ಪಿ ಅಧಿಕಾರಿಗಳಿಗೆ ಎಸ್‌ಪಿ ಬಡ್ತಿ

ಬೆಂಗಳೂರು: ಪೊಲೀಸ್ ಇಲಾಖೆಯ 17 ಡಿವೈಎಸ್‌ಪಿ (ಸಿವಿಲ್) ಅಧಿಕಾರಿಗಳಿಗೆ ಎಸ್‌ಪಿ ಹುದ್ದೆಗೆ ಬಡ್ತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯ ಗುಪ್ತವಾರ್ತೆಯ ಎಸ್.ಪಿ ಹುದ್ದೆಗಳಿಗೆ ಡಿವೈಎಸ್‌ಪಿ ಅಧಿಕಾರಿಗಳಾದ ವಿ.ಮರಿಯಪ್ಪ, ಎಸ್.ರಮೇಶ್ ಕುಮಾರ್ , ಎನ್. ವಾಸುದೇವರಾಮ (ಎಸ್.ಪಿ.ಎ.ಟಿ ಘಟಕ), ಎಚ್.ಪ್ರವೀಣ್ ನಾಯಕ್ (ಮಂಗಳೂರು) ಅವರಿಗೆ ಬಡ್ತಿ ನೀಡಲಾಗಿದೆ.

ಪಿ.ಎ.ಪುರುಷೋತ್ತಮ, ವಾಲಿ ಬಾಷಾ, ಎಂ.ವೇಣುಗೋಪಾಲ್, ಸಿ.ಮಲ್ಲಿಕ್, ಪುಟ್ಟಮಾದಯ್ಯ, ಸತೀಶ್ ಎಸ್.ಚಿಟಗುಬ್ಬಿ , ಕೆ.ಎಸ್. ಸುಂದರರಾಜ್, ಎಂ.ಎಲ್.ಪುರುಷೋತ್ತಮ (ಲೋಕಾಯುಕ್ತ), ಬಿ.ಎಂ. ನಾರಾಯಣಸ್ವಾಮಿ (ಕೋಲಾರ ಹೆಚ್ಚುವರಿ ಎಸ್‌ಪಿ), ಎಂ.ವಿಜಯಕುಮಾರ್ (ಹಾವೇರಿ ಹೆಚ್ಚುವರಿ ಎಸ್‌ಪಿ), ಎಚ್.ಮಂಜುನಾಥ ಬಾಬು, ಅನಿಲ್ ಕುಮಾರ್ ಎಸ್.ಭೂಮರೆಡ್ಡಿ (ಡಿಸಿಆರ್‌ಇ), ವಿ.ಬಿ.ಭಾಸ್ಕರ್ (ಐಎಸ್‌ಡಿ) ಅವರಿಗೆ ಬಡ್ತಿ ನೀಡಲಾಗಿದೆ.

ಶಾಸಕ ಮಸಾಲ ಜಯರಾಮ್ ಪುತ್ರನ ಮೇಲೆ ಹಲ್ಲೆ

ತುಮಕೂರು: ತುರುವೇಕೆರೆ ಶಾಸಕ ಬಿಜೆಪಿಯ ಮಸಾಲ ಜಯರಾಮ್ ಪುತ್ರ ತೇಜು ಅವರ ಮೇಲೆ ತಾಲ್ಲೂಕಿನ ಹೆಬ್ಬೂರು, ಸಿ.ಎಸ್.ಪುರ ಮಧ್ಯದ ನೆಟ್ಟಿಕೆರೆ ಗೇಟ್ ಸಮೀಪ ಮಂಗಳವಾರ ರಾತ್ರಿ ಹಲ್ಲೆ ನಡೆಸಲಾಗಿದೆ.

ಜಯರಾಮ್ ಸ್ವಗ್ರಾಮ ಗುಬ್ಬಿ ತಾಲ್ಲೂಕಿನ ಅಂಕಳಕೊಪ್ಪ ಗ್ರಾಮಕ್ಕೆ ಕಾರಿನಲ್ಲಿ ಬರುತ್ತಿದ್ದಾಗ ಕಾರು ಅಡ್ಡಗಟ್ಟಲಾಗಿದೆ. ತೇಜು ಕಾರಿನಿಂದ ಇಳಿಯುತ್ತಿದ್ದಂತೆ ಹಲ್ಲೆ ನಡೆಸಲಾಗಿದೆ. ಈ ಗದ್ದಲ ಗಮನಿಸಿದ ಗ್ರಾಮದ ಜನರು ಸ್ಥಳಕ್ಕೆ ಬರುತ್ತಿದ್ದಂತೆ ಹಲ್ಲೆ ನಡೆಸಿದವರು ಪರಾರಿಯಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಬಂದ ಪೊಲೀಸರು ಕಾರು, ಲಾಂಗ್, ಮಚ್ಚು, ಖಾರದಪುಡಿ ವಶಪಡಿಸಿಕೊಂಡಿದ್ದಾರೆ.

ಅಂಕಳಕೊಪ್ಪ ಗ್ರಾಮದ ಊರಿನ ಹಬ್ಬಕ್ಕೆ ಬರುತ್ತಿದ್ದ ಸಮಯದಲ್ಲಿ ಈ ಘಟನೆ ನಡೆದಿದೆ. ಜೆಡಿಎಸ್ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ ಎಂದು ಬಿಜೆಪಿ ಮುಖಂಡರು ಆರೋಪಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಂಶಿಕೃಷ್ಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಜನರಿಂದ ಸುಲಿಗೆ–ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ, ದ್ವಿಚಕ್ರ ವಾಹನಗಳಲ್ಲಿ ಸುತ್ತಾಡಿ ಸಾರ್ವಜನಿಕರ ಮೊಬೈಲ್ ಕಿತ್ತೊಯ್ಯುತ್ತಿದ್ದ ಇಬ್ಬರು ಆರೋಪಿಗಳನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅಂದ್ರಹಳ್ಳಿಯ ಎಲ್. ಕಿರಣ್ (27) ಹಾಗೂ ನಿಖಿಲ್ (21) ಬಂಧಿತರು. ಅವರಿಂದ ₹ 4 ಲಕ್ಷ ಮೌಲ್ಯದ 25 ಮೊಬೈಲ್ ಹಾಗೂ 3 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಾಗಡಿ ಮುಖ್ಯರಸ್ತೆಯ ಅಂಜನಾ ನಗರ ಬಸ್ ತಂಗುದಾಣ ಬಳಿ ಏಪ್ರಿಲ್ 1ರಂದು ಯುವತಿಯೊಬ್ಬರು ನಿಂತಿದ್ದರು. ವಿಳಾಸ ಕೇಳುವ ನೆಪದಲ್ಲಿ ಯುವತಿಯನ್ನು ಮಾತನಾಡಿಸಿದ್ದ ಆರೋಪಿಗಳು, ಅವರ ಬಳಿಯಿದ್ದ ಮೊಬೈಲ್ ಕಿತ್ತುಕೊಂಡಿದ್ದರು.'

'ಈ ಬಗ್ಗೆ ಯುವತಿಯ ತಂದೆ ಠಾಣೆಗೆ ದೂರು ನೀಡಿದ್ದರು. ಅದರನ್ವಯ ಆರೋಪಿಗಳನ್ನು ಸೆರೆಹಿಡಿಯಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

'ಜ್ಞಾನಭಾರತಿ, ರಾಜಗೋಪಾಲನಗರ, ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಗಳಲ್ಲೂ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಇವರ ಜೊತೆ ಮತ್ತಷ್ಟು ಆರೋಪಿಗಳು ಕೃತ್ಯದಲ್ಲಿ ಭಾಗಿಯಾಗಿದ್ದಾರೆ' ಎಂದರು.

ಕದ್ದ ವಾಹನದಲ್ಲಿ ಸರಗಳವು

ಬೆಂಗಳೂರು: ದ್ವಿಚಕ್ರ ವಾಹನ ಕದ್ದು ಅದರಲ್ಲೇ ನಗರದಲ್ಲಿ ಸುತ್ತಾಡಿ ಸರಗಳವು ಮಾಡುತ್ತಿದ್ದ ಆರೋಪಿ ಮಜೀಶಾ ಅಹ್ಮದ್ (26) ಎಂಬಾತನನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಾಜಾಜಿನಗರ 6ನೇ ಹಂತದ ನಿವಾಸಿ ಮಜೀಶಾ, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 90 ಸಾವಿರ ಮೌಲ್ಯದ ಚಿನ್ನದ ಸರ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ವಾಹನ ಪರಿಶೀಲನೆ: ಸಿಕ್ಕಿಬಿದ್ದ ಆರೋಪಿ



ಆರೋಪಿಯಿಂದ ಜಪ್ತಿ ಮಾಡಲಾದ ದ್ವಿಚಕ್ರ ವಾಹನಗಳು

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕದ್ದು ಪರಾರಿಯಾಗುತ್ತಿದ್ದ ಆರೋಪಿ ಸಲೀಂ (28), ವಾಹನ ಪರಿಶೀಲನೆ ವೇಳೆಯಲ್ಲೇ ಕಾಮಾಕ್ಷಿಪಾಳ್ಯ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

'ಚಾಮರಾಜಪೇಟೆ ಟಿಪ್ಪುನಗರದ ಸಲೀಂ, ಹಲವು ತಿಂಗಳಿನಿಂದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ. ಆತನಿಂದ ₹3.09 ಲಕ್ಷ ಮೌಲ್ಯದ 5 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಏಪ್ರಿಲ್ 4ರಂದು ಆರೋಪಿ ದ್ವಿಚಕ್ರ ವಾಹನದಲ್ಲಿ ಕೊಟ್ಟಿಗೆಪಾಳ್ಯ ಬಳಿ ತೆರಳುತ್ತಿದ್ದ. ಅದೇ ರಸ್ತೆಯಲ್ಲಿ ಸಿಬ್ಬಂದಿ ವಾಹನಗಳ ತಪಾಸಣೆ ನಡೆಸುತ್ತಿದ್ದರು. ಆರೋಪಿ ವಾಹನ ನಿಲ್ಲಿಸಿ ದಾಖಲೆ ಕೇಳಿದ್ದರು. ಆದರೆ, ಆತ ದಾಖಲೆ ನೀಡಿರಲಿಲ್ಲ. ವಾಹನ ಸಮೇತ ಆರೋಪಿಯನ್ನು ಠಾಣೆಗೆ ಕರೆತಂದು ವಿಚಾರಿಸಿದಾಗ ಕೃತ್ಯ ಬಾಯ್ಬಿಟ್ಟ.' 'ವಿಜಯನಗರ, ಮಾದನಾಯಕನಹಳ್ಳಿ ಸೇರಿದಂತೆ ಹಲವು ಕಡೆಗಳಲ್ಲಿ ಆರೋಪಿ ವಾಹನಗಳನ್ನು ಕದ್ದಿರುವ ಮಾಹಿತಿ ಇದೆ' ಎಂದೂ ಪೊಲೀಸರು ಹೇಳಿದರು.

'ಸುಪ್ರೀಂ' ಮುಖ್ಯ ನ್ಯಾಯಮೂರ್ತಿಯಾಗಿ ರಮಣ ನೇಮಕ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ಎನ್.ವಿ.ರಮಣ ಅವರನ್ನು ರಾಷ್ಟ್ರಪತಿ ರಾಮನಾಥ ಕೋವಿಂದ್ ನೇಮಿಸಿದ್ದಾರೆ. 48ನೇ ಮುಖ್ಯ ನ್ಯಾಯಮೂರ್ತಿಯಾಗಿ ಅವರು 24ರಂದು ಅಧಿಕಾರ ಸ್ವೀಕರಿಸುವರು.

24ರಂದೇ ಸೇವೆಯಿಂದ ನಿವೃತ್ತರಾಗುತ್ತಿರುವ ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬಡೆ ಅವರು ರಮಣ ಅವರ ಹೆಸರನ್ನು ಶಿಫಾರಸು ಮಾಡಿದ್ದರು. ನೇಮಕ ಕುರಿತಂತೆ ಕಾನೂನು ಸಚಿವಾಲಯ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ರಮಣ ಅವರ ಅಧಿಕಾರಾವಧಿ 16 ತಿಂಗಳಾಗಿದ್ದು, 2022ರ ಆಗಸ್ಟ್ 26 ರಂದು ನಿವೃತ್ತರಾಗುವರು. ಆಂಧ್ರ ಪ್ರದೇಶದವರಾದ ಅವರು 2014ರ ಫೆಬ್ರುವರಿ 17ರಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. ಆಂಧ್ರಪ್ರದೇಶ ಹೈಕೋರ್ಟ್ ನ್ಯಾಯಮೂರ್ತಿಯಾಗಿ 2000ರಲ್ಲಿ ನೇಮಕಗೊಂಡಿದ್ದು, ಕೆಲಕಾಲ ಪ್ರಭಾರ ಮುಖ್ಯ ನ್ಯಾಯಮೂರ್ತಿ ಆಗಿದ್ದರು.

ಸಂಕ್ಷಿಪ್ತ ಸುದ್ದಿ

ವರ ಪರಾರಿ

ಬೆಂಗಳೂರು: 'ನನ್ನನ್ನು ಮದುವೆಯಾಗುವುದಾಗಿ ಹೇಳಿ ದಿನಾಂಕ ನಿಗದಿಪಡಿಸಿದ್ದ ಸೋಮಶೇಖರ್ ಎಂಬುವವರು, ಮದುವೆಗೆ 2 ದಿನ ಬಾಕಿ ಇರುವಾಗಲೇ ಯಾವುದೇ ಮಾಹಿತಿ ನೀಡದೇ ಪರಾರಿಯಾಗಿದ್ದಾರೆ' ಎಂದು ಯುವತಿಯೊಬ್ಬರು ಅನ್ನಪೂರ್ಣೇಶ್ವರಿನಗರ ಠಾಣೆಗೆ ದೂರು ನೀಡಿದ್ದಾರೆ.

ಅದರನ್ವಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ವರನಿಗಾಗಿ ಹುಡುಕಾಟ ಆರಂಭಿಸಿದ್ದಾರೆ.

'ಚನ್ನರಾಯಪಟ್ಟಣದ ಸೋಮಶೇಖರ್, ವಿಶ್ವೇಶ್ವರಯ್ಯ ಲೇಔಟ್ ನಿವಾಸಿಯಾದ ಯುವತಿ ಜತೆ ನಿಶ್ಚಿತಾರ್ಥ ಮಾಡಿಕೊಂಡಿದ್ದ. ಕೊರೊನಾ ಸೋಂಕು ಹರುಡುವಿಕೆ ಕಾರಣ ನೀಡಿ ಮದುವೆ ಸದ್ಯಕ್ಕೆ ಬೇಡವೆಂದು ಹೇಳಿದ್ದ. ಆದರೆ, ಹೊಸ ವಾಹನ ಖರೀದಿಸಲೆಂದು ಯುವತಿ ಹಾಗೂ ಅವರ ಮನೆಯವರ ಕಡೆಯಿಂದ ₹ 8 ಲಕ್ಷ ಪಡೆದಿದ್ದರು. ಈ ಸಂಗತಿ ಯುವತಿ ದೂರಿನಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಇದೇ ಮಾರ್ಚ್ 24ರಂದು ಮದುವೆಗೆ ದಿನಾಂಕ ನಿಗದಿ ಮಾಡಲಾಗಿತ್ತು. ಆದರೆ, ಅದಕ್ಕೂ ಎರಡು ದಿನ ಮುನ್ನವೇ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಸೋಮಶೇಖರ್ ಪರಾರಿಯಾಗಿದ್ದಾರೆ.

ವೈದ್ಯ ವಿದ್ಯಾರ್ಥಿನಿ ಆತ್ಮಹತ್ಯೆ

ಕೊಪ್ಪಳ: ಕೊಪ್ಪಳ ವೈದ್ಯ ವಿಜ್ಞಾನ ಸಂಸ್ಥೆ ಮತ್ತು ಆಸ್ಪತ್ರೆಯ (ಕಿಮ್ಸ್) ಎಂಬಿಬಿಎಸ್ ಮೂರನೇ ಸೆಮಿಸ್ಟರ್ ವಿದ್ಯಾರ್ಥಿನಿ ನಿದಾ ರೆಹಮಾನ್ (22) ಅವರು ಕಾಲೇಜಿನ ಹಾಸ್ಟೆಲ್‌ನ ತನ್ನ ಕೊಠಡಿಯಲ್ಲಿ ಸೋಮವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಬೆಂಗಳೂರು ಮೂಲದ ವಿದ್ಯಾರ್ಥಿನಿ ನಿದಾ ಅವರ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತ್ತು. ಇದರಿಂದ ವಿದ್ಯಾಭ್ಯಾಸಕ್ಕೂ ತೊಂದರೆಯಾಗುತ್ತಿತ್ತು. ಅಲ್ಲದೆ ಯುವತಿ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದಳು' ಎಂದು ಪೊಲೀಸರು ತಿಳಿಸಿದ್ದಾರೆ.

'ಈ ಹಿಂದೆ ಎರಡು ಬಾರಿ ಮನೆಯಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದಳು ಎಂದು ಅವರ ತಾಯಿ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಮಂಗಳವಾರ ಪಾಲಕರು ಬಂದು ಶವವನ್ನು ತೆಗೆದುಕೊಂಡು ಹೋಗಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಡ್ರಗ್ಸ್ ಮಾರಾಟಕ್ಕೆ ವಾಟ್ಸ್‌ಆ್ಯಪ್!

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ನಗರದ ಸಿಸಿಬಿ ಪೊಲೀಸರು, ನೈಜೀರಿಯಾ ಪ್ರಜೆಗಳಿಬ್ಬರು ನಡೆಸುತ್ತಿದ್ದ ಡ್ರಗ್ಸ್ ಜಾಲವನ್ನು ಭೇದಿಸಿದ್ದಾರೆ.

'ನಗರದಲ್ಲಿ ತಮ್ಮದೇ ಜಾಲ ರೂಪಿಸಿಕೊಂಡು ವ್ಯವಸ್ಥಿತವಾಗಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ನೈಜೀರಿಯಾದ ಅಂಟೋನಿ ಒಬಲಿಮ್ (43) ಹಾಗೂ ಕ್ವಾಮೆ (32) ಎಂಬುವವರನ್ನು ಬಂಧಿಸಲಾಗಿದೆ. ಅವರಿಂದ ₹ 10 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

'ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿ ಉದ್ಯೋಗಿಗಳಿಗೆ ಆರೋಪಿಗಳು ಡ್ರಗ್ಸ್ ಮಾರುತ್ತಿದ್ದರು. ವಾಟ್ಸ್‌ಆ್ಯಪ್‌ನಲ್ಲಿ ಗ್ರೂಪ್ ರಚಿಸಿದ್ದ ಆರೋಪಿಗಳು, ಅದರಲ್ಲೇ ಗ್ರಾಹಕರನ್ನು ಸದಸ್ಯರನ್ನಾಗಿ ಮಾಡಿಕೊಂಡಿದ್ದರು. ತಮ್ಮ ಬಳಿ ಡ್ರಗ್ಸ್ ಇರುವ ಮಾಹಿತಿಯನ್ನು ಗ್ರೂಪ್‌ನಲ್ಲಿ ಹಾಕುತ್ತಿದ್ದರು ಹಾಗೂ ವ್ಯವಹಾರ ನಡೆಸುತ್ತಿದ್ದರು.'


'ಈ ಬಗ್ಗೆ ಇತ್ತೀಚೆಗಷ್ಟೇ ಮಾಹಿತಿ ಸಿಕ್ಕಿತ್ತು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ. ಗ್ರಾಹಕರನ್ನೂ ಪತ್ತೆ ಮಾಡಲಾಗುತ್ತಿದೆ' ಎಂದೂ ಹೇಳಿದರು.

ತಹಶೀಲ್ದಾರ್ ಅಜಿತ್ ಕುಮಾರ್ ವಿರುದ್ಧ ಬಂಧನ ವಾರೆಂಟ್

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ದೇವಸ್ಥಾನದ ಜಾಗ ಕಬಳಿಕೆ ಸಂಬಂಧ ವರದಿ ಸಲ್ಲಿಸದ ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರ್ ಅಜಿತ್ ಕುಮಾರ್ ಅವರಿಗೆ 25,000 ಸಾವಿರ ದಂಡ ವಿಧಿಸಿರುವ ಕರ್ನಾಟಕ ಭೂ ಕಬಳಿಕ ನಿಷೇಧ ವಿಶೇಷ ನ್ಯಾಯಾಲಯವು ಜಾಮೀನು ಸಹಿತ ಬಂಧನ ವಾರೆಂಟ್ ಹೊರಡಿಸಿದೆ.

ಬಿದರಹಳ್ಳಿ ಹೋಬಳಿಯ ಬೆಳತ್ತೂರು ಗ್ರಾಮದಲ್ಲಿ ಚೌಡೇಶ್ವರಿ ದೇವಾಲಯದ ಸರ್ವೆ 57 ರಲ್ಲಿ ಕೋಟ್ಯಂತರ ರೂಪಾಯಿ ಬೆಲೆಬಾಳುವ 2 ಎಕರೆ 26 ಗುಂಟೆ ಸರ್ಕಾರಿ ಜಮೀನಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಒತ್ತುವರಿ ಮಾಡಿ ನಲವತ್ತಕ್ಕೂ ಹೆಚ್ಚು ಐಷಾರಾಮಿ




ಬಂಗಲೆ, ವಿಲ್ಲಾ, ಜಿಮ್, ಕ್ಲಬ್, ಈಜುಕೊಳ ಇತರೆ ಅಕ್ರಮ ಕಟ್ಟಡಗಳನ್ನು ನಿರ್ಮಾಣ ಮಾಡಿ ಮಾರಾಟ ಮಾಡಲಾಗಿದೆ ಎಂದು ಆರೋಪಿಸಿ ದೂರು ನೀಡಲಾಗಿತ್ತು. ಈ ವೇಳೆ ಬಾಳಪ್ಪ ಹಂದಿಗುಂದ ತಹಶೀಲ್ದಾರ್ ಆಗಿದ್ದರು.

ಈ ಸಂಬಂಧ ಜಿಲ್ಲಾಧಿಕಾರಿಗಳ ಮುಖಾಂತರ ನೋಟಿಸ್ ನೀಡಿ ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿತ್ತು. ವರದಿ ನೀಡುವಂತೆ ನ್ಯಾಯಾಲಯದ ನಿರ್ದೇಶನ ನೀಡಿದ್ದರೂ ತಹಶೀಲ್ದಾರ್ ಅಜಿತ್ ಕುಮಾರ್ ವರದಿ ಸಲ್ಲಿಸಿಲ್ಲ. ಈ ಕಾರಣಕ್ಕೆ ಏಪ್ರಿಲ್ 27 ರಂದು ಬೆಳಿಗ್ಗೆ 11 ಗಂಟೆಗೆ ಖುದ್ದು ಹಾಜರಾಗುವಂತೆ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು ಆದೇಶ ಹೊರಡಿಸಿ ಕೆ.ಆರ್.ಪುರ ಠಾಣಾಧಿಕಾರಿಗೆ ರವಾನಿಸಿದೆ.

'ಈ ಹಿಂದೆ ದೇವಸ್ಥಾನ ಜಾಗ ಜಾತ್ರೆ ಸಮಯದಲ್ಲಿ ಪಲ್ಲಕಿ ನಿಲ್ಲಿಸಲು, ಸರ್ಕಾರಿ ಕಾರ್ಯಕ್ರಮ ಮಾಡಲು ಬಳಕೆ ಆಗುತ್ತಿತ್ತು. ನಾರಾಯಣಸ್ವಾಮಿ, ಲೋಕೇಶ್, ರಂಜಿತ್ ರೆಡ್ಡಿ ಸೇರಿದಂತೆ 63 ಕಬಳಿಕೆ ಮಾಡಿದವರ ಮೇಲೆ ದೂರು ನೀಡಲಾಗಿತ್ತು. ಅಜಿತ್ ಕುಮಾರ್ ಅವರಿಗೆ ನ್ಯಾಯಾಲಯವು ಮೂರು ಸಾರಿ ನೋಟಿಸ್ ನೀಡಿದರೂ ನ್ಯಾಯಾಲಯಕ್ಕೆ ಹಾಜರಾಗಿಲ್ಲ. ಒತ್ತುವರಿದಾರರ ಜೊತೆ ತಹಶೀಲ್ದಾರ್ ಶಾಮಿಲಾಗಿದ್ದಾರೆ' ಎಂದು ದೂರುದಾರ ಬೆಳತ್ತೂರು ಪರಮೇಶ್ ಆರೋಪಿಸಿದರು.

ಎಐಸಿಎಂಎ ಉಪಾಧ್ಯಕ್ಷರಾಗಿ ಡಾ.ಬಿ.ಕೆ. ರವಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಬಿ.ಕೆ.ರವಿ ಅವರು ನವದೆಹಲಿಯ ಅಖಿಲ ಭಾರತ ಸಂವಹನ ಮತ್ತು ಮಾಧ್ಯಮ ಸಂಘದ (ಎಐಸಿಎಂಎ) ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷ ಸ್ಥಾನದ ಅವಧಿ ಮೂರು ವರ್ಷ ಇರುತ್ತದೆ.

ಎಐಸಿಎಂಎಯು ಮಾಧ್ಯಮ ಶಿಕ್ಷಣ ಮತ್ತು ಭಾರತೀಯ ಮಾಧ್ಯಮ ಉದ್ಯಮದ ಸಬಲೀಕರಣಕ್ಕಾಗಿ ಕಾರ್ಯನಿರ್ವಹಿಸುವ ಶಿಕ್ಷಣ ತಜ್ಞರು ಹಾಗೂ ಸಂಶೋಧಕರ ಸಂಸ್ಥೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕರ್ತವ್ಯಲೋಪ: ಪಿಎಸ್‌ಐ, ಕಾನ್‌ಸ್ಟೆಬಲ್ ಅಮಾನತು

ಬೆಂಗಳೂರು: ಪ್ರಕರಣವೊಂದರಲ್ಲಿ ಕರ್ತವ್ಯಲೋಪ ಎಸಗಿರುವ ಆರೋಪದಡಿ ಹಲಸೂರು ಗೇಟ್ ಠಾಣೆಯ ಪಿಎಸ್‌ಐ ಪಿ.ಜಿ.ಸಂತೋಷ್ ಹಾಗೂ ಹೆಡ್ ಕಾನ್‌ಸ್ಟೆಬಲ್ ವೆಂಕಪ್ಪ ಹೂಗಾರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಮಾ.12ರಂದು ಠಾಣಾ ವ್ಯಾಪ್ತಿಯ ಡಿ.ಕೆ.ಮಾರ್ಕೆಟ್‌ನಲ್ಲಿದ್ದ ವ್ಯಾಪಾರಿಯೊಬ್ಬರ ಕಚೇರಿ ಹಾಗೂ ಗೋಲ್ಡ್ ರೀಫೈನರಿ ಅಂಗಡಿ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದರು. ಈ ವೇಳೆ ಅಲ್ಲಿದ್ದ ಕೆಲಸಗಾರರು, ನಗದು,ಚಿನ್ನದ ಗಟ್ಟಿಗಳನ್ನು ತೆಗೆದುಕೊಂಡು ಹೋಗಿದ್ದರು.

ಆದರೆ, ದಾಳಿ ವೇಳೆ ಅಧಿಕಾರಿಗಳು ಕೊಂಡೊಯ್ದಿದ್ದ 266 ಗ್ರಾಂ ಚಿನ್ನದ ಗಟ್ಟಿಯನ್ನು ಆದಾಯ ತೆರಿಗೆ ಇಲಾಖೆಗೆ ಅಥವಾ ಮಾಲೀಕರಿಗೆ ವಾಪಸ್ ನೀಡಿರಲಿಲ್ಲ. ಈ ಬಗ್ಗೆ ಎಂದು ಮಾಲೀಕರು ದೂರು ದಾಖಲಿಸಿದ್ದರು.`

ದಾಳಿ ನಡೆಸಲು ಮೇಲಧಿಕಾರಿಗಳಿಂದ ಪೂರ್ವಾನುಮತಿ ಪಡೆದಿರಲಿಲ್ಲ. ದಾಳಿಯ ವಿಡಿಯೊ ಚಿತ್ರೀಕರಣವೂ ಮಾಡಿರಲಿಲ್ಲ. ದಾಳಿಯ ಬಗ್ಗೆ ಠಾಣಾ ದಿನಚರಿಯಲ್ಲೂ ನಮೂದಿಸಿರಲಿಲ್ಲ. ಆದರೆ, ದಾಳಿಯ ಮರುದಿನ ಅರ್ಜಿದಾರರನ್ನು ಐಟಿ ಅಧಿಕಾರಿಗಳ ಮುಂದೆ ಹಾಜರುಪಡಿಸಿ, ವರದಿ ನೀಡಿರುವುದಾಗಿ ನಮೂದಿಸಿದ್ದರು.

ಮಾ.17ರಂದು ಅರ್ಜಿದಾರರ ಬಳಿ ತೆರಳಿದ್ದ ಅಧಿಕಾರಿಗಳು, ಸದರಿ ಚಿನ್ನದ ಗಟ್ಟಿಯು ಅಂಗಡಿಯಲ್ಲಿ ಸಿಕ್ಕಿರುವುದಾಗಿ ಹೇಳಿಕೆ ನೀಡುವಂತೆ ಒತ್ತಡ ಹೇರಿದ್ದರು. ಅದಕ್ಕೆ ಹೆದರಿದ್ದ ಅರ್ಜಿದಾರ ಚಿನ್ನದ ಗಟ್ಟಿ ಸಿಕ್ಕಿದ್ದು, ಕ್ರಮ ಕೈಗೊಳ್ಳಬಾರದು ಎಂದು ಹೇಳಿಕೆ ನೀಡಿದ್ದರು.

'ಅರ್ಜಿದಾರರಿಂದ ಅನುಕೂಲಕ್ಕೆ ತಕ್ಕಂತೆ ಹೇಳಿಕೆ ನೀಡಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಕರ್ತವ್ಯಲೋಪ ಆರೋಪದಡಿ ಇಬ್ಬರನ್ನೂ ಸೇವೆಯಿಂದ ಅಮಾನತುಗೊಳಿಸಲಾಗಿದೆ' ಎಂದು ಬೆಂಗಳೂರು ಕೇಂದ್ರ ವಿಭಾಗದ ಉಪ ಪೊಲೀಸ್ ಕಮಿಷನರ್ ಆದೇಶ ಹೊರಡಿಸಿದ್ದಾರೆ.

ಬಿಎಸ್ಸಿ: 14 ಚಿನ್ನದ ಪದಕ ಗಳಿಸಿದ ಪ್ರಶಾಂತ್

• ವೆಂಕಟೇಶ ಜಿ.ಎಚ್

ಬಾಗಲಕೋಟೆ: 'ಬಿಎಸ್ಸಿ ಓದಲು ನಮ್ಮೂರ ಸಮೀಪದ ಟಿ.ಬೇಕುಪ್ಪೆಯ ಯೂನಿಯನ್ ಬ್ಯಾಂಕ್‌ನಲ್ಲಿ ₹2.40 ಲಕ್ಷ ಶಿಕ್ಷಣ ಸಾಲ ಸಿಕ್ಕಿತ್ತು. ಈಗ ಬೆಂಗಳೂರಿನ ಜಿಕೆವಿಕೆಯಲ್ಲಿ ಎಂಎಸ್ಸಿಗೆ ಸೀಟ್ ಸಿಕ್ಕಿದೆ. ಮತ್ತೆ ಸಾಲಕ್ಕೆ ಅರ್ಜಿ ಹಾಕಿದ್ದೇನೆ. ಈ ಚಿನ್ನದ ಪದಕಗಳು ಮುಂದಿನ ಓದಿಗೆ ಸಾಲ ಸಿಗುವ ವಿಶ್ವಾಸ ಹೆಚ್ಚಿಸಿವೆ' ಎಂದು ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು ಕುನೂರಿನ ವಿ.ಪ್ರಶಾಂತ್ ಹೇಳಿದಾಗ, ಪಕ್ಕದಲ್ಲಿಯೇ ನಿಂತಿದ್ದ ಅಮ್ಮ ವಸಂತಾ ಮೆಚ್ಚುಗೆಯಿಂದ ಮಗನ ಗಲ್ಲ ಹಿಂಡಿದರು.

ಮಂಗಳವಾರ ಇಲ್ಲಿ ನಡೆದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಪ್ರಶಾಂತ್, ಬಿಎಸ್ಸಿ ತೋಟಗಾರಿಕೆ ಪದವಿಯಲ್ಲಿ 14 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು.

'ಪ್ರಶಾಂತ್ ಇಲ್ಲಿಯವರೆಗೂ ಊರಲ್ಲಿರುವ ಎರಡೂವರೆ ಎಕರೆ ಹೊಲದಲ್ಲಿ ಅಪ್ಪನೊಂದಿಗೆ ಸೇರಿ ರೇಷ್ಮೆ ಬೆಳೆಯುತ್ತಿದ್ದ. ಈಗ ಇಲ್ಲಿ (ಬಾಗಲಕೋಟೆಯಲ್ಲಿ) ಬಂದು ಚಿನ್ನದ ಫಸಲನ್ನೇ ತೆಗೆದಿದ್ದಾನೆ' ಎಂದು ಘಟಿಕೋತ್ಸವಕ್ಕೆ ಕುನೂರಿನಿಂದ ಬಂದಿದ್ದ ಅಜ್ಜ ಚೆನ್ನೇಗೌಡರು ಖುಷಿಪಟ್ಟರು.

'ಬಾಲ್ಯದಿಂದಲೂ ನನಗೆ ಕೃಷಿ ಖುಷಿ ನೀಡುವ ಸಂಗತಿ. ಹೀಗಾಗಿಯೇ ಪಿಯುಸಿಯಲ್ಲಿ ಶೇ 93.87 ಅಂಕ ಬಂದಿದ್ದರೂ ಎಂಜಿನಿಯರಿಂಗ್ ಅಥವಾ ಬೇರೆ ಯಾವುದೇ ವಿಷಯ ಆಯ್ದುಕೊಳ್ಳಲಿಲ್ಲ' ಎಂದು ಪ್ರಶಾಂತ್ ಹೇಳಿದರು.



ವಿ. ಪ್ರಶಾಂತ್ ಪದಕಗಳ ಗುಚ್ಛ ಪ್ರದರ್ಶಿಸಿದರು. ಅಮ್ಮ ವಸಂತಾ ಹಾಗೂ ಅಜ್ಜ ಚೆನ್ನೇಗೌಡ ಇದ್ದಾರೆ ಪ್ರಜಾವಾಣಿ ಚಿತ್ರ/ ಸಿದ್ದು ಗೌಡರ

ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಹರಳಹಳ್ಳಿಯ ಪುಷ್ಪಾ ಎಚ್.ಎ ಅವರು ಬಿಎಸ್ಸಿ ತೋಟಗಾರಿಕೆಯಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಗಳಿಸಿದರು.

ಐಎಎಸ್ ಅಧಿಕಾರಿಯಾಗುವೆ: ಎಂಎಸ್ಸಿ ತರಕಾರಿ ವಿಜ್ಞಾನ ಹಾಗೂ ಹಣ್ಣು ವಿಜ್ಞಾನ ವಿಷಯಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಜಂಗಮಕೋಟೆಯ ಪೃಥ್ವಿ ಬಸವರಾಜ್ ಹಾಗೂ ಕೊಡಗು ಜಿಲ್ಲೆ ಕುಶಾಲನಗರ ಬಳಿಯ ದಂಡಿನ ಪೇಟೆಯ ವೀಣಾ ಸಿ.ಡಿ ತಲಾ ನಾಲ್ಕು ಚಿನ್ನದ ಪದಕಗಳನ್ನು ಪಡೆದರು.

ಜಂಗಮಕೋಟೆಯಲ್ಲಿ ಎರಡು ಎಕರೆ ಒಣಭೂಮಿಯೇ ಪೃಥ್ವಿ ಅವರ ಕುಟುಂಬಕ್ಕೆ ಆಸರೆ. 'ನಮ್ಮೂರಲ್ಲಿ ಸಾವಿರ ಅಡಿ ಆಳ ಕೊರೆಸಿದರೂ ನೀರಿನ ಪಸೆ ಸಿಗುವುದಿಲ್ಲ. ಹೀಗಾಗಿ ನೀರಿನ ಅಲಭ್ಯತೆಯನ್ನೇ ಸವಾಲಾಗಿ ಸ್ವೀಕರಿಸಿ ಬೆಳೆ ತೆಗೆಯುವ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸುವೆ. ಮುಂದೆ ಐಎಎಸ್ ಅಧಿಕಾರಿ ಯಾಗುವ ಆಸೆಯಿದೆ' ಎಂದು ಪೃಥ್ವಿ ಹೇಳಿದರು.

'ಮಗಳು ಬಟರ್‌ಫ್ರೂಟ್ ಮೇಲೆ ಸಂಶೋಧನೆ ಕೈಗೊಂಡಿದ್ದಾಳೆ. ಅವಳು ಇಡೀ ದೇಶಕ್ಕೆ ನೆರವಾಗುವಂತಹ ಸಾಧನೆ ಮಾಡಲಿ' ಎಂದು ದಂಡಿನಪೇಟೆಯ ವೀಣಾ ಅವರ ತಾಯಿ ಆಶಾರಾಣಿ ಸಂತಸ ಹಂಚಿಕೊಂಡರು. ಆಶಾರಾಣಿ ಕಂದಾಯ ಇಲಾಖೆಯ ನಿವೃತ್ತ ಸಿಬ್ಬಂದಿ.

ವಿಶ್ವವಿದ್ಯಾಲಯದ ಕುಲಾಧಿಪತಿಯೂ ಆದ ತೋಟಗಾರಿಕೆ ಸಚಿವ ಆರ್. ಶಂಕರ್ ಪದವಿ ಪ್ರದಾನ ಮಾಡಿದರು. ಕುಲಪತಿ ಡಾ.ಕೆ.ಎಂ.ಇಂದಿರೇಶ ಹಾಜರಿದ್ದರು.

ವಿದ್ಯುತ್ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಇದೇ 8 ಮತ್ತು 9ರಂದು ಬೆಳಿಗ್ಗೆ 10ರಿಂದ ಸಂಜೆ 6ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಭುನೇವಶ್ವರಿ ನಗರ, 8ನೇ ಮುಖ್ಯರಸ್ತೆ, ಎಸ್‌ಬಿಐ ಬ್ಯಾಂಕ್ ರಸ್ತೆ, ಮಹೇಶ್ವರಿ ನಗರ, ಕಲ್ಯಾಣನಗರ, ಮಹೇಶ್ವರಮ್ಮ ದೇಗುಲ, ಶಿವ ದೇಗುಲ ಹಾಗೂ ಗಂಗಾಧರೇಶ್ವರ ದೇವಸ್ಥಾನದ ಸುತ್ತ–ಮುತ್ತ, ಹೆಸರಘಟ್ಟ ಮುಖ್ಯರಸ್ತೆ, ಭುವನೇಶ್ವರಿ ನಗರ 9 ಮತ್ತು 10ನೇ ಮುಖ್ಯರಸ್ತೆ, ಎಲೈಟ್ ಹೋಟೆಲ್, ಪಾಂಡುರಂಗ ಬಡಾವಣೆ, ಮಲ್ಲಸಂದ್ರ ಸುತ್ತ–ಮುತ್ತಲಿನ ಪ್ರದೇಶ.

ಕೆಂಗೇರಿ ಉಪವಿಭಾಗ ವ್ಯಾಪ್ತಿಯಲ್ಲಿ 8ರಂದು ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಭೈರವೇಶ್ವರ ಕೈಗಾರಿಕಾ ಪ್ರದೇಶ, ನೀಲಗಿರಿ ತೋಪು, ನಾಗರಹೊಳೆ ನಗರ, ಹೇರೋಹಳ್ಳಿ ಪೈಪ್‌ಲೈನ್ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

10 ಪ್ರಶ್ನೆಗಳಿಗೆ ಉತ್ತರಿಸಿದವ ಸಾವಿರ ರೂಪಾಯಿ ಸರದಾರ

ಕಂಬಿಗಳ ಕತ್ತಲ ಹಿಂದೆ ಕವಿಗಳಾದ ಕೈದಿಗಳು

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಅಪರಾಧ ಕೃತ್ಯಗಳಲ್ಲಿ ಶಿಕ್ಷೆಗೆ ಒಳಗಾಗಿ ಬಂಧಿಯಾಗಿರುವ ಕೈದಿಗಳು ತಮ್ಮ ಅನುಭವಗಳನ್ನು ಕವನದ ಮೂಲಕ ಹೊರಹಾಕಿದ್ದು, ಶಿವಮೊಗ್ಗ ಕೇಂದ್ರ ಕಾರಾಗೃಹದ ಅಧಿಕಾರಿಗಳು ಅವುಗಳಿಗೆ ಸಂಕಲನದ ರೂಪ ನೀಡಿದ್ದಾರೆ.

53 ಕೈದಿಗಳ ಕವನಗಳು 'ಬಂಧನದ ಭಾವಲಹರಿ' ಸಂಕಲನವಾಗಿ ಮೂಡಿ ಬಂದಿದೆ. ಕಾರಾಗೃಹದಲ್ಲಿ ಕೈದಿಗಳ ಮನಃಪರಿವರ್ತನೆಗೆ ಮುನ್ನುಡಿ ಬರೆದಿದ್ದ ಮುಖ್ಯ ಅಧೀಕ್ಷಕರಾಗಿದ್ದ ಡಾ.ಕೆ. ರಂಗನಾಥ್‌ಅವರ ಕುರಿತು ರವಿಚಂದ್ರನ್ ಬರೆದ 'ಯಾರು ನೀವು?' ಕವನ ಇಡೀ ಕಾರಾಗೃಹದ ಕೈದಿಗಳಲ್ಲಿ ಅಡಗಿದ್ದ ಕವಿತ್ವ ಹೊರತೆಗೆಯಲು ಮುನ್ನುಡಿ ಬರೆದಿತ್ತು. ಕಾರಾಗೃಹದ 150ಕ್ಕೂ ಹೆಚ್ಚು ಕೈದಿಗಳು ವಿಭಿನ್ನ ಕವನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಆಯ್ದ ಕವನಗಳನ್ನು ಸಂಕಲನವಾಗಿ ಪ್ರಕಟಿಸಲಾಗಿದೆ.


ಅಪರಾಧ ಕೃತ್ಯ ಎಸಗಲು ಕಾರಣವಾದ ವಾತಾವರಣ, ಕೃತ್ಯ ನಡೆಸಿದ ನಂತರದ ಪಶ್ಚಾತ್ತಾಪ, ಸಮಾಜ, ಕುಟುಂಬದಿಂದ ದೂರವಾದ



ಬಂಧನದ ಭಾವಲಹರಿ

ನೋವು, ಕುಟುಂಬದ ಕನವರಿಕೆ, ಕಂಬಿಗಳ ಮಧ್ಯೆ ಕಳೆಯುವ ಯಾತನೆ, ಅಲ್ಲಿನ ಸ್ಥಿತಿಗತಿ, ಕಾಡುವ ವೇದನೆಗಳು, ಬಂಧಿಯಾದ ನಂತರ ಅರಿವಿಗೆ ಬಂದ ಸಮಾಜದ ಮಹತ್ವ, ಒಡಲಾಳದಲ್ಲಿ ಹೆಪ್ಪುಗಟ್ಟಿದ ದುಃಖ, ನೋವುಗಳನ್ನು ಒಬ್ಬರಿಗಿಂತ ಒಬ್ಬರು ಪರಿಣಾಮಕಾರಿಯಾಗಿ ಅಕ್ಷರ ರೂಪಕ್ಕೆ ಇಳಿಸಿದ್ದಾರೆ. ಬಹುತೇಕ ಕವನಗಳು ಓದುಗರ ಹೃದಯ ತಟ್ಟಿ ಕಣ್ಣಂಚಿನಲ್ಲಿ ನೀರು ಜಿನುಗಿಸುತ್ತವೆ.

ಅಕ್ಷರ ಕಲಿತು ಕವಿತೆ ಕಟ್ಟಿದರು: ಕಾರಾಗೃಹದಲ್ಲಿನ ಅಕ್ಷರ ಕಲಿಯದ ಕೈದಿಗಳಿಗೆ ಲಾಕ್‌ಡೌನ್ ಅವಧಿಯಲ್ಲಿ ಸದ್ದಿಲ್ಲದೇ ಅಕ್ಷರ ಕಲಿಸುವ ಕಾರ್ಯ ಆರಂಭಿಸಲಾಗಿತ್ತು. ಈ ಅಭಿಯಾನದ ಮೂಲಕ 162 ಕೈದಿಗಳು ಸಾಕ್ಷರರಾಗಿದ್ದಾರೆ. ಅಕ್ಷರ ಕಲಿತ ಹಲವರು ಸ್ವತಃ ಕವಿತೆ ಬರೆದಿದ್ದಾರೆ.



ಕೈದಿಗಳಿಗೆ ಕನ್ನಡದ ಉತ್ತಮ ಪುಸ್ತಕಗಳನ್ನು ಓದುವ ಅವಕಾಶ ಕಲ್ಪಿಸಿದೆವು. ಇದು ಅವರಲ್ಲೂ ಬರೆಯುವ ಆಸೆ ಮೊಳಕೆಯೊಡೆಯಲು ಪ್ರೇರಣೆಯಾಯಿತು

ಡಾ.ಕೆ.ರಂಗನಾಥ್
ಮುಖ್ಯ ಅಧೀಕ್ಷಕ, ಪರಿವರ್ತನೆಯ ರೂವಾರಿ

ಪ್ರತಿ ತಿಂಗಳು ಸಾವಿರ ರೂಪಾಯಿ ಸರದಾರ: ಕೈದಿಗಳಿಗೆ ಪ್ರತಿ ತಿಂಗಳು ಕನ್ನಡದ ಕೋಟ್ಯಧಿಪತಿ ಮಾದರಿಯಲ್ಲಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಒಬ್ಬರಿಗೆ 10 ಪ್ರಶ್ನೆಗಳಿರುತ್ತವೆ. ಪ್ರತಿ ಪ್ರಶ್ನೆಗೆ ₹ 100 ಬಹುಮಾನ. 10 ಪ್ರಶ್ನೆಗಳಿಗೂ ಸರಿ ಉತ್ತರ ನೀಡಿದವರಿಗೆ ₹ 1 ಸಾವಿರ ನಗದು ಹಾಗೂ 'ಸಾವಿರ ರೂಪಾಯಿ ಸರದಾರ' ಬಿರುದು ನೀಡಿ ಗೌರವಿಸಲಾಗುತ್ತಿದೆ. ಇದುವರೆಗೆ ಇಂಥ ಐದು ಕಾರ್ಯಕ್ರಮಗಳು ನಡೆದಿವೆ.

ಗಮನ ಸೆಳೆದ ಸರಿಗಮಪ: ಭಕ್ತಿಗೀತೆ, ಭಾವಗೀತೆ, ಜಾನಪದ, ಪಲ್ಲವಿಚರಣ, ಎಸ್‌ಪಿಬಿ ಸ್ವರನಾದ ಒಳಗೊಂಡ ಸರಿಗಮಪ ಕಾರ್ಯಕ್ರಮ ನಿರಂತರವಾಗಿ ಆಯೋಜಿಸುತ್ತಾ ಬಂದಿದ್ದಾರೆ. ಇದುವರೆಗೂ ಆರು ಸುತ್ತು ಆಗಿದೆ. ಜಾನಪದ ಕಲೆಗಳಿಗೆ ಒತ್ತು ನೀಡಲಾಗಿದ್ದು, ಕೈದಿ ಅಣ್ಣಪ್ಪ ಭಂಡಾರಿ ಕಾರಾಗೃಹದಲ್ಲೇ ಯಕ್ಷಗಾನ ಕಲಿತು ರಾಜ್ಯದ ಹಲವೆಡೆ ಯಶಸ್ವಿ ಪ್ರದರ್ಶನ ನೀಡಿದ್ದಾರೆ. ಕೃಷ್ಣಪ್ಪ ಅವರ ವೀರಗಾಸೆ, ಸುರೇಶ್ ಆಚಾರಿ ಅವರ ಚಿತ್ರಕಲೆ ಜನಮನ್ನಣೆ ಗಳಿಸಿವೆ. 12 ಕೈದಿಗಳು ರೂಪಿಸಿದ 'ಪುಣ್ಯಕೋಟಿ' ರೂಪಕ ನ್ಯಾಯಾಧೀಶರ ಕಣ್ಣಲ್ಲೂ ನೀರು ತರಿಸಿದೆ.

ಕೊರೊನಾ ನಿಯಂತ್ರಣ: ಬಿಬಿಎಂಪಿ ಅಧಿಕಾರಿಗಳ ಸಭೆಯಲ್ಲಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ

ಕೋವಿಡ್ ಲಸಿಕೆ ನೀಡುವಿಕೆ ದ್ವಿಗುಣಗೊಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಕೋವಿಡ್ ಸೋಂಕು ಹೆಚ್ಚಳವಾಗುತ್ತಿದೆ. ಇದನ್ನು ನಿಯಂತ್ರಿಸಲು ಕೋವಿಡ್ ಲಸಿಕೆ ನೀಡುವಿಕೆಯನ್ನು ದ್ವಿಗುಣಗೊಳಿಸಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಎಲ್ಲ ವಲಯಗಳ ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ ನಿಯಮಗಳ ಪಾಲನೆ, ಲಸಿಕೆ ಅಭಿಯಾನ ಹಾಗೂ ಕೋವಿಡ್ ಪರೀಕ್ಷೆಗಳ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಎಲ್ಲ ವಲಯ ಆಯುಕ್ತರು, ಜಂಟಿ ಆಯುಕ್ತರು ಹಾಗೂ ಆರೋಗ್ಯಾಧಿಕಾರಿಗಳ ಜೊತೆ ಮುಖ್ಯ ಆಯುಕ್ತರು ಮಂಗಳವಾರ ಸಮಾಲೋಚನೆ ನಡೆಸಿದರು.

'ನಗರದಲ್ಲಿ ಪ್ರತಿನಿತ್ಯ ಸುಮಾರು 35 ಸಾವಿರ ಮಂದಿಗೆ ಲಸಿಕೆ ನೀಡಲಾಗುತ್ತಿದೆ. ಈ ಸಂಖ್ಯೆಯನ್ನು ಹೆಚ್ಚಳ ಮಾಡಬೇಕಾದರೆ ಲಸಿಕೆ ಪಡೆಯಲು ಅರ್ಹರಿರುವವರು ಇದರ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸಬೇಕು. ಆಶಾ ಕಾರ್ಯಕರ್ತೆಯರು ಈ ಬಗ್ಗೆ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸಬೇಕು' ಎಂದು ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬೇಡಿಕೆಯಷ್ಟು ಕೋವಿಡ್ ಲಸಿಕೆ ಲಭ್ಯವಿದೆ. ಬುಧವಾರ ಮತ್ತೆ 2 ಲಕ್ಷ ಲಸಿಕೆ ಬಿಬಿಎಂಪಿಗೆ ಪೂರೈಕೆ ಆಗಲಿದೆ ಎಂದು ಹೇಳಿದರು.

'ನಗರದಲ್ಲಿ ಈಗಾಗಲೇ ಹಜ್ ಭವನ್ ಹಾಗೂ ಎಚ್‌ಎಎಲ್‌ನ ಸಭಾಂಗಣದಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ರೋಗಲಕ್ಷಣಗಳಿಲ್ಲದ ಸೋಂಕಿತರ ಪ್ರತ್ಯೇಕ ವಾಸಕ್ಕಾಗಿ ಎಲ್ಲ ವಲಯಗಳಲ್ಲಿ ಎರಡು– ಮೂರು ಕಡೆ ತಲಾ 50 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಬೇಕಿದೆ. ಇದಕ್ಕಾಗಿ ಹೋಟೆಲ್‌ಗಳನ್ನು ಅಥವಾ ಬಳಕೆಯಾಗದ ಕಟ್ಟಡಗಳನ್ನು ಗುರುತಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದರು.

'ಕೋವಿಡ್ ನಿಯಮಗಳನ್ನು ಪಾಲಿಸದೆ ಒಂದೇ ಕಡೆ ಹೆಚ್ಚು ಜನ ಸೇರುವುದರ ಮೇಲೆ ನಿಗಾ ಇಡುವಂತೆ ಸೂಚಿಸಿದ್ದೇನೆ. ಇಂತಹ ಪ್ರಕರಣಗಳು ಕಂಡು ಬಂದರೆ ಆ ಕಟ್ಟಡಗಳನ್ನು ಸೀಲ್ ಮಾಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ' ಎಂದು ಹೇಳಿದರು.

ಸಭೆಯಲ್ಲಿ ವಿಶೇಷ ಆಯುಕ್ತರಾದ ರಾಜೇಂದ್ರ ಚೋಳನ್, ಡಿ. ರಂದೀಪ್, ತುಳಸಿ ಮದ್ದಿನೇನಿ, ರೆಡ್ಡಿ ಶಂಕರ ಬಾಬು, ಮನೋಜ್ ಜೈನ್, ಎಸ್.ಬಸವರಾಜು, ಎಸ್.ಜಿ. ರವೀಂದ್ರ, ಮುಖ್ಯ ಆರೋಗ್ಯಾಧಿಕಾರಿ ಡಾ. ಬಿ.ಕೆ.ವಿಜಯೇಂದ್ರ, ವಲಯಗಳ ಜಂಟಿ ಆಯುಕ್ತರು, ಆರೋಗ್ಯಾಧಿಕಾರಿಗಳು ಸಲಹೆ ನೀಡಿದರು.

ಹೊರರಾಜ್ಯಗಳಿಂದ ಬರುವವರಿಗೆ ಪ್ರತ್ಯೇಕವಾಸ ಕಡ್ಡಾಯ?

'ಹೊರರಾಜ್ಯಗಳಿಂದ ನಗರಕ್ಕೆ ಬರುತ್ತಿರುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಅಂತಹವರು ಸ್ವಯಂ ಪ್ರತ್ಯೇಕವಾಸಕ್ಕೆ ಒಳಗಾಗಬೇಕು. ಇಲ್ಲದಿದ್ದರೆ ಅವರಿಗೆ ಪ್ರತ್ಯೇಕವಾಸವನ್ನು ಕಡ್ಡಾಯಗೊಳಿಸಬೇಕು. ಕೋವಿಡ್ ಪರೀಕ್ಷೆ ನಡೆಸಿ ಅವರಿಗೆ ಸೋಂಕು ಇಲ್ಲ ಎಂಬುದು ದೃಢಪಟ್ಟ ನಂತರವೇ ಹೊರಗಡೆ ಓಡಾಡಲು ಅವಕಾಶ ಕಲ್ಪಿಸಬೇಕು. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು' ಎಂದು ಮುಖ್ಯ ಆಯುಕ್ತರು ತಿಳಿಸಿದರು.

ಮಹಾರಾಷ್ಟ್ರ, ಪಂಜಾಬ್ ಹಾಗೂ ಕೇರಳದಲ್ಲಿ ಹೆಚ್ಚು ಕೋವಿಡ್ ಪ್ರಕರಣಗಳು ಕಂಡುಬರುತ್ತಿವೆ. ಹಾಗಾಗಿ ಹೊರರಾಜ್ಯಗಳಿಂದ ವಿಮಾನ, ಬಸ್ ಹಾಗೂ ರೈಲಿನ ಮೂಲಕ ಬರುವವರ ಮೇಲೆ ನಿಗಾವಹಿಸಬೇಕು. ಅವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲು ಕ್ರಮಕೈಗೊಳ್ಳಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

'ತಳ ಹಂತದಲ್ಲಿ ಕೋವಿಡ್ ಪರೀಕ್ಷೆ ಹೆಚ್ಚಿಸಿ'

'ತಳ ಹಂತದಲ್ಲಿ ಕೋವಿಡ್ ಪರೀಕ್ಷೆ ಹೆಚ್ಚಿಸುವ ಮೂಲಕ ಸೋಂಕು ಪತ್ತೆ ದರವನ್ನು ಕಂಡುಕೊಳ್ಳಬೇಕು. ಅದನ್ನು ಆಧರಿಸಿ ಸೋಂಕು ನಿಯಂತ್ರಣಕ್ಕೆ ಅಗತ್ಯ ಕ್ರಮಕೈಗೊಳ್ಳಬೇಕು' ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ಸೂಚನೆ ನೀಡಿದರು.

'ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಕಡೆ ಹೆಚ್ಚು ಹೆಚ್ಚು ಕೋವಿಡ್ ಪರೀಕ್ಷೆಗಳನ್ನು ಮಾಡಬೇಕು. ವಾರ್ಡ್ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟದಲ್ಲಿ ಪರೀಕ್ಷೆ ನಡೆಸುವುದರ ಜೊತೆಗೆ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೂ ಕೋವಿಡ್ ಪರೀಕ್ಷೆ ನಡೆಸಬೇಕು' ಎಂದು ಸಲಹೆ ನೀಡಿದರು.

ನಗರದಾದ್ಯಂತ ಏ.20ವರೆಗೆ ನಿಷೇಧಾಜ್ಞೆ: ಪಂತ್ ಆದೇಶ

ಪ್ರಜಾವಾಣಿ ವಾರ್ತೆ



ಕಮಲ್ ಪಂತ್

ಬೆಂಗಳೂರು: 'ಕೋವಿಡ್ ನಿಯಂತ್ರಣಕ್ಕಾಗಿ ನಗರದಾದ್ಯಂತ ಕೋವಿಡ್ ನಿಯಮಾವಳಿ ಜಾರಿಯಲ್ಲಿದ್ದು, ಇದರನ್ವಯ ಏ.20ರ ಮಧ್ಯರಾತ್ರಿವರೆಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಆದೇಶ ಹೊರಡಿಸಿದ್ದಾರೆ.


'ಈ ವೇಳೆ ನಗರದಲ್ಲಿ ಯಾವುದೇ ಗುಂಪು ಅಥವಾ ಸಂಘಟನೆಗಳು ಪ್ರತಿಭಟನೆ, ಧರಣಿ, ರ‍್ಯಾಲಿ, ಮುಷ್ಕರ ನಡೆಸುವಂತಿಲ್ಲ. ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ಎಚ್ಚರಿಸಿದ್ದಾರೆ.

'ಧಾರ್ಮಿಕ ಸ್ಥಳಗಳಲ್ಲಿ ಗುಂಪು ಪ್ರಾರ್ಥನೆಗೆ ಅವಕಾಶ ಇರುವುದಿಲ್ಲ. ಕಾರ್ಯಕ್ರಮಗಳಲ್ಲೂ ಹೆಚ್ಚು ಜನ ಸೇರುವಂತಿಲ್ಲ. ಈಜುಕೊಳ ಹಾಗೂ ಜಿಮ್‌ಗಳಲ್ಲಿ ಶೇ 50 ಮಂದಿಯೊಂದಿಗೆ ಕಾರ್ಯನಿರ್ವಹಿಸಬೇಕು. ಪಬ್, ಬಾರ್, ಕ್ಲಬ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಶೇ 50ರಷ್ಟು ಮಂದಿಗೆ ಆಸನ ವ್ಯವಸ್ಥೆ ಇರಬೇಕು'.

'ಮಾಲ್, ಮಾರುಕಟ್ಟೆ, ಕಿರಾಣಿ ಅಂಗಡಿಗಳು ಸೇರಿದಂತೆ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು, ಸ್ಯಾನಿಟೈಸರ್ ಬಳಕೆ ಸೇರಿದಂತೆ ಎಲ್ಲ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ನಿಯಮ ಉಲ್ಲಂಘಿಸಿದರೆ ಅಂತಹ ಸ್ಥಳಗಳನ್ನು ಮುಚ್ಚಲಾಗುವುದು'.

'ಸೂಚಿತ ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ, ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ ಹಾಗೂ ಐಪಿಸಿ ಸೆಕ್ಷನ್ 188ರಡಿ ಪ್ರಕರಣ ದಾಖಲಿಸಲಾಗುವುದು' ಎಂದೂ ಆದೇಶದಲ್ಲಿ ಎಚ್ಚರಿಸಿದ್ದಾರೆ.

ನಗರದ ಕೋವಿಡ್ ಪ್ರಕರಣಗಳು



ಚಿಕಿತ್ಸೆಗೆ ಹಾಸಿಗೆ ಹೆಚ್ಚಿಸಲು ಸೂಚನೆ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಮೀಸಲಿಟ್ಟ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಸೂಚನೆ ನೀಡಿದರು.

ಅವರು ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಆಸ್ಪತ್ರೆಯಲ್ಲಿ ಪ್ರಸ್ತುತ 150 ಹಾಸಿಗೆಗಳನ್ನು ಮಾತ್ರ ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ಮೀಸಲಿಡಲಾಗಿದೆ.

ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆ ನೀಡಲು ಮೂರು ಕೇಂದ್ರಗಳನ್ನು ತೆರೆಯಲಾಗಿದೆ. ಪ್ರತಿ ಕೇಂದ್ರದಲ್ಲಿ 100 ಮಂದಿಗೆ ಲಸಿಕೆ ನೀಡಬಹುದು. ಆದರೂ ಇಲ್ಲಿ ನಿತ್ಯ 100ರಿಂದ 120 ಮಂದಿಗಷ್ಟೇ ಲಸಿಕೆ ನೀಡಲಾಗುತ್ತಿದೆ.

'ಇಲ್ಲಿ ಕನಿಷ್ಠ ಪಕ್ಷ 300 ಮಂದಿಗೆ ಲಸಿಕೆ ನೀಡಲು ಕ್ರಮ ಕೈಗೊಳ್ಳಬೇಕು. ಆಸ್ಪತ್ರೆಗೆ ಬರುವ ಹೊರರೋಗಿಗಳೂ ಇಲ್ಲಿ ಲಸಿಕೆ ಪಡೆಯಲು ಅವಕಾಶ ಕಲ್ಪಿಸಬೇಕು' ಎಂದು ಗೌರವ ಗುಪ್ತ ಸಲಹೆ ನೀಡಿದರು. ಬಿಬಿಎಂಪಿಯ ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್, ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜಯೇಂದ್ರ, ಪಶ್ಚಿಮ ವಲಯ ಆರೋಗ್ಯಾಧಿಕಾರಿ ಡಾ.ಮನೋರಂಜನ್ ಹೆಗ್ಡೆ ಜತೆಯಲ್ಲಿದ್ದರು.

ಕೋವಿಡ್ ನಿಯಂತ್ರಣ ಮಾರ್ಗಸೂಚಿ ಉಲ್ಲಂಘನೆಗೆ ದಂಡ • ಬಿಬಿಎಂಪಿ ಆರೋಗ್ಯ ಅಧಿಕಾರಿಗಳ ತಂಡದಿಂದ ದಾಳಿ

ಮಳಿಗೆ, ಹೋಟೆಲ್ ಸೇರಿ ಆರು ಉದ್ದಿಮೆಗಳಿಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗಡಿ, ಮಳಿಗೆಗಳು ಹಾಗೂ ಹೋಟೆಲ್‌ಗಳಲ್ಲಿ ಕೋವಿಡ್ ನಿಯಂತ್ರಣದ ಮಾರ್ಗಸೂಚಿಗಳ ಪಾಲನೆ ಮಾಡದಿರುವುದು ಬಿಬಿಎಂಪಿ ಗಂಭೀರವಾಗಿ ಪರಿಗಣಿಸಿದೆ. ನಿಯಮ ಉಲ್ಲಂಘಿಸಿರುವ ಹೋಟೆಲ್, ಮಳಿಗೆಗಳು ಸೇರಿದಂತೆ ಆರಕ್ಕೂ ಅಧಿಕ ಉದ್ದಿಮೆಗಳನ್ನು ಬಿಬಿಎಂಪಿ ಅಧಿಕಾರಿಗಳು ಮಂಗಳವಾರ ಮುಚ್ಚಿಸಿದ್ದಾರೆ. ಹತ್ತಕ್ಕೂ ಅಧಿಕ ಸಂಸ್ಥೆಗಳಿಗೆ ದಂಡ ವಿಧಿಸಿದ್ದಾರೆ.

ಮಹದೇವಪುರ ವಲಯದಲ್ಲಿ ಫೀನಿಕ್ಸ್ ಮಾಲ್‌ನಲ್ಲಿ ಬಿಗ್‌ಬಜಾರ್, ಬಫೆಲೊ ವೈಲ್ಡ್ ವಿಂಗ್ಸ್ ರೆಸ್ಟೋರೆಂಟ್‌ಗಳನ್ನು ಕೋವಿಡ್ ನಿಯಮ ಉಲ್ಲಂಘನೆ ಕಾರಣಕ್ಕೆ ಮುಚ್ಚಿಸಲಾಗಿದೆ.

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ಮುದ್ದಿನಪಾಳ್ಯದ ಡಿ-ಗ್ರೂಪ್ ಬಡಾವಣೆಯ ರಿಲಯನ್ಸ್ ಫ್ರೆಶ್ ಮಾರ್ಟ್ ಹಾಗೂ ಉಡುಪಿ ಕೈರುಚಿ ಹೋಟೆಲ್‌ಗಳಿಗೆ ಬಿಬಿಎಂಪಿ ಅಧಿಕಾರಿಗಳು ಬೀಗ ಹಾಕಿಸಿದ್ದಾರೆ.

ರಾಜರಾಜೇಶ್ವರಿನಗರ ವಲಯದ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ನೇತೃತ್ವದ ಅಧಿಕಾರಿಗಳ ತಂಡವು ಕೋವಿಡ್ ನಿಯಮಗಳ ಪಾಲನೆ ಪರಿಶೀಲನೆ ನಡೆಸುತ್ತಿತ್ತು. ಈ ವೇಳೆ ರಿಲಯನ್ಸ್ ಫ್ರೆಶ್ ಮಾರ್ಟ್ ಹಾಗೂ 'ಉಡುಪಿ ಕೈರುಚಿ' ಹೋಟೆಲ್‌ಗಳು ಕೋವಿಡ್ ಸೋಂಕು ಹರಡದಂತೆ ತಡೆಯಲು ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸದಿರುವುದು ಕಂಡು ಬಂದಿತ್ತು.



ಕೋವಿಡ್ ನಿಯಂತ್ರಣ ನಿಯಮ ಪಾಲಿಸಲು ಕ್ರಮ ಕೈಗೊಳ್ಳದ ಕಾರಣಕ್ಕೆ ಮುದ್ದಿನ ಪಾಳ್ಯದ ರಿಲಯನ್ಸ್ ಫ್ರೆಶ್ ಮಾರ್ಟ್ ಮಳಿಗೆಯನ್ನು ಬಿಬಿಎಂಪಿ ಅಧಿಕಾರಿಗಳು ಮಂಗಳವಾರ ಮುಚ್ಚಿಸಿದರು

'ರಿಲಯನ್ಸ್ ಫ್ರೆಶ್ ಮಾರ್ಟ್‌ನಲ್ಲಿ ಹಾಗೂ ಉಡುಪಿ ಕೈರುಚಿ ಹೋಟೆಲ್‌ನಲ್ಲಿ ಯಾರೂ ಮಾಸ್ಕ್ ಧರಿಸಿರಲಿಲ್ಲ. ಸೋಂಕು ನಿವಾರಕ ದ್ರಾವಣದಿಂದ ಕೈ ತೊಳೆಯುವ ವ್ಯವಸ್ಥೆಯನ್ನೂ ಇಲ್ಲಿ ಕಲ್ಪಿಸಿರಲಿಲ್ಲ. ಗ್ರಾಹಕರ ದೇಹದ ಉಷ್ಣಾಂಶ ತಪಾಸಣೆಗೂ ವ್ಯವಸ್ಥೆ ಮಾಡಿರಲಿಲ್ಲ. ಹಾಗಾಗಿ ಇವುಗಳನ್ನು ಮುಚ್ಚಲಾಗಿದೆ' ಎಂದು ಆರೋಗ್ಯಾಧಿಕಾರಿ ಡಾ.ಬಾಲಸುಂದರ್ ತಿಳಿಸಿದ್ದಾರೆ.

> **ಮಾರ್ಗಸೂಚಿಗಳನ್ನು ಪಾಲಿಸದ ಅಂಗಡಿ, ಮಳಿಗೆಗಳನ್ನು, ಹೋಟೆಲ್‌ಗಳನ್ನು ಮುಚ್ಚಿಸುವುದು ಅನಿವಾರ್ಯ. ಸೋಂಕು ನಿಯಂತ್ರಣಕ್ಕೆ ಎಲ್ಲರೂ ಸ್ವಯಂಪ್ರೇರಿತವಾಗಿ ಸಹಕರಿಸಬೇಕು**
> **ಗೌರವ ಗುಪ್ತ,** ಬಿಬಿಎಂಪಿ ಮುಖ್ಯ ಆಯುಕ್ತ

ಮಲ್ಲೇಶ್ವರದಲ್ಲಿ ಮಳಿಗೆಗಳಿಗೆ ದಿಢೀರ್ ದಾಳಿ ನಡೆಸಿದ ಪಶ್ಚಿಮ ವಲಯದ ಆರೋಗ್ಯ ವಿಭಾಗದ ಅಧಿಕಾರಿಗಳು, ಅಂತರ ಕಾಪಾಡಲು ವ್ಯವಸ್ಥೆ ಹೊಂದಿರದ ಹೋಟೆಲ್ ಕಾಫಿ ಹಾಗೂ ಬಾಡೂಟ ಮಿಲಿಟರಿ ಹೋಟೆಲ್‌ಗಳನ್ನು ಮುಚ್ಚಿಸಿದ್ದಾರೆ. ಸಿಬ್ಬಂದಿ ಮಾಸ್ಕ್ ಧರಿಸದ ಕಾರಣಕ್ಕೆ ಮಲ್ಲೇಶ್ವರದ ಸಂಗೀತಾ ಮೊಬೈಲ್ಸ್‌ ₹ 2250, ಹುನಕಲ್ ಹೈಟ್ಸ್ ಕಾಫಿ ಕೆಫೆಗೆ ₹ 250 ದಂಡ ವಿಧಿಸಿದ್ದಾರೆ. ಶಾಂತಿಸಾಗರ್ ಹೋಟೆಲ್‌ಗೆ ನೋಟಿಸ್ ನೀಡಿದ್ದಾರೆ.

ದಾಸರಹಳ್ಳಿ ವಲಯದಲ್ಲಿ ಮಾಸ್ಕ್ ಧರಿಸದ ಕಾರಣಕ್ಕೆ ಹೋಟೆಲ್‌ಗಳು, ಮಳಿಗೆಗಳು, ಜೂಸ್ ಸೆಂಟರ್‌ಗಳು ಸೇರಿ ಒಟ್ಟು 13 ಉದ್ದಿಮೆಗಳ ಸಿಬ್ಬಂದಿಗೆ ಒಟ್ಟು ₹ 4,450 ದಂಡ ವಿಧಿಸಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ, 'ನಗರದಲ್ಲಿ ಅನೇಕ ಕಡೆ ಮಾಲ್‌ಗಳು, ಮಳಿಗೆಗಳು ಹಾಗೂ ಹೋಟೆಲ್‌ಗಳಲ್ಲಿ ಕೋವಿಡ್ ನಿಯಂತ್ರಣದ ಮಾರ್ಗಸೂಚಿಗಳನ್ನು ಪಾಲಿಸದಿರುವುದು ನನ್ನ ಗಮನಕ್ಕೆ ಬಂದಿದೆ. ಅವರು ತಮಗೂ ಅಪಾಯ ತಂದುಕೊಳ್ಳುವುದರ ಜೊತೆಗೆ ಸಾರ್ವಜನಿಕರನ್ನೂ ಅಪಾಯಕ್ಕೆ ದೂಡುತ್ತಿದ್ದಾರೆ. ಯಾರೋ ಬೆರಳೆಣಿಕೆ ಮಂದಿ ಮಾಡುವ ತಪ್ಪಿನಿಂದ ಇತರರಿಗೂ ಸಮಸ್ಯೆ ಆಗುತ್ತದೆ. ಇದಕ್ಕೆ ಅವಕಾಶ ನೀಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಎಲ್ಲೆಲ್ಲ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳು ಕಟ್ಟುನಿಟ್ಟಾಗಿ ಪಾಲನೆ ಆಗುತ್ತಿಲ್ಲ ಎಂಬುದನ್ನು ಪತ್ತೆ ಹಚ್ಚಿ, ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಮುಲಾಜಿಲ್ಲದೇ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.



ಕೊರೊನಾ ನಡುವೆ ರಥೋತ್ಸವ

ದಾಸನಪುರ ಹೋಬಳಿ ತೋಟಗೆರೆ ಬಸವೇಶ್ವರ ಜಾತ್ರೆಗೆ ಅಲಂಕೃತಗೊಂಡು ಬಂದ ಕುರ್ಜು

ಸೋಂಕು ನಿಯಂತ್ರಣಕ್ಕೆ ಕ್ರಮ: ಬಿಬಿಎಂಪಿ ಮುಖ್ಯ ಆಯುಕ್ತರಿಂದ ಪರಿಶೀಲನೆ

ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್: 39 ಮಂದಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್‌ನಲ್ಲಿ ಒಟ್ಟು 39 ಮಂದಿ ಕೋವಿಡ್ ಹೊಂದಿರುವುದು ದೃಢಪಟ್ಟಿದೆ. ಇಲ್ಲಿ ಸೋಂಕು ಹರಡದಂತೆ ತಡೆಯಲು ಬಿಬಿಎಂಪಿ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ.

ವಾರ್ಡ್‌ನ ಗುಂಡು ವೆಂಕೋಬ ರಾವ್ ಗಲ್ಲಿಯ ಮೆಹ್ತಾ ಟವರ್ ಶೇರ್‌ಖಾನ್ ಕಟ್ಟಡದ (ಸಂಖ್ಯೆ 969) ನಿವಾಸಿಯೊಬ್ಬರು ಕೋವಿಡ್ ಸೋಂಕು ಹೊಂದಿರುವುದು ಕೆಲದಿನಗಳ ಹಿಂದೆ ಪತ್ತೆಯಾಗಿತ್ತು. ಹಾಗಾಗಿ ಕಟ್ಟಡದಲ್ಲಿ ವಾಸವಾಗಿದ್ದ 120 ಮಂದಿಯನ್ನು ಹಾಗೂ ಸೋಂಕಿತ ವ್ಯಕ್ತಿ ಜೊತೆ ನೇರ ಹಾಗೂ ಪರೋಕ್ಷ ಸಂಪರ್ಕ ಹೊಂದಿದವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಒಟ್ಟು 140 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದಾಗ, ಅವರಲ್ಲಿ 39 ಮಂದಿ ಸೋಂಕು ಹೊಂದಿದ್ದು ದೃಢಪಟ್ಟಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಕೋವಿಡ್ ಸೋಂಕು ಕಾಣಿಸಿಕೊಂಡ ಪ್ರದೇಶಕ್ಕೆ ಮಂಗಳವಾರ ಭೇಟಿ ನೀಡಿ ಸೋಂಕು ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸಿದರು. ಕೋವಿಡ್ ಸೋಂಕಿತರ ಸಂಪರ್ಕಕ್ಕೆ ಬಂದವರನ್ನು ಪತ್ತೆಮಾಡಿ ಕೋವಿಡ್ ಪರೀಕ್ಷೆ ನಡೆಸಬೇಕು. ಅವರ ಪ್ರತ್ಯೇಕ ವಾಸಕ್ಕೆ ವ್ಯವಸ್ಥೆ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜೊತೆಗೆ ಲಸಿಕೆ ಪಡೆಯಲು ಅರ್ಹರಿರುವ ಎಲ್ಲರನ್ನು ಗುರುತಿಸಿ ಲಸಿಕೆ ನೀಡುವಂತೆ ಸೂಚಿಸಿದರು.

ಆರೋಗ್ಯಾಧಿಕಾರಿ ಡಾ. ಶಿವಕುಮಾರ್, 'ಮೆಹ್ತಾ ಟವರ್ ಶೇರ್‌ಖಾನ್ ಕಟ್ಟಡಕ್ಕೆ ಬಿಬಿಎಂಪಿ ಬೀಗಮುದ್ರೆ ಹಾಕಿದೆ. ಈ ಪ್ರದೇಶದಲ್ಲಿ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗಿದೆ. ಕೋವಿಡ್ ಸೋಂಕು ಹೊಂದಿರುವ ಇಬ್ಬರನ್ನು ಸಿ.ವಿ.ರಾಮನ್ ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಗಿದೆ. ಈ ಕಟ್ಟಡದ ಮಾಲೀಕರ ಮತ್ತೊಂದು ಕಟ್ಟಡವನ್ನು ಕೋವಿಡ್ ಆರೈಕೆ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ. ಅಲ್ಲಿ 37 ಮಂದಿ ಪ್ರತ್ಯೇಕ ವಾಸಕ್ಕೆ ಒಳಗಾಗುತ್ತಿದ್ದಾರೆ' ಎಂದು ಮಾಹಿತಿ ನೀಡಿದರು.

'ಕಟ್ಟಡದ ಸುತ್ತಮುತ್ತಲಿನ ನಿವಾಸಿಗಳು ಸೇರಿದಂತೆ ಈಗಾಗಲೇ 600 ಕೋವಿಡ್ ಪರೀಕ್ಷೆಗಳನ್ನು ಮಾಡಲಾಗಿದೆ. ಕೋವಿಡ್ ಪರೀಕ್ಷೆ ಮಾಡಲು 8 ತಂಡಗಳನ್ನು ನಿಯೋಜನೆ ಮಾಡಲಾಗಿದೆ. ಕೋವಿಡ್ ಸೋಂಕು ಪತ್ತೆಯಾದರೂ ಸುತ್ತಮುತ್ತಲಿನ ಪ್ರದೇಶದ ಎಲ್ಲರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುವುದು. ಜೊತೆಗೆ ಆದಷ್ಟು ಹೆಚ್ಚು ಮಂದಿಗೆ ಕೋವಿಡ್ ಲಸಿಕೆ ಹಾಕಲು ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.



ಭಾರಿ ಪ್ರಮಾಣದಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗಿರುವ ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್‌ನ ವೆಂಕೋಬಾರಾವ್ ಗಲ್ಲಿಗೆ ಮಂಗಳವಾರ ಭೇಟಿ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸೋಂಕು ಹರಡದಂತೆ ತಡೆಯಲು ಕೈಗೊಂಡ ಕ್ರಮಗಳ ಬಗ್ಗೆ ಬಿಬಿಎಂಪಿ ಸಿಬ್ಬಂದಿ ಜೊತೆ ಸಮಾಲೋಚನೆ ನಡೆಸಿದರು

ಕರಗದ ಮೇಲೆ ಕೋವಿಡ್ ಕರಿನೆರಳು

ಐತಿಹಾಸಿಕ ಕರಗ ಮಹೋತ್ಸವ ನಡೆಯುವ ತಿಗಳರಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನವು ಇದೇ ವಾರ್ಡ್‌ನಲ್ಲಿದೆ. ಈ ವಾರ್ಡ್‌ನಲ್ಲಿ ಭಾರಿ ಪ್ರಮಾಣದಲ್ಲಿ ಕೋವಿಡ್ ಸೋಂಕು ಪತ್ತೆಯಾಗಿರುವುದು ಸಾರ್ವಜನಿಕರ ಹಾಗೂ ಅಧಿಕಾರಿಗಳ ಆತಂಕಕ್ಕೆ ಕಾರಣವಾಗಿವೆ. ಕರಗ ಮಹೋತ್ಸವ ವಿಧಿವಿಧಾನಗಳನ್ನು ಇದೇ 19ರಿಂದ 27ರವರೆಗೆ ನಿರ್ಬಂಧಿತ ವಾತಾವರಣದಲ್ಲಿ ನಡೆಸಲು ಬಿಬಿಎಂಪಿ ಹಾಗೂ ಜಿಲ್ಲಾಡಳಿತ ನಿರ್ಧರಿಸಿತ್ತು.

'ಅನಾರೋಗ್ಯ ನೆಪವೊಡ್ಡಿ ತನಿಖೆಗೆ ಅಸಹಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನಾರೋಗ್ಯದ ನೆಪವೊಡ್ಡಿ ಎಸ್‌ಐಟಿ ತನಿಖೆಗೆ ಸಹಕರಿಸದ ಅತ್ಯಾಚಾರ ಪ್ರಕರಣದ ಆರೋಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಸಂತ್ರಸ್ತ ಯುವತಿ ಪರ ವಕೀಲರಾದ ಸೂರ್ಯ ಮುಕುಂದರಾಜ್ ಹಾಗೂ ಕೆ.ಎನ್.ಜಗದೀಶ್ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಪತ್ರ ಬರೆದಿದ್ದಾರೆ.

'ಸಂತ್ರಸ್ತೆಯನ್ನು ಹಲವು ಬಾರಿ ವಿಚಾರಣೆ ನಡೆಸಿರುವ ತನಿಖಾಧಿಕಾರಿಗಳು ಆರೋಪಿಯ ವಿಚಾರಣೆಗೆ ವಿನಾಯಿತಿ ನೀಡಿದಂತಿದೆ. 'ವಿಚಾರಣೆಗೆ ಬರಬೇಕಿದ್ದ ಅವರು ಕೊರೊನಾ ಸೋಂಕಿಗೆ ಒಳಗಾಗಿದ್ದು, ಗೋಕಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಸಚಿವ ಬೈರತಿ ಬಸವರಾಜು ಹೇಳುತ್ತಾರೆ. ಅಲ್ಲದೇ, ರಮೇಶ ಅವರಿಗೆ ಆರೋಗ್ಯ ಸಚಿವ ಕೆ.ಸುಧಾಕರ್ ಸ್ನೇಹಿತರಾಗಿದ್ದು, ಅವರ ಪ್ರಭಾವ ಬಳಸಿ, ಆಸ್ಪತ್ರೆ ಸಿಬ್ಬಂದಿ ಮೇಲೆ ಒತ್ತಡ ಹೇರಿ, ಕೊರೊನಾ ಪಾಸಿಟಿವ್ ನಕಲಿ ವರದಿ ಹಾಗೂ ಐಸಿಯುನಲ್ಲಿ ಚಿಕಿತ್ಸೆಯ ನಾಟಕ ಆಡುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.


'ರಮೇಶ ಅವರಿಗೆ ನಿಜವಾಗಿ ಸೋಂಕು ತಗುಲಿರುವುದನ್ನು ಪರಿಶೀಲಿಸಲು ವೈದ್ಯರ ತಂಡವನ್ನು ಕಳುಹಿಸಿ ವರದಿ ಪಡೆಯಬೇಕು. ತನ್ನ ಪ್ರಭಾವ ಬಳಸಿ, ತನಿಖೆಯ ದಿಕ್ಕು ತಪ್ಪಿಸುತ್ತಿರುವ ರಮೇಶ ಜಾರಕಿಹೊಳಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ 'ಉಪನ್ಯಾಸ ಮಾಲೆ'

ಬೆಂಗಳೂರು: ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ 'ಉಪನ್ಯಾಸ ಮಾಲೆ' ಆರಂಭಿಸಿದೆ.

'ಪರೀಕ್ಷೆ ಸಮೀಪಿಸುತ್ತಿರುವ ಹೊತ್ತಿನಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಕಾರ್ಯಕ್ರಮ ಆರಂಭಿಸಿದ್ದೇವೆ. ಎಐಡಿಎಸ್‌ಒ ಕರ್ನಾಟಕದ ಫೇಸ್‌ಬುಕ್ ಪುಟ ಹಾಗೂ ಯೂಟ್ಯೂಬ್ ವಾಹಿನಿಯಲ್ಲಿ ಉಪನ್ಯಾಸ ಮಾಲಿಕೆ ನೇರ ಪ್ರಸಾರಗೊಳ್ಳಲಿದೆ. ಅನೇಕ ವಿಡಿಯೊಗಳನ್ನೂ ಹಾಕಲಿದ್ದೇವೆ. ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು' ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪರೀಕ್ಷೆಗಳು ಶುರುವಾದಾಗ ಅನೇಕ ಮಕ್ಕಳು ಮಾನಸಿಕ ಖಿನ್ನತೆಗೆ ಒಳಗಾಗುತ್ತಾರೆ. ಅನೇಕರು ಆತ್ಮಹತ್ಯೆಯನ್ನೂ ಮಾಡಿಕೊಳ್ಳುತ್ತಾರೆ. ಅಂತಹವರಿಗೆ ಧೈರ್ಯ ತುಂಬುವ ಸಲುವಾಗಿ ನಾವು ಈ ಹಿಂದೆ 'ಆತ್ಮಹತ್ಯೆ ಉತ್ತರವಲ್ಲ' ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದೆವು' ಎಂದು ಹೇಳಿದ್ದಾರೆ.



ಜಯದೇವ ಆಸ್ಪತ್ರೆಯ ಬಡರೋಗಿಗಳ ಚಿಕಿತ್ಸಾ ನಿಧಿಗೆ ನ್ಯಾಷನಲ್ ಪಬ್ಲಿಕ್ ಶಾಲೆಯ ವತಿಯಿಂದ ₹15 ಲಕ್ಷ ಮೊತ್ತದ ದೇಣಿಗೆ ಚೆಕ್ ಅನ್ನು ಶಾಲೆಯ ಅಧ್ಯಕ್ಷ ಕೆ.ಪಿ.ಗೋಪಾಲಕೃಷ್ಣ ಹಾಗೂ ಬಿಂದು ಅವರು ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಹಸ್ತಾಂತರಿಸಿದರು.

10ಕ್ಕೆ 'ಗುಡಿ ನಡೆ' ಕಾರ್ಯಕ್ರಮ

ಬೆಂಗಳೂರು: ಬೆಂಗಳೂರಿನ ಕಲಾ ಕದಂಬ ಆರ್ಟ್ ಸೆಂಟರ್ ಇದೇ 10ರಂದು 'ಗುಡಿ ನಡೆ' ಶೀರ್ಷಿಕೆ ಅಡಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದೆ.

ಉಲ್ಲಾಳ ಉಪನಗರದ ವಿಶ್ವೇಶ್ವರ ಬಡಾವಣೆಯ 4ನೇ ವಿಭಾಗದಲ್ಲಿರುವ ಕಲಾಗುಡಿಯಲ್ಲಿ ಕಾರ್ಯಕ್ರಮ ಆಯೋಜನೆಯಾಗಿದೆ. ಇದರ ಅಂಗವಾಗಿ ದೇವಿದಾಸರ 'ಕರ್ಣ ಭೇದನ' (ತಾಳಮದ್ದಲೆ) ಕಥಾನಕ ಪ್ರದರ್ಶನಗೊಳ್ಳಲಿದೆ.

'ಯಕ್ಷಗಾನದ ಹಿಮ್ಮೇಳದವರೇ ಪಾತ್ರಧಾರಿಗಳಾಗಿ ಮಾತಿನ ಮನೆ ಕಟ್ಟುವುದು ಈ ತಾಳಮದ್ದಲೆಯ ವೈಶಿಷ್ಟ್ಯ. ಯಕ್ಷಗಾನ ಕಲಾವಿದರಾದ ದೇವರಾಜ ಕರಬರು ಕಾರ್ಯಕ್ರಮದ ಸಂಯೋಜಕರಾಗಿದ್ದು, ರಾಧಾಕೃಷ್ಣ ಉರಾಳ ಅವರು 'ಗುಡಿ ನಡೆ'ಯ ನಿರ್ದೇಶಕರು. ವಿದ್ವಾನ್ ಎ.ಪಿ.ಪಾಠಕ್, ಸುಬ್ರಾಯ ಹೆಬ್ಬಾರ, ಅಂಬರೀಷ್ ಭಟ್ ಹಾಗೂ ಪ್ರದೀಪ ಸಾಮಗ ಅವರು ಇದರಲ್ಲಿ ಪಾಲ್ಗೊಳ್ಳುವ ಕಲಾವಿದರಾಗಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಗೋಪಾಲಕೃಷ್ಣ ಅಡಿಗ ಶತಮಾನ ಪ್ರತಿಷ್ಠಾನದ ಜಯರಾಮ ಅಡಿಗ, ರಂಗಭೂಮಿಯ ಹಿರಿಯ ಕಲಾವಿದ ಸಂಜಯ ಸೂರಿ ಹಾಗೂ ರಂಗಕರ್ಮಿ ಶಶಿಧರ ಬಾರಿಘಾಟ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಹೆಚ್ಚಿನ ಮಾಹಿತಿಗೆ 9448510582

ಸುದರ್ಶನ್ ಸಿಲ್ಕ್ಸ್‌ನಲ್ಲಿ ವಿಶೇಷ ಉಡುಪು

ಬೆಂಗಳೂರು: ಮದುವೆ ಹಾಗೂ ಹಬ್ಬದ ಋತುವಿನ ಕಾರಣ ಮಾರತಹಳ್ಳಿಯಲ್ಲಿರುವ ಸುದರ್ಶನ್ ಸಿಲ್ಕ್ಸ್ ಮಳಿಗೆಯಲ್ಲಿ ವಿಶೇಷ ಉಡುಪುಗಳು ಲಭ್ಯವಿದ್ದು, ಇವುಗಳ ಮಾರಾಟಕ್ಕೆ ಮಳಿಗೆಯ ಮಾಲೀಕ ಶ್ರೀನಿವಾಸ್ ಮಂಗಳವಾರ ಚಾಲನೆ ನೀಡಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಟುಗೆದರ್ ಫಾರೆವರ್ ಟ್ರೂ ಲವ್ ವೆಡ್ಡಿಂಗ್ ಕಲೆಕ್ಷನ್'ಗೆ ಚಾಲನೆ ನೀಡಲಾಗಿದೆ. ಹಿಂದೆಲ್ಲಾ ಜವಳಿ ತೆಗೆಯಲು ಮನೆಮಂದಿಯೆಲ್ಲಾ ಬರುತ್ತಿದ್ದರು. ತಮಗಿಷ್ಟವಾದ ಉಡುಪುಗಳನ್ನು ಖರೀದಿಸುತ್ತಿದ್ದರು. ಆದರೆ, ಈಗ ಕಾಲ ಬದಲಾಗಿದೆ. ವಧು ಹಾಗೂ ವರ ಒಂದೇ ಬಗೆಯ ಬಟ್ಟೆ ಆಯ್ಕೆ ಮಾಡುತ್ತಾರೆ. ಅವರ ಅಭಿರುಚಿಯನ್ನು ಗಮನದಲ್ಲಿಟ್ಟುಕೊಂಡು ನಾವು ಹೊಸ ವಿನ್ಯಾಸದ ಉಡುಪುಗಳನ್ನು ಮಾರಾಟ ಮಾಡುತ್ತಿದ್ದೇವೆ. ಮಾರತಹಳ್ಳಿಯ ಮಳಿಗೆಯಲ್ಲಿ ಇವು ಲಭ್ಯವಿದೆ' ಎಂದರು.

'ಗ್ರಾಹಕರ ಹಿತ ಗಮನದಲ್ಲಿಟ್ಟುಕೊಂಡು ನಾವು ಮಾರತಹಳ್ಳಿಯಲ್ಲಿ ಪೂರ್ಣ ಪ್ರಮಾಣದ ಶಾಪಿಂಗ್ ಮಾಲ್ ತೆರೆದಿದ್ದೇವೆ. ಇಲ್ಲಿ ವಿವಿಧ ಬಗೆಯ ಸಿದ್ಧ ಉಡುಪುಗಳು, ಸಾಂಪ್ರದಾಯಿಕ ಸೀರೆಗಳು, ಶೆರ್ವಾನಿಗಳು ಲಭ್ಯವಿರುತ್ತವೆ' ಎಂದು ತಿಳಿಸಿದರು.



ಫ್ಯಾಷನ್ ಶೋ ಕಾರ್ಯಕ್ರಮದಲ್ಲಿ ರೂಪದರ್ಶಿಯರು

ಐಎಎಸ್ ಮಾದರಿ ಸಂದರ್ಶನ ಇಂದು

ಬೆಂಗಳೂರು: ಸಮುತ್ಕರ್ಷ ಸಂಸ್ಥೆಯು ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಗಳ ಮಾದರಿ ಸಂದರ್ಶನವನ್ನು ಇದೇ 7ರಂದು ಆಯೋಜಿಸಿದೆ.

ಐಎಎಸ್, ಐಪಿಎಸ್, ಐಎಫ್‌ಎಸ್ ಮತ್ತು ವಿಶೇಷ ತಜ್ಞರು, ಪ್ರಾಧ್ಯಾಪಕರನ್ನು ಒಳನ್ನೊಳಗೊಂಡ ತಂಡವು ಈ ಮಾದರಿ ಸಂದರ್ಶನ ನಡೆಸಲಿದೆ.

ರಾಜಾಜಿನಗರದ ಪಶ್ಚಿಮ ಕಾರ್ಡ್ ರಸ್ತೆಯಲ್ಲಿರುವ ಸಂಸ್ಥೆಯ ಅಧ್ಯಯನ ಕೇಂದ್ರದಲ್ಲಿ ಸಂದರ್ಶನ ನಡೆಯಲಿದೆ. ಇದಕ್ಕೆ ಯಾವುದೇ ಶುಲ್ಕ ಇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ, 9448489132 /9739113612 ಸಂಪರ್ಕಿಸಬಹುದು.

ಮಹಿಳಾ ನ್ಯಾಯಮೂರ್ತಿಗಳ ನೇಮಕ: ಸುಪ್ರೀಂಗೆ ಅರ್ಜಿ

ನವದೆಹಲಿ (ಪಿಟಿಐ): ಉನ್ನತ ನ್ಯಾಯಾಲಯಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಭಾರಿ ಕಡಿಮೆ ಇದ್ದು, ಪ್ರತಿಭಾನ್ವಿತ ಮಹಿಳೆಯರನ್ನು ಹೆಚ್ಚಿನ ಪ್ರಮಾಣದಲ್ಲಿ ನೇಮಿಸಿಕೊಳ್ಳುವ ನಿಟ್ಟಿನಲ್ಲಿ ಪರಿಶೀಲನೆ ನಡೆಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಅರ್ಜಿ ಸಲ್ಲಿಸಲಾಗಿದೆ.

ಸುಪ್ರೀಂ ಕೋರ್ಟ್ ಮಹಿಳಾ ವಕೀಲರ ಸಂಘದ (ಎಸ್‌ಸಿಡಬ್ಲ್ಯುಎಲ್‌ಎ) ವತಿಯಿಂದ ವಕೀಲೆ ಸ್ನೇಹಾ ಕಲಿತಾ ಅವರು ಈ ಅರ್ಜಿ ಸಲ್ಲಿಸಿದ್ದು, ಉನ್ನತ ನ್ಯಾಯಾಲಯಗಳಲ್ಲಿ ಈಗಿರುವ ಮಹಿಳಾ ನ್ಯಾಯಮೂರ್ತಿಗಳ ಪ್ರಮಾಣ ಕೇವಲ ಶೇ 11.04ರಷ್ಟು. ಇದನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಗಮನ ಹರಿಸಬೇಕು ಎಂದು ವಿನಂತಿಸಿದ್ದಾರೆ.


'1950ರಿಂದೀಚೆಗೆ ಸುಪ್ರೀಂ ಕೋರ್ಟ್‌ಗೆ 247 ನ್ಯಾಯಮೂರ್ತಿಗಳ ನೇಮಕವಾಗಿದೆ, ಇದರಲ್ಲಿ ಮಹಿಳೆಯರ ಸಂಖ್ಯೆ ಕೇವಲ 8. ಸದ್ಯ ಹೈಕೋರ್ಟ್‌ಗಳಲ್ಲಿ 1,080 ನ್ಯಾಯಮೂರ್ತಿಗಳ ಹುದ್ದೆ ಇದ್ದು, 661 ಹುದ್ದೆಗಳು ಭರ್ತಿಯಾಗಿವೆ. ಇದರಲ್ಲಿ ಮಹಿಳೆಯರ ಸಂಖ್ಯೆ ಕೇವಲ 73. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ವಾದ ಮಂಡಿಸುತ್ತಿರುವ ಪ್ರತಿಭಾನ್ವಿತ ವಕೀಲರನ್ನೇ ಖಾಲಿ ಹುದ್ದೆ ಭರ್ತಿ ಮಾಡುವಾಗ ವೇಳೆ ಪರಿಶೀಲಿಸಬೇಕು' ಎಂದು ಅರ್ಜಿಯಲ್ಲಿ ವಿನಂತಿಸಲಾಗಿದೆ.

ದೇಶದಲ್ಲಿ ಹೆಚ್ಚುತ್ತಲೇ ಇದೆ ಸಿರಿವಂತರ ಸಂಖ್ಯೆ

ಬೆಂಗಳೂರು: 2021ರಲ್ಲಿ ದೇಶದಲ್ಲಿನ ಅತಿಸಿರಿವಂತರ ಸಂಖ್ಯೆಯು 140ಕ್ಕೆ ಏರಿದೆ. 2020ರಲ್ಲಿ ಇವರ ಸಂಖ್ಯೆ 102 ಆಗಿತ್ತು. ಸಿರಿವಂತರ ಒಟ್ಟಾರೆ ಸಂಪತ್ತು ಮೌಲ್ಯವು ₹ 43.50 ಲಕ್ಷ ಕೋಟಿ ಆಗಿದೆ. ಫೋರ್ಬ್ಸ್ ನಿಯತಕಾಲಿಕ ಪ್ರಕಟಿಸಿರುವ 2021ರ ಭಾರತದ ಅತಿಸಿರಿವಂತರ ಪಟ್ಟಿಯಲ್ಲಿ ಈ ಮಾಹಿತಿ ಇದೆ.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿ ಎಂದು ಫೋರ್ಬ್ಸ್ ಗುರುತಿಸಿದೆ. ಮಾರ್ಚ್ 5ರವರೆಗಿನ ಆಸ್ತಿಯ ಮೌಲ್ಯವನ್ನು ಪರಿಗಣಿಸಿ ನಿಯತಕಾಲಿಕೆಯು ಅತಿ ಸಿರಿವಂತರ ಪಟ್ಟಿಯನ್ನು ಸಿದ್ಧಪಡಿಸಿದೆ.

ಟಾಪ್ 10 ಸಿರಿವಂತರ ಮೌಲ್ಯ



ಸಂಸದ ಅನಂತಕುಮಾರಗೆ ಜೀವ ಬೆದರಿಕೆ

ಪ್ರಜಾವಾಣಿ ವಾರ್ತೆ

ಶಿರಸಿ: ಸಂಸದ ಅನಂತಕುಮಾರ ಹೆಗಡೆ ಅವರಿಗೆ ಜೀವ ಬೆದರಿಕೆ ಬಂದಿದ್ದಾಗಿ ಅವರ ಆಪ್ತ ಕಾರ್ಯದರ್ಶಿ ಸುರೇಶ ಶೆಟ್ಟಿ ಇಲ್ಲಿನ ಹೊಸಮಾರುಕಟ್ಟೆ ಪೊಲೀಸ್ ಠಾಣೆಯಲ್ಲಿ ಮಂಗಳವಾರ ದೂರು ದಾಖಲಿಸಿದ್ದಾರೆ.

ಸಂಸದರ ಮನೆ ಸ್ಥಿರ ದೂರವಾಣಿಗೆ ಸೋಮವಾರ ತಡರಾತ್ರಿ 2 ಗಂಟೆ ಸುಮಾರಿಗೆ ಕರೆಬಂದಿತ್ತು. ಅನಂತಕುಮಾರ್ ಕರೆ ಸ್ವೀಕರಿಸಿದ್ದು, ಆ ಬದಿಯ ವ್ಯಕ್ತಿ ಉರ್ದು ಮಿಶ್ರಿತ ಹಿಂದಿ ಭಾಷೆಯಲ್ಲಿ ಜೀವ ಬೆದರಿಕೆ ಒಡ್ಡಿದ್ದಾಗಿ ದೂರಿನಲ್ಲಿ ತಿಳಿಸಲಾಗಿದೆ.

ಹನ್ನೊಂದು ಅಂಕಿಗಳಿರುವ ಆ ಸಂಖ್ಯೆಯನ್ನು ಪೊಲೀಸರಿಗೆ ತಿಳಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಮನೆಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದ ಆರೋಪಿ ವಿಷ ಸೇವಿಸಿ ಆತ್ಮಹತ್ಯೆ



ಮಡಿಕೇರಿ: ಪೊನ್ನಂಪೇಟೆ ತಾಲ್ಲೂಕಿನ ಮುಗುಟಗೇರಿ ಗ್ರಾಮದಲ್ಲಿ ಮನೆಗೆ ಬೆಂಕಿ ಹಚ್ಚಿ, ಪತ್ನಿ-ಸಂಬಂಧಿಕರು ಸೇರಿದಂತೆ 6 ಜನರ ಸಾವಿಗೆ ಕಾರಣನಾಗಿದ್ದ, ಆರೋಪಿ ಪಣಿ ಎರವರ ಬೋಜ ಬೋಜ (50) ಮಂಗಳವಾರ ಬೆಳಿಗ್ಗೆ ಶವವಾಗಿ ಪತ್ತೆಯಾಗಿದ್ದಾನೆ.

ಆತ ವಾಸವಿದ್ದ ಲೈನ್‌ಮನೆಯ ಸಮೀಪದ ಕಾಫಿತೋಟದಲ್ಲಿ ಮೃತದೇಹ ಪತ್ತೆಯಾಗಿದೆ. ಮನೆಗೆ ಬೆಂಕಿ ಹಚ್ಚಿದ ಬಳಿಕ ಹೆದರಿದ ಆರೋಪಿಯು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.


ಸುಟ್ಟ ಗಾಯಗಳಿಂದ ಚಿಂತಾಜನಕ ಸ್ಥಿತಿಯಲ್ಲಿದ್ದ ಮತ್ತೊಬ್ಬ ಮಹಿಳೆಯೂ ಮಂಗಳವಾರ ಮೈಸೂರಿನಲ್ಲಿ ಮೃತಪಟ್ಟಿದ್ದಾರೆ. ಇದೀಗ ಆರೋಪಿಯೂ ಆತ್ಮಹತ್ಯೆ ಮಾಡಿಕೊಂಡಿದ್ದು, ಇಡೀ ಪ್ರಕರಣದಲ್ಲಿ ಎಂಟು ಜನ ಜೀವ ತೆತ್ತಿದ್ದಾರೆ.

ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಜಿ.ಟಿ. ದೇವೇಗೌಡ ಆಯ್ಕೆ

ಪ್ರಜಾವಾಣಿ ವಾರ್ತೆ



ದೇವೇಗೌಡ



ಜಗದೀಶ ಕವಟಗಿ ಮಠ

ಬೆಂಗಳೂರು: 'ರಾಜ್ಯದಲ್ಲಿರುವ ಸಹಕಾರಿ ಸಂಘಗಳ ಸ್ಥಿತಿಗತಿ ಬಗ್ಗೆ ಶೀಘ್ರವೇ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು' ಎಂದು ಸಹಕಾರ ಮಹಾಮಂಡಳದ ನೂತನ ಅಧ್ಯಕ್ಷ ಹಾಗೂ ಶಾಸಕ ಜಿ.ಟಿ.ದೇವೇಗೌಡ ಮಂಗಳವಾರ ಹೇಳಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್ ನಂತರ ಸಹಕಾರಿ ಸಂಘಗಳ ಪರಿಸ್ಥಿತಿ ಹೇಗಿದೆ, ಯಾವ ಸಂಘಗಳು ನಷ್ಟದಲ್ಲಿವೆ, ಯಾವ ಸಂಘಗಳು ಲಾಭದಲ್ಲಿವೆ ಎಂಬುದನ್ನು ಅರಿಯಲು ಸಮೀಕ್ಷೆ ಮಾಡಿಸಲಾಗುತ್ತದೆ. ನಷ್ಟದಲ್ಲಿರುವ ಸಂಘಗಳ ಅಭಿವೃದ್ಧಿಗೆ ಶ್ರಮಿಸಲಿದ್ದೇವೆ' ಎಂದರು.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, 'ಜಿ.ಟಿ.ದೇವೇಗೌಡ ಅವರು ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಅನುಭವ ಹೊಂದಿದ್ದಾರೆ. ಮುಂದಿನ 5 ವರ್ಷ ಸಂಸ್ಥೆಯನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಲಿದ್ದಾರೆ. ಅವರಿಗೆ ಸರ್ಕಾರದಿಂದ ಎಲ್ಲಾ ರೀತಿಯ ಸಹಕಾರ ನೀಡಲಿದ್ದೇವೆ' ಎಂದರು.

ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕ್‌ಗಳ ಮಹಾಮಂಡಳದ ಅಧ್ಯಕ್ಷ ಎಚ್.ಕೆ.ಪಾಟೀಲ, ರಾಜ್ಯ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಬೆಳ್ಳಿ ಪ್ರಕಾಶ್, ಉಪಾಧ್ಯಕ್ಷ ಜಿ.ಡಿ.ಹರೀಶ್ ಗೌಡ, ಸಹಕಾರ ಮಾರುಕಟ್ಟೆ ಮಹಾಮಂಡಳದ ಅಧ್ಯಕ್ಷ ಎಂ.ಎನ್.ರಾಜೇಂದ್ರ ಕುಮಾರ್, ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷೆ ಲಲಿತಾ ಜಿ.ಟಿ.ದೇವೇಗೌಡ, ಸಹಕಾರ ಮಹಿಳಾ ಮಂಡಳದ ಅಧ್ಯಕ್ಷೆ ಶಕುಂತಲಾ ಬೆಲದಾಳೆ ಅಭಿನಂದಿಸಿದರು.

ಆಯ್ಕೆ: ಮಾಜಿ ಸಚಿವರೂ ಆಗಿರುವ ದೇವೇಗೌಡ, ಐದನೇ ಬಾರಿ ಈ ಹುದ್ದೆಗೆ ಆಯ್ಕೆಯಾಗಿದ್ದಾರೆ. ಬೆಳಗಾವಿಯ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು.

ನೂತನ ನಿರ್ದೇಶಕರು: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರ ಸ್ಥಾನಗಳಿಗೆ ಇತ್ತೀಚೆಗೆ ನಡೆದಿದ್ದ ಚುನಾವಣೆಯಲ್ಲಿ ಜಿ.ಟಿ. ದೇವೇಗೌಡ ಅವರ ತಂಡದ ಎಲ್ಲಾ ಅಭ್ಯರ್ಥಿಗಳು ಗೆದ್ದಿದ್ದರು.

13 ಸ್ಥಾನಗಳಿಗೆ 26 ಅಭ್ಯರ್ಥಿಗಳು ಕಣದಲ್ಲಿದ್ದರು. ಇತರೆ ವಲಯದ ಒಂದು ಸ್ಥಾನಕ್ಕೆ 4 ಅಭ್ಯರ್ಥಿಗಳು ಸ್ಪರ್ಧಿಸಿದ್ದರು.

ನಿರ್ದೇಶಕರ ವಿವರ: ಮೈಸೂರು ವಿಭಾಗ: ಜಿ.ಟಿ.ದೇವೇಗೌಡ, ಬಿ.ಸಿ. ಲೋಕಪ್ಪ ಗೌಡ, ಜಯಕರ ಶೆಟ್ಟಿ ಬಿ.ಇಂದ್ರಾಳಿ.

ಬೆಂಗಳೂರು ವಿಭಾಗ: ಎಚ್.ಎನ್. ಅಶೋಕ, ಎ.ಸಿ.ನಾಗರಾಜ್, ರಾಮರೆಡ್ಡಿ, ಬಿ.ಡಿ.ಭೂಕಾಂತ.

ಬೆಳಗಾವಿ ವಿಭಾಗ: ಜಗದೀಶ ಮಲ್ಲಿಕಾರ್ಜುನ ಕವಟಗಿಮಠ, ಈರಣ್ಣ ಪಟ್ಟಣಶೆಟ್ಟಿ, ಬಸವರಾಜ ನಿ.ಅರಬಗೊಂಡ.

ಕಲಬುರ್ಗಿ ವಿಭಾಗ: ಶೇಖರಗೌಡ ಮಾಲಿಪಾಟೀಲ, ಉಮಾಕಾಂತ ನಾಗಮಾರಪಲ್ಳಿ, ಜೆ.ಎಂ.ಶಿವಪ್ರಸಾದ್.

ಇತರೆ ಸಹಕಾರ ಸಂಘಗಳ ಕ್ಷೇತ್ರ: ಗದಿಗೆಪ್ಪ ಗೌಡ ಪಾಟೀಲ.

ರಘು ನಿರ್ದೇಶಕ: ರಾಜ್ಯ ಸರ್ಕಾರವು ಬೆಂಗಳೂರಿನ ವಿ.ರಘು ಅವರನ್ನು ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡಿದೆ.

ಸಿ.ಡಿ.ಪ್ರಕರಣ: ಬೆಳಗಾವಿಗೆ ಹೋಗಿ ಬಂದ ಎಸ್‌ಐಟಿ ತಂಡ

ಹನಿಟ್ರ್ಯಾಪ್ ಆಯಾಮದಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಕೊರೊನಾ ಸೋಂಕಿನ ಕಾರಣ ನೀಡಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿಚಾರಣೆಗೆ ಗೈರಾದ ಬೆನ್ನಲ್ಲೇ, ಹನಿಟ್ರ್ಯಾಪ್ ಆಯಾಮದಲ್ಲಿ ಎಸ್‌ಐಟಿ ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದಾರೆ.

'ಯುವತಿಯನ್ನು ಮುಂದಿಟ್ಟು ವಿಡಿಯೊ ಚಿತ್ರೀಕರಣ ಮಾಡಿ ರಮೇಶ ಜಾರಕಿಹೊಳಿ ಅವರನ್ನು ಹನಿಟ್ರ್ಯಾಪ್‌ಗೆ ಬೀಳಿಸಿ ಬ್ಲ್ಯಾಕ್‌ಮೇಲ್ ಮಾಡಲಾಗಿದೆ' ಎಂಬ ದೂರಿನಡಿ ಅಧಿಕಾರಿಗಳು ಮಾಹಿತಿ ಕಲೆಹಾಕುತ್ತಿದ್ದಾರೆ. ಹನಿಟ್ರ್ಯಾಪ್ ಮಾಡಿದ್ದಾರೆ ಎನ್ನಲಾದ ಕೆಲವರು ಸದ್ಯ ತಲೆಮರೆಸಿಕೊಂಡಿದ್ದಾರೆ. ಅವರಿಗಾಗಿ ಎಸ್‌ಐಟಿಯ ಐದು ವಿಶೇಷ ತಂಡಗಳು, ಹೊರ ರಾಜ್ಯದಲ್ಲಿ ಶೋಧ ನಡೆಸುತ್ತಿವೆ.

ಅತ್ಯಾಚಾರ ಪ್ರಕರಣದ ತನಿಖೆ ನಡೆಸುತ್ತಿರುವ ಎಸಿಪಿ ಎಂ.ಸಿ.ಕವಿತಾ, ಯುವತಿಯಿಂದ ಸ್ವ-ಇಚ್ಛಾ ಹೇಳಿಕೆ ಪಡೆದಿದ್ದಾರೆ. ವೈದ್ಯಕೀಯ ಸೇರಿದಂತೆ ಹಲವು ಪರೀಕ್ಷೆಗೆ ಒಳಪಡಿಸಿದ್ದಾರೆ. ಘಟನೆ ಬಗ್ಗೆ ವಿಸ್ತೃತ ಹೇಳಿಕೆ ಪಡೆದು, ಆರೋಪಿ ರಮೇಶ ವಿಚಾರಣೆಗಾಗಿ ಕಾಯುತ್ತಿದ್ದಾರೆ.

ಬ್ಲ್ಯಾಕ್‌ಮೇಲ್ ಪ್ರಕರಣದ ತನಿಖೆ ಕೈಗೊಂಡಿರುವ ಎಸಿಪಿ ಧರ್ಮೇಂದ್ರ, ವಿಡಿಯೊ ಚಿತ್ರೀಕರಣ ಮಾಡಿದ್ದ ಹಾಗೂ ಅದನ್ನು ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಿದ್ದ ವ್ಯಕ್ತಿಗಳ ಪತ್ತೆ ಯತ್ನದಲ್ಲಿದ್ದಾರೆ. ಹನಿಟ್ರ್ಯಾಪ್ ನಡೆದಿರುವುದು ಮೇಲ್ನೋಟದ ತನಿಖೆಯಿಂದ ಗೊತ್ತಾಗಿದೆ.

'ಎಂಜಿನಿಯರಿಂಗ್ ಪದವೀಧರೆಯಾದ ಯುವತಿಗೆ 2019ರ ಡಿಸೆಂಬರ್‌ನಿಂದಲೇ ರಮೇಶನ ಪರಿಚಯವಿತ್ತು. ಯುವತಿ ತನ್ನ ಸ್ನೇಹಿತರ ಮೂಲಕ ರಾಜ್ಯಮಟ್ಟದ ಸುದ್ದಿವಾಹಿನಿಗಳಲ್ಲಿ ಕೆಲಸ ಮಾಡುತ್ತಿದ್ದ ವರದಿಗಾರರನ್ನು ಪರಿಚಯಿಸಿಕೊಂಡಿದ್ದರು. ಅದಾದ ನಂತರ, ಎಲ್ಲರೂ ಸಂಚು ರೂಪಿಸಿ ರಮೇಶ ಅವರನ್ನು ಹನಿಟ್ರ್ಯಾಪ್‌ಗೆ ಬೀಳಿಸಿದ್ದರು ಎಂಬ ಮಾಹಿತಿ ನಮಗೆ ಸಿಕ್ಕಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಹನಿಟ್ರ್ಯಾಪ್ ಬಗ್ಗೆ ಪ್ರಶ್ನಿಸಿದಾಗ, ಯುವತಿ ಯಾವುದೇ ಮಾಹಿತಿ ಬಿಟ್ಟುಕೊಟ್ಟಿಲ್ಲ. ಸುದ್ದಿವಾಹಿನಿಯ ಕೆಲಸ ಬಿಟ್ಟಿರುವ ವರದಿಗಾರಿಬ್ಬರು ಸದ್ಯಕ್ಕೆ ತಲೆಮರೆಸಿಕೊಂಡಿದ್ದಾರೆ. ದೆಹಲಿ, ಆಂಧ್ರಪ್ರದೇಶ, ಕೇರಳ, ತಮಿಳುನಾಡು, ಗೋವಾ... ಹೀಗೆ ನಾನಾ ರಾಜ್ಯಗಳಲ್ಲಿ ಸುತ್ತಾಡುತ್ತಿದ್ದಾರೆ. ಅವರಿಬ್ಬರು ಸಿಕ್ಕರೆ ಮಾತ್ರ ಪ್ರಕರಣಕ್ಕೆ ಸಂಬಂಧಿಸಿ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ. ಜೊತೆಗೆ, ಅವರ ಹೇಳಿಕೆ ಆಧರಿಸಿ ಯುವತಿಯನ್ನೂ ಮತ್ತೊಮ್ಮೆ ವಿಚಾರಣೆಗೆ ಒಳಪಡಿಸಲು ಅನುಕೂಲವಾಗಲಿದೆ' ಎಂದೂ ತಿಳಿಸಿವೆ.

ಬೆಳಗಾವಿಗೆ ಹೋಗಿ ಬಂದ ಎಸ್‌ಐಟಿ: ಅತ್ಯಾಚಾರ ಪ್ರಕರಣದ ವಿಚಾರಣೆಗೆ ಗೈರಾಗಿದ್ದ ರಮೇಶ ಆರೋಗ್ಯದ ಬಗ್ಗೆ ಮಾಹಿತಿ ಪಡೆಯಲು ಎಸ್‌ಐಟಿ ತಂಡ ಮಂಗಳವಾರ ಗೋಕಾಕ್ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿಯ ವೈದ್ಯಾಧಿಕಾರಿಯಿಂದಲೂ ಮಾಹಿತಿ ಪಡೆದಿದೆ.

'ರಮೇಶಗೆ ಕೊರೊನಾ ಸೋಂಕು ತಗುಲಿರುವುದಾಗಿ ಹಾಗೂ ಚಿಕಿತ್ಸೆಗೆ ಇನ್ನಷ್ಟು ದಿನ ಬೇಕಾಗಬಹುದೆಂದು ವೈದ್ಯರು ಹೇಳಿದ್ದಾರೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಕಮಿಷನರ್ ವಿರುದ್ಧ ಖಾಸಗಿ ಮೊಕದ್ದಮೆ

ಸಿ.ಡಿ. ಪ್ರಕರಣ ಸಂಬಂಧ ರಮೇಶ ಜಾರಕಿಹೊಳಿ ವಿರುದ್ಧ ನಾಗರಿಕ ಹಕ್ಕು ಹೋರಾಟ ಸಮಿತಿ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ ನೀಡಿದ್ದ ದೂರು ಆಧರಿಸಿ ಎಫ್‌ಐಆರ್ ದಾಖಲಿಸದ ಆರೋಪದಡಿ ಪೊಲೀಸ್ ಕಮಿಷನರ್ ಕಮಲ್ ಪಂತ್ ಸೇರಿ ಮೂವರು ಅಧಿಕಾರಿಗಳ ವಿರುದ್ಧ 8ನೇ ಎಸಿಎಂಎಂ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಲಾಗಿದೆ.

ಮೊಕದ್ದಮೆ ಅಂಗೀಕರಿಸಿರುವ ನ್ಯಾಯಾಲಯ, ಅದರ ಮುಂದಿನ ವಿಚಾರಣೆಯನ್ನು ಏಪ್ರಿಲ್ 16ಕ್ಕೆ ಮುಂದೂಡಿದೆ. ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ ಜನಾಧಿಕಾರ ಸಂಘರ್ಷ ಪರಿಷತ್, 'ಯುವತಿ ಮೇಲಾದ ಲೈಂಗಿಕ ದೌರ್ಜನ್ಯ ಹಾಗೂ ಜೀವ ಬೆದರಿಕೆ ಬಗ್ಗೆ ದಿನೇಶ್ ಕಲ್ಲಹಳ್ಳಿ ಮಾರ್ಚ್ 2ರಂದು ದೂರು ನೀಡಿದ್ದರು. ಕಮಿಷನರ್ ಕಮಲ್ ಪಂತ್, ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್ ಹಾಗೂ ಕಬ್ಬನ್ ಪಾರ್ಕ್ ಠಾಣೆ ಇನ್‌ಸ್ಪೆಕ್ಟರ್ ಬಿ. ಮಾರುತಿ ಎಫ್‌ಐಆರ್ ದಾಖಲಿಸಿಕೊಂಡಿರಲಿಲ್ಲ. ಬದಲಿಗೆ ದೂರುದಾರರನ್ನೇ ವಿಚಾರಣೆಗೆ ಒಳಪಡಿಸಿದ್ದರು' ಎಂದು ದೂರಲಾಗಿತ್ತು.

ನಾವು ಸತ್ಯದ ಪರವಾಗಿದ್ದೇವೆ: ಬೊಮ್ಮಾಯಿ

ಕಲಬುರ್ಗಿ: 'ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ. ಪ್ರಕರಣ ಕುರಿತ ಎಸ್‌ಐಟಿ ತನಿಖೆಯು ನ್ಯಾಯಸಮ್ಮತವಾಗಿ ನಡೆಯುತ್ತಿದೆ. ಈ ಬಗ್ಗೆ ಯುವತಿಗೆ ಸಂದೇಹ ಬೇಡ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

'ನ್ಯಾಯ ಸಮ್ಮತವಾಗಿ ಕೆಲಸ ಮಾಡಲು ಎಸ್‌ಐಟಿಗೆ ಸೂಚನೆ ನೀಡಿದ್ದೇನೆ. ನಾವು ಸತ್ಯದ ಪರವಾಗಿದ್ದೇವೆ. ಯಾರ ಪರ ಅಥವಾ ವಿರೋಧವಾಗಿ ಇಲ್ಲ. ತನಿಖೆಯ ವಿದ್ಯಮಾನಗಳ ಬಗ್ಗೆ ನಾನು ಪ್ರತಿಕ್ರಿಯೆ ಕೊಡುವುದಿಲ್ಲ. ಏನಾದರೂ ಇದ್ದರೆ ಎಸ್‌ಐಟಿ ಅವರೇ ಹೇಳುತ್ತಾರೆ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಆನ್‌ಲೈನ್ ಜೂಜು ತಡೆಗಟ್ಟಲು ನೀತಿ ರೂಪಿಸುತ್ತೇವೆ. ಅದರ ಕರಡು ಸಿದ್ಧಪಡಿಸಲಾಗುತ್ತಿದೆ' ಎಂದರು.

25.67 ಲಕ್ಷ ರೈತರಿಗೆ ನೆರವು: ಗುರಿ ಮೀರಿ ಸಾಧನೆ–ಸೋಮಶೇಖರ್

₹17,260 ಕೋಟಿ ಬೆಳೆ ಸಾಲ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 25.67 ಲಕ್ಷ ರೈತರಿಗೆ ₹17,260.48 ಕೋಟಿ ಬೆಳೆ ಸಾಲ ವಿತರಿಸಲಾಗಿದ್ದು, ಸರ್ಕಾರ ನಿಗದಿ ಮಾಡಿದ್ದ ಗುರಿಯನ್ನು ಮೀರಿ ಸಾಲ ನೀಡಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಒಟ್ಟು 24.36 ಲಕ್ಷ ರೈತರಿಗೆ ಅಲ್ಪಾವಧಿ, ದೀರ್ಘಾವಧಿ ಬೆಳೆ ಸಾಲವಾಗಿ ₹15,300 ಕೋಟಿ ಸಾಲ ವಿತರಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಅದನ್ನು ಏಪ್ರಿಲ್ 6 ರಂದೇ ಈ ಗುರಿಯನ್ನು ಮೀರಲಾಗಿದೆ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ವಿವರಿಸಿದರು.

ಸರ್ಕಾರದ ಇಚ್ಛಾಶಕ್ತಿಯ ಪರಿಣಾಮ 1.31 ಲಕ್ಷಕ್ಕೂ ಹೆಚ್ಚು ರೈತರಿಗೆ ಸಾಲದ ಪ್ರಯೋಜನ ಸಿಕ್ಕಿದೆ. ಇದರಿಂದ ₹1,960.48 ಕೋಟಿ ಸಾಲವನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಇದೊಂದು ಅಭೂತಪೂರ್ವ ಸಾಧನೆ ಎಂದು ಸೋಮಶೇಖರ್ ಹೇಳಿದರು.

ಮುಖ್ಯಾಂಶಗಳು


- 1.31 ಲಕ್ಷ ಹೆಚ್ಚುವರಿ ರೈತರಿಗೆ ₹1,960.48 ಕೋಟಿ ಸಾಲ ವಿತರಣೆ
- ಆತ್ಮನಿರ್ಭರ ಯೋಜನೆ ಜಾರಿಯಲ್ಲಿಯೂ ಕರ್ನಾಟಕವೇ ಮುಂದು

‘ಎಲ್ಲ ರೈತ ಫಲಾನುಭವಿಗಳಿಗೂ ಸಾಲ ಸಿಗಬೇಕು ಎಂಬ ಉದ್ದೇಶದಿಂದ ‘ಸಹಕಾರಿ ನಡಿಗೆ ಡಿಸಿಸಿ ಬ್ಯಾಂಕ್‌ಗಳ ಕಡೆಗೆ’ ಎಂಬ ಚಿಂತನೆಯಡಿ ಪ್ರತಿಯೊಂದು ಜಿಲ್ಲೆಯ ಡಿಸಿಸಿ ಬ್ಯಾಂಕ್‌ಗಳಿಗೆ ಭೇಟಿ ನೀಡಿ ಡಿಸಿಸಿ ಬ್ಯಾಂಕ್‌ಗಳ ಪ್ರಗತಿ ಪರಿಶೀಲನೆ ನಡೆಸಿದ್ದೇನೆ’ ಎಂದು ಅವರು ಹೇಳಿದರು.

ಅಪೆಕ್ಸ್ ಬ್ಯಾಂಕ್, 21 ಡಿಸಿಸಿ ಬ್ಯಾಂಕ್‌ಗಳು ರೈತರಿಗೆ ಸಾಲ ನೀಡಿರುವ ಬಗ್ಗೆ ಕಳೆದ ಒಂದು ವರ್ಷದಿಂದ ಪ್ರತಿ ದಿನ ಸಂಜೆ 6 ಗಂಟೆಗೆ ರೈತರಿಗೆ ಸಾಲ ನೀಡಿಕೆ ಬಗ್ಗೆ ಪರಿಶೀಲನಾ ಸಭೆ ನಡೆಸಲಾಗುತ್ತಿದೆ. ಈ ವೇಳೆ, ರೈತರಿಗೆ ಎಷ್ಟು ಸಾಲ ಕೊಡಲಾಗುತ್ತಿದೆ. ಹೊಸ ರೈತರಿಗೆ ಎಷ್ಟು ಸಾಲವನ್ನು ವಿತರಣೆ ಮಾಡಲಾಗಿದೆ ಮತ್ತು ಗುರಿ ಮುಟ್ಟಲಾಗಿದೆ ಎಂಬ ಬಗ್ಗೆ ಮಾಹಿತಿ ಪಡೆಯಲಾಗುತ್ತಿತ್ತು ಎಂದರು.

ಆರ್ಥಿಕ ಸ್ಪಂದನ ಯೋಜನೆಯಡಿ ಬಹುತೇಕ ಡಿಸಿಸಿ ಬ್ಯಾಂಕ್‌ಗಳು ಅಪೆಕ್ಸ್ ಬ್ಯಾಂಕ್‌ಗಳು ಹಾಗೂ ನಬಾರ್ಡ್‌ನಿಂದ ಉತ್ತಮ ಸಾಧನೆ ತೋರಿ, ಶೇ 96 ರಷ್ಟು ಗುರಿ ಮುಟ್ಟಲಾಗಿದೆ. ಅಂದರೆ 2020–21 ನೇ ಸಾಲಿಗೆ ₹39,072 ಕೋಟಿ ಸಾಲ ವಿತರಣೆ ಗುರಿ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ₹37,366 ಕೋಟಿ ಸಾಲ ವಿತರಿಸಲಾಗಿದೆ. ಈ ವಿಷಯದಲ್ಲಿ ಇಡೀ ದೇಶದಲ್ಲಿ ಕರ್ನಾಟಕವೇ ಮುಂದಿದೆ ಎಂದು ಸೋಮಶೇಖರ್ ಹೇಳಿದರು.

ಆತ್ಮನಿರ್ಭರ ಯೋಜನೆಯಡಿ ₹2 ಕೋಟಿ ಸಾಲ



ಸೋಮಶೇಖರ್

ಆತ್ಮನಿರ್ಭರ ಯೋಜನೆಯಡಿ 1 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಪ್ರತಿ ಸಂಘಕ್ಕೆ ₹2 ಕೋಟಿಯಂತೆ ಸಾಲ ನೀಡಲು ಅವಕಾಶವಿದ್ದು, ಈ ಪೈಕಿ 1,549 ಸಹಕಾರ ಸಂಘಗಳನ್ನು ಗುರುತಿಸಿ 949 ಪ್ಯಾಕ್ಸ್‌ಗಳಿಗೆ ಪ್ರಸ್ತಾವನೆ ಸಲ್ಲಿಕೆಯಾಗಿತ್ತು. ಇದರಲ್ಲಿ 614 ಪ್ಯಾಕ್ಸ್‌ಗಳಿಗೆ ₹198.96 ಕೋಟಿ ಮಂಜೂರಾಗಿದೆ ಎಂದು ಸೋಮಶೇಖರ್ ತಿಳಿಸಿದರು.

ಗುರಿ ಮುಟ್ಟದ ಜಿಲ್ಲಾ ಬ್ಯಾಂಕ್‌ಗಳಿಗೆ ನೋಡಲ್ ಅಧಿಕಾರಿಗಳು ವಾರಕ್ಕೊಮ್ಮೆ ಭೇಟಿ ನೀಡಿ ಪ್ರಗತಿ ಸಾಧಿಸಬೇಕೆಂಬ ಸೂಚನೆ ನೀಡಲಾಗಿದೆ ಎಂದು ಅವರು ಹೇಳಿದರು.

ಆರೈಕೆ ಕೇಂದ್ರಗಳ 20 ಮಕ್ಕಳಿಗೆ ಕಿರುಕುಳ

ಮಂಗಳೂರು: ನಗರದ ಆರು ಮಕ್ಕಳ ಆರೈಕೆ ಕೇಂದ್ರಗಳಲ್ಲಿನ 20 ಮಕ್ಕಳು ಕಿರುಕುಳಕ್ಕೆ ಒಳಗಾಗಿರುವುದು ಮಾ.28ರಂದು ಇಲ್ಲಿ ನಡೆದ ‘ಕಾನೂನು ಅರಿವು-ನೆರವು’ ಕಾರ್ಯಕ್ರಮದಲ್ಲಿ ಬಹಿರಂಗಗೊಂಡಿದೆ.

ಈ ಪೈಕಿ ತಾಲ್ಲೂಕಿನ ಕುಂಪಲದ ಅನಾಥಾಶ್ರಮದ ಬಾಲಕನಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಮೇಲ್ವಿಚಾರಕ, ಕೊಣಾಜೆಯ ಅಯೂಬ್ (52) ಎಂಬಾತನನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ಆತನ ವಿರುದ್ಧ ಇನ್ನೂ ನಾಲ್ವರು ಮಕ್ಕಳು ಆರೋಪ ಮಾಡಿದ್ದಾರೆ.

‘ಮಕ್ಕಳಿಗಾಗಿ ಅರಿವು-ನೆರವು ಕಾರ್ಯಕ್ರಮ ಹಮ್ಮಿಕೊಂಡಿದ್ದೆವು. 30 ಮಕ್ಕಳ ಆರೈಕೆ ಕೇಂದ್ರಗಳ 480 ಮಕ್ಕಳು ಪಾಲ್ಗೊಂಡಿದ್ದರು. ಮಕ್ಕಳಿಗೆ ಪ್ರಶ್ನಾವಳಿ ನೀಡಲಾಗಿದ್ದು, ಬಳಿಕ ಸಮಾಲೋಚನೆ ನಡೆಸಲಾಗಿತ್ತು. ಈ ಸಂದರ್ಭದಲ್ಲಿ ಕುಂಪಲದಲ್ಲಿ ಮಕ್ಕಳಿಗೆ ಲೈಂಗಿಕ ಹಾಗೂ ದೈಹಿಕ ಕಿರುಕುಳ ನೀಡಿರುವುದು ಬೆಳಕಿಗೆ ಬಂದಿದೆ’ ಎಂದು ನಗರ ಪೊಲೀಸ್ ಕಮಿಷನರ್ ಶಶಿಕುಮಾರ್ ಎನ್. ಮಂಗಳವಾರ ತಿಳಿಸಿದರು.

ಗುಲಬರ್ಗಾ ವಿ.ವಿ ಅಧೀಕ್ಷಕನಿಂದ ಲೈಂಗಿಕ ಕಿರುಕುಳ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ‘ಗುಲಬರ್ಗಾ ವಿಶ್ವವಿದ್ಯಾಲಯದ ಗ್ರಂಥಾಲಯ ಅಧೀಕ್ಷಕ ಶರಣಪ್ಪ ಮಾಕುಂಡಿ ಕಾಯಂ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ ಲೈಂಗಿಕ ಕಿರುಕುಳ ನೀಡಿದ್ದಾರೆ’ ಎಂದು ಮಹಿಳಾ ಗುತ್ತಿಗೆ ಸಿಬ್ಬಂದಿಯೊಬ್ಬರು ಇಲ್ಲಿನ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಸೋಮವಾರ ದೂರು ದಾಖಲಿಸಿದ್ದಾರೆ.

‘2012ರಲ್ಲಿ ನಾನು ಗುತ್ತಿಗೆ ಕೆಲಸಗಾರಳಾಗಿ ಸೇರಿದ್ದೇನೆ. ಸದ್ಯ ಬೇರೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ಗ್ರಂಥಾಲಯ ವಿಭಾಗದ ಅಧೀಕ್ಷಕ ಶರಣಪ್ಪ ಮಾಕುಂಡಿ ಅವರು, ತಮ್ಮೊಂದಿಗೆ ಸಲುಗೆಯಿಂದ ಇದ್ದರೆ ಕಾಯಂ ಕೆಲಸ ಕೊಡಿಸುವುದಾಗಿ ನಂಬಿಸಿದರು. ಅದರಂತೇ ಮೇಲಿಂದ ಮೇಲೆ ಫೋನ್‌ನಲ್ಲಿ ಸಲುಗೆಯಿಂದ ಮಾತನಾಡುತ್ತಿದ್ದರು’ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

‘ಮಾರ್ಚ್ 22ರಂದು ಕರೆ ಮಾಡಿದ ಶರಣಪ್ಪ, ಶೀಘ್ರದಲ್ಲಿಯೇ ಕಾಯಂ ನೌಕರಿ ಹಾಗೂ ಒಂದು ಪ್ಲಾಟ್ ಕೊಡಿಸುತ್ತೇನೆ. ನಿನ್ನ ಒಂದು ಬೆತ್ತಲೆ ವಿಡಿಯೊ ಮೊಬೈಲ್‌ಗೆ ಕಳಿಸು ಎಂದು ಆಮಿಷವೊಡ್ಡಿದರು. ಮಾರ್ಚ್ 23ರಂದು ನಾನು ನನ್ನ ನಿವಾಸದಲ್ಲಿ ವಿಡಿಯೊ ಮಾಡಿ, 24ರಂದು ಆತನ ವಾಟ್ಸ್‌ಆ್ಯಪ್‌ಗೆ ಕಳುಹಿಸಿದ್ದೇನೆ. ಆದರೆ, ಮರುದಿನವೇ ಶರಣಪ್ಪ ಅವರು ವಿಶ್ವವಿದ್ಯಾಲಯದ ವಾಟ್ಸ್‌ಆ್ಯಪ್ ಗ್ರೂಪ್ ಒಂದರಲ್ಲಿ ಈ ವಿಡಿಯೊ ಶೇರ್ ಮಾಡಿದ್ದಾರೆ’ ಎಂದೂ ದೂರಿನಲ್ಲಿ ತಿಳಿಸಿದ್ದಾರೆ.

‘ಶರಣಪ್ಪ ಅವರಿಗೆ ನೀವು ನನ್ನ ತಂದೆ ಸಮಾನರಿದ್ದೀರಿ ನಾನು ವಿಡಿಯೊ ಹಾಕುವುದಿಲ್ಲ ಎಂದು ಹೇಳಿದರೂ ಅವರು ಒತ್ತಾಯ ಮಾಡಿದರು. ವಿಡಿಯೊ ಹರಿಬಿಟ್ಟು ಪರಿಶಿಷ್ಟ ಮಹಿಳೆ ಮೇಲೆ ದೌರ್ಜನ್ಯ ಎಸಗಿದ್ದಾರೆ. ನನ್ನ ಮರ್ಯಾದೆಗೆ ಧಕ್ಕೆ ತಂದಿದ್ದಾರೆ. ಅವರ ಮೇಲೆ ಕ್ರಮ ಜರುಗಿಸಬೇಕು’ ಎಂದೂ ಮಹಿಳೆ ದೂರಿನಲ್ಲಿ ಕೋರಿದ್ದಾರೆ.

ಆರೋಪಿ ವಿರುದ್ಧ ಐಪಿಸಿ ಸೆಕ್ಷನ್ 292, 417, 420, 354 (ಎ), ಐಟಿ ಕಾಯ್ದೆ 67 ಅಡಿ; ಮೋಸ, ವಂಚನೆ, ಖಾಸಗಿತನಕ್ಕೆ ಧಕ್ಕೆ ಹಾಗೂ ಪರಿಶಿಷ್ಟ ಮಹಿಳೆಗೆ ದೌರ್ಜನ್ಯ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಲೈಂಗಿಕ ದೌರ್ಜನ್ಯ: ಇಬ್ಬರಿಗೆ 20 ವರ್ಷ ಜೈಲು, ದಂಡ

ಮೈಸೂರು: ಬಾಲಕಿಯರಿಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಸಾಬೀತಾಗಿದ್ದರಿಂದ, ಇಬ್ಬರು ಅಪರಾಧಿಗಳಿಗೆ ಇಲ್ಲಿನ ಪೋಕ್ಸೊ ವಿಶೇಷ ನ್ಯಾಯಾಲಯವು ತಲಾ 20 ವರ್ಷ ಜೈಲು ಶಿಕ್ಷೆ ಹಾಗೂ ₹ 25 ಸಾವಿರ ದಂಡ ವಿಧಿಸಿದೆ.

ಮೈಸೂರಿನ ಜೈಶಿವಮಹದೇವ (50) ಹಾಗೂ ಕೈಸರ್ ಪಾಷಾ (30) ಶಿಕ್ಷೆಗೆ ಗುರಿಯಾದವರು.

2019ರ ಮಾರ್ಚ್ 30ರಂದು ಸಂಜೆ ಮನೆ ಮುಂದೆ ಆಟವಾಡುತ್ತಿದ್ದ ಇಬ್ಬರು ಬಾಲಕಿಯರಿಗೆ ತಿಂಡಿ ಕೊಡಿಸುವುದಾಗಿ ಪುಸಲಾಯಿಸಿ, ಜೈಶಿವಮಹದೇವ ಎಂಬಾತ ಬೈಕ್‌ನಲ್ಲಿ ಕರೆದುಕೊಂಡು ಹೋಗಿದ್ದಾನೆ. ಉದ್ಯಾನವೊಂದರ ಬಳಿ ಇಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಆಗ ಸ್ಥಳಕ್ಕೆ ಬಂದ ಕೈಸರ್, ಜೈಶಿವಮಹದೇವನನ್ನು ಓಡಿಸಿದ್ದಾನೆ. ಬಾಲಕಿಯರನ್ನು ಮನೆಗೆ ಬಿಡುವುದಾಗಿ ನಂಬಿಸಿ, ಈತನೂ ಅವರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ.

ಈ ಮಕ್ಕಳಿಬ್ಬರೂ ಸ್ನೇಹಿತೆಯರಾಗಿದ್ದು, ಅಂದು ರಾತ್ರಿ ಹತ್ತೂವರೆ ಸುಮಾರಿಗೆ ಗಾಬರಿಯಿಂದ ಮನೆಗೆ ಬಂದಾಗ ಪೋಷಕರಿಗೆ ವಿಷಯ ಗೊತ್ತಾಗಿದೆ. ಪೋಷಕರು ನೀಡಿದ ದೂರು ದಾಖಲಿಸಿಕೊಂಡ ಪೊಲೀಸರು, ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಪೋಕ್ಸೊ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಎಸ್.ಜಯಶ್ರೀ, ಇಬ್ಬರೂ ತಪ್ಪಿತಸ್ಥರೆಂದು ತೀರ್ಪು ನೀಡಿ ಶಿಕ್ಷೆ ವಿಧಿಸಿದ್ದಾರೆ. ಸಂತ್ರಸ್ತ ಬಾಲಕಿಯರಿಗೆ ₹ 4 ಲಕ್ಷ ಪರಿಹಾರ ನೀಡಬೇಕೆಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಆದೇಶಿಸಿದ್ದಾರೆ.

ಹಿರಿಯ ನಟಿ ಪ್ರತಿಮಾ ದೇವಿ ಇನ್ನಿಲ್ಲ



ಬೆಂಗಳೂರು: ಕನ್ನಡ ಚಿತ್ರರಂಗದ ಹಿರಿಯ ನಟಿ, ಖ್ಯಾತ ನಿರ್ದೇಶಕ, ನಿರ್ಮಾಪಕ ದಿವಂಗತ ಶಂಕರ್ ಸಿಂಗ್ ಅವರ ಪತ್ನಿ ಪ್ರತಿಮಾ ದೇವಿ ಅವರು ಮಂಗಳವಾರ ಮಧ್ಯಾಹ್ನ ನಿಧನರಾಗಿದ್ದಾರೆ. ಅವರಿಗೆ 88 ವರ್ಷ ವಯಸ್ಸಾಗಿತ್ತು.

ಖ್ಯಾತ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಸಂಗ್ರಾಮ್ ಸಿಂಗ್, ಜಯರಾಜ್ ಸಿಂಗ್ ಹಾಗೂ ನಟಿ, ನಿರ್ದೇಶಕಿ ವಿಜಯಲಕ್ಷ್ಮಿ ಸಿಂಗ್ ಇವರ ಮಕ್ಕಳು.

‘ಮಧ್ಯಾಹ್ನ ಊಟಕ್ಕೆ ಮೊದಲು ಕೆಲ ಕಾಲ ನಿದ್ದೆ ಮಾಡುವ ಅಭ್ಯಾಸ ಅಮ್ಮನಿಗಿತ್ತು. ಮಂಗಳವಾರ ಮಧ್ಯಾಹ್ನ ನಿದ್ದೆ ಮಾಡಿದ್ದರು. ಊಟಕ್ಕೆ ಕರೆಯಲು ಹೋದಾಗ ಎದ್ದೇಳಲಿಲ್ಲ. ಪ್ರಜ್ಞೆತಪ್ಪಿರಬಹುದೆಂದು ಆಸ್ಪತ್ರೆಗೂ ಕರೆದೊಯ್ದಿದ್ದೆವು. ಆದರೆ ನಿದ್ದೆ ಮಾಡುತ್ತಿರುವ ವೇಳೆಯೇ ಅವರು ಪ್ರಾಣಬಿಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದರು’ ಎಂದು ಮಗಳು ವಿಜಯಲಕ್ಷ್ಮಿ ಸಿಂಗ್ ಹೇಳಿದರು.

ಉಡುಪಿ ಮೂಲದ ಪ್ರತಿಮಾ ದೇವಿ ಸಣ್ಣಪ್ರಾಯದಲ್ಲೇ ರಂಗಭೂಮಿಗೆ ಹೆಜ್ಜೆ ಪದಾರ್ಪಣೆ ಮಾಡಿದ್ದರು. ಮೂಲ ಹೆಸರು ಮೋಹಿನಿ. 1947ರಲ್ಲಿ ತಮ್ಮ 14ನೇ ವಯಸ್ಸಿನಲ್ಲಿ ಕೃಷ್ಣಲೀಲಾ ಸಿನಿಮಾ ಮುಖಾಂತರ ಕನ್ನಡ ಚಿತ್ರರಂಗಕ್ಕೆ ಕಾಲಿರಿಸಿದ್ದರು. ಜಗನ್ಮೋಹಿನಿ ಚಿತ್ರದ ಮುಖಾಂತರ ನಾಯಕಿಯಾಗಿ ಅವರು ಮಿಂಚಿದ್ದರು. ಕನ್ನಡ ಚಿತ್ರರಂಗದಲ್ಲಿ 25 ವಾರ ಯಶಸ್ವಿ ಪ್ರದರ್ಶನಗೊಂಡ ಮೊದಲ ಸಿನಿಮಾ ಇದಾಗಿತ್ತು.

‘ದಾವಣಗೆರೆ, ವಿಜಯಪುರದಲ್ಲಿ ಜನ ಹುಚ್ಚೆದ್ದು ಈ ಸಿನಿಮಾ ನೋಡಲು ಹೋಗಿದ್ದರು. ವಿಜಯಪುರದಲ್ಲಿ ಜಿಲ್ಲಾಧಿಕಾರಿಯವರು ಸಿನಿಮಾದ ಲೈಸೆನ್ಸ್ ರದ್ದುಗೊಳಿಸಿದ್ದರು. ದಾವಣಗೆರೆಯಲ್ಲಿ ಎಮ್ಮೆ ಮುಂತಾದ ವಸ್ತುಗಳನ್ನು ಮಾರಿ ಜನ ಚಿತ್ರ ನೋಡಲು ಹೋಗಿದ್ದರು. ಭಕ್ತಚೇತದಲ್ಲಿ ನಾನು, ನನ್ನ ಮಗ ಅಭಿನಯಿಸಿದ್ದು ಇದೊಂದು ಸೌಭಾಗ್ಯ’ ಎಂದಿದ್ದರು ಪ್ರತಿಮಾ ದೇವಿ.

ಚಂಚಲ ಕುಮಾರಿ, ನಾಗಕನ್ಯಾ, ಧರ್ಮಸ್ಥಳ ಮಹಾತ್ಮೆ, ವರದಕ್ಷಿಣೆ, ರಾಜ್‌ಕುಮಾರ್ ಅವರ ಜೊತೆಗೆ ಭಕ್ತಚೇತ ಹೀಗೆ ಒಟ್ಟು 60 ಚಿತ್ರಗಳಲ್ಲಿ ಅವರು ಮುಖ್ಯಭೂಮಿಕೆಯಲ್ಲಿ ಬಣ್ಣಹಚ್ಚಿದ್ದರು. ಇವುಗಳಲ್ಲಿ ಹೆಚ್ಚಿನ ಚಿತ್ರಗಳು ಶಂಕರ್ ಸಿಂಗ್ ಅವರ ಮಹಾತ್ಮ ಪಿಕ್ಚರ್ಸ್‌ನಡಿಯೇ ತೆರೆ ಮೇಲೆ ಬಂದಿದ್ದವು.

ಮೈಸೂರಿನಲ್ಲಿ ಬುಧವಾರ ಮಧ್ಯಾಹ್ನ 1 ಗಂಟೆಯ ವೇಳೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ವಿಜಯಲಕ್ಷ್ಮಿ ಸಿಂಗ್ ತಿಳಿಸಿದರು.

ಮಂತ್ರಾಲಯ: ಉರುಳು ಸೇವೆ ರದ್ದು

ಪ್ರಜಾವಾಣಿ ವಾರ್ತೆ



ರಾಯಚೂರು: ಕೋವಿಡ್ ಎರಡನೇ ಅಲೆ ನಿಯಂತ್ರಣ ಕ್ರಮವಾಗಿ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿ ಮಠದ ಪ್ರಾಕಾರದಲ್ಲಿ ಪ್ರದಕ್ಷಿಣೆ ಮತ್ತು ಉರುಳು ಸೇವೆ ಮಾಡುವುದನ್ನು ನಿಷೇಧಿಸಲಾಗಿದೆ.

ಮೂಲ ವೃಂದಾವನ ದರ್ಶನ, ಅನ್ನಪ್ರಸಾದಕ್ಕೆ ಅವಕಾಶ ಇದೆ. ತೀರ್ಥ ವಿತರಣೆ ಇರುವುದಿಲ್ಲ.

ನಿತ್ಯ ನಡೆಯುವ ರಥೋತ್ಸವದಲ್ಲಿ ಸೇವಾಕರ್ತರಿಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ಮಠದ ಮೂಲಗಳು ತಿಳಿಸಿವೆ.

ನಿಧನ ವಾರ್ತೆ

ಸಾಹಿತಿ ಮುಮ್ತಾಜ್ ಬೇಗಂ



ಪಡುಬಿದ್ರಿ: ಐದು ದಶಕಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಉಡುಪಿ ಜಿಲ್ಲೆಯ ಬೆಳಪುವಿನ ಮುಮ್ತಾಜ್ ಬೇಗಂ (72) ಮಂಗಳೂರಿನಲ್ಲಿ ಮಂಗಳವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ.

ಮುಮ್ತಾಜ್ ಅವರಿಗೆ ಈಚೆಗೆ ಕೋವಿಡ್ ದೃಢಪಟ್ಟಿತ್ತು. ಆಸ್ಪತ್ರೆಗೆ ದಾಖಲಾಗಿದ್ದ ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ಅವ್ಯಕ್ತ, ಪರದೇಶಿ, ವರ್ತುಲ, ಬಂದಳಿಕೆ, ಚಿಂಪಿ, ಸರ್ವ ಋತುಗಳೂ ನಿನಗಾಗಿ, ಅಂಕುರ ಸೇರಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಕನ್ನಡದಲ್ಲಿ ಕಥೆಗಳನ್ನು ಬರೆದ ಮೊದಲ ಮುಸ್ಲಿಂ ಲೇಖಕಿ. ‘ಸುಧಾ’ ವಾರ ಪತ್ರಿಕೆಯಲ್ಲಿ ಕೆಲಕಾಲ ಉಪ ಸಂಪಾದಕಿಯಾಗಿದ್ದರು.

ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಗೆ ಅತ್ತಿಮಬ್ಬೆ, ಚೆನ್ನಶ್ರೀ, ಜಿಲ್ಲಾ ರಾಜ್ಯೋತ್ಸವ, ಮಾತೃಶ್ರೀ ರತ್ನಮ್ಮ ಹೆಗ್ಗಡೆ ಗ್ರಂಥ ಸೇರಿ ಹಲವು ಪ್ರಶಸ್ತಿಗಳು ಅವರಿಗೆ ಸಂದಿವೆ.

ನಿವೃತ್ತ ಡಿಜಿಪಿ ಆರ್. ಜಗನ್ನಾಥ್



ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯ ನಿವೃತ್ತ ಡಿಜಿಪಿ ಆರ್. ಜಗನ್ನಾಥ್ (83) ಅವರು ಅನಾರೋಗ್ಯದಿಂದಾಗಿ ನಗರದ ಫೋರ್ಟಿಸ್ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ ಇದ್ದಾರೆ. ಬನಶಂಕರಿಯ ವಿದ್ಯುತ್ ಚಿತಾಗಾರದಲ್ಲಿ ಮಂಗಳವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ. ತಮಿಳುನಾಡಿನ ಜಗನ್ನಾಥ್, 1962ರಲ್ಲಿ ಭಾರತೀಯ ಪೊಲೀಸ್ ಸೇವೆಗೆ ಸೇರಿದ್ದರು.

ಆತಂಕದ ಸ್ಥಿತಿ ಇರುವ 3 ರಾಜ್ಯಗಳಿಗೆ ಪರಿಣತರ ತಂಡ ● ಜನರ ವರ್ತನೆಯೇ ಇದಕ್ಕೆ ಕಾರಣ –ಪ್ರಧಾನಿ ಕಚೇರಿ

ಕೋವಿಡ್ ಏರುಗತಿ: 4 ವಾರ ನಿರ್ಣಾಯಕ

ನವದೆಹಲಿ (ಪಿಟಿಐ): 'ಕೋವಿಡ್–19 ಪರಿಸ್ಥಿತಿ ದೇಶದಲ್ಲಿ ಹದಗೆಡುತ್ತಿದ್ದು, ಸೋಂಕು ತ್ವರಿತಗತಿಯಲ್ಲಿ ಹರಡುತ್ತಿದೆ. ಮುಂದಿನ ನಾಲ್ಕು ವಾರಗಳ ಅವಧಿ ಗಂಭೀರ ಮತ್ತು ನಿರ್ಣಾಯಕವಾಗಿದೆ' ಎಂದು ಕೇಂದ್ರ ಸರ್ಕಾರ ಎಚ್ಚರಿಸಿದೆ.

'ಎರಡನೇ ಅಲೆಯಲ್ಲಿ ಕೋವಿಡ್–19 ಪರಿಣಾಮ ತೀವ್ರವಾಗದಂತೆ ತಡೆಯಲು ಜನರ ಸಹಭಾಗಿತ್ವವು ಮುಖ್ಯ' ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ.ವಿ.ಕೆ.ಪಾಲ್ ಮಂಗಳವಾರ ತಿಳಿಸಿದರು.

'ಕೋವಿಡ್ ಸ್ಥಿತಿ ಎದುರಿಸಲು ಇರುವ ಕ್ರಮಗಳು ಬದಲಾಗಿಲ್ಲ. ಸೂಕ್ತವಾದ ವರ್ತನೆ, ನಿಯಂತ್ರಣ ಕ್ರಮಗಳು, ಸೋಂಕು ಪತ್ತೆ ಪರೀಕ್ಷೆಯನ್ನು ಹೆಚ್ಚಿಸುವುದು, ವೈದ್ಯಕೀಯ ಸೌಲಭ್ಯ ಉತ್ತಮಪಡಿಸುವುದು ಹಾಗೂ ಲಸಿಕೆ ನೀಡುವ ಅಭಿಯಾನವನ್ನು ಇನ್ನಷ್ಟು ಚುರುಕುಗೊಳಿಸುವುದು ಅಗತ್ಯವಾಗಿದೆ' ಎಂದು ಅವರು ಹೇಳಿದರು.

ಮಾಸ್ಕ್ ಧರಿಸುವುದು, ಪರಸ್ಪರ ಅಂತರ ಕಾಪಾಡಿಕೊಳ್ಳುವುದು, ಸಮೂಹದಲ್ಲಿ ಸೇರದೇ ಇರುವುದು ಇತ್ಯಾದಿ ಕ್ರಮಗಳನ್ನು ಆಂದೋಲನದ ಮಾದರಿಯಲ್ಲಿಯೇ ಅನುಸರಿಸಬೇಕಾಗಿದೆ. ಕಳೆದ ಬಾರಿಗಿಂತಲೂ ಈಗ ತ್ವರಿತಗತಿಯಲ್ಲಿ ಸೋಂಕು ಹಬ್ಬುತ್ತಿದೆ. ಕೆಲ ರಾಜ್ಯಗಳಲ್ಲಿ ಪರಿಸ್ಥಿತಿ ಸಂಪೂರ್ಣ ಹದಗೆಟ್ಟಿದ್ದರೆ, ಇನ್ನು ಕೆಲ ರಾಜ್ಯಗಳಲ್ಲಿ ಏರುಗತಿಯಲ್ಲಿದೆ ಎಂದು ವಿವರಿಸಿದರು.

ಉನ್ನತ ಮಟ್ಟದ ಸಭೆ: ಈ ಮಧ್ಯೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಪ್ರಕರಣಗಳು ಏರುಗತಿಯಲ್ಲಿ ಇರಲು ಜನರ ಧೋರಣೆಯೇ ಕಾರಣ ಎಂದು ಅಭಿಪ್ರಾಯಪಟ್ಟಿತು.

ಪ್ರಧಾನಮಂತ್ರಿಗಳ ಕಚೇರಿ ಈ ಕುರಿತು ಹೇಳಿಕೆ ನೀಡಿದ್ದು, ಕೋವಿಡ್ ಸಾವಿನ ಸಂಖ್ಯೆ ತಗ್ಗಿಸಲು ಮಾರ್ಗಸೂಚಿ ನಿಯಮಗಳ ಪಾಲನೆ ಕುರಿತು ಕಟ್ಟುನಿಟ್ಟಿನ ಕ್ರಮಜರುಗಿಸಬೇಕು ಎಂದು ರಾಜ್ಯಗಳಿಗೆ ತಾಕೀತು ಮಾಡಿದೆ.

ದುಪ್ಪಟ್ಟು ಅವಧಿಯೂ ಕಡಿಮೆ: ಆತಂಕ ಮೂಡಿಸಿರುವ ಮತ್ತೊಂದು ಬೆಳವಣಿಗೆ ಎಂದರೆ ಪ್ರಕರಣಗಳು ದುಪ್ಪಟ್ಟು ಆಗುತ್ತಿರುವ ಅವಧಿ ಕಡಿಮೆ ಆಗಿರುವುದು. ದುಪ್ಪಟ್ಟು ಆಗುವ ಅವಧಿಯು ಮಾರ್ಚ್ 1ರಲ್ಲಿ 504 ದಿನಗಳಾಗಿತ್ತು. ಆದರೆ, ಇದು ಮಾರ್ಚ್ 31ರಲ್ಲಿ 139 ದಿನಗಳಿಗೆ ಇಳಿದಿದ್ದರೆ, ಏಪ್ರಿಲ್ 4ರ ವೇಳೆಗೆ 115 ದಿನಗಳಿಗೆ ಇಳಿದಿದೆ.

ಕೋವಿಡ್‌ನಿಂದ ಸಾವು ಕುಗ್ಗಿಸಲು ಆರೋಗ್ಯ ಆರೈಕೆ ಸೌಲಭ್ಯವನ್ನು ಉತ್ತಮಪಡಿಸಬೇಕು. ಆಮ್ಲಜನಕ ಮತ್ತು ವೆಂಟಿಲೇಟರ್ ಲಭ್ಯವಿರುವಂತೆ ನೋಡಿಕೊಳ್ಳಬೇಕು. ಅಲ್ಲದೆ, ಸೋಂಕು ಪೀಡಿತರ ಆರೈಕೆಗೆ ಮಾರ್ಗಸೂಚಿ ನಿಯಮಗಳನ್ನು ಆಸ್ಪತ್ರೆಗಳು ಮತ್ತು ಮನೆಗಳಲ್ಲಿ ಪಾಲಿಸಲಾಗುತ್ತಿದೆ ಎಂದು ಖಾತರಿಪಡಿಸಿಕೊಳ್ಳಬೇಕು ಎಂದು ಪ್ರಧಾನಿ ಸಭೆಯಲ್ಲಿ ಸಲಹೆ ಮಾಡಿದರು.

ಕೋವಿಡ್ ತಡೆಗೆ ಅರಿವು ಮೂಡಿಸುವ ಕ್ರಮವಾಗಿ ಮಾಸ್ಕ್ ಧರಿಸುವುದನ್ನು ಶೇ 100ರಷ್ಟು ಜಾರಿಗೊಳಿಸುವುದು, ವ್ಯಕ್ತಿಗತವಾಗಿ ಶುಚಿತ್ವಕ್ಕೆ ಒತ್ತು ನೀಡುವುದು ಮತ್ತು ಸಾರ್ವಜನಿಕ ಸ್ಥಳಗಳ ಸ್ಯಾನಿಟೈಸೇಷನ್ ಮಾಡುವುದರ ಕುರಿಂತೆ ವಿಶೇಷ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಬುಧವಾರ (ಏಪ್ರಿಲ್ 7) ಚಾಲನೆ ನೀಡಲಿದೆ.



ಕೋವಿಡ್ ತಡೆಯಲು ರಾತ್ರಿ ಕರ್ಫ್ಯೂ ಜಾರಿಗೊಳಿಸಿರುವ ಪಂಜಾಬ್ ಸರ್ಕಾರದ ಕ್ರಮವನ್ನು ವಿರೋಧಿಸಿ ಅಮೃತಸರದಲ್ಲಿ ಮಂಗಳವಾರ ಹೋಟೆಲ್‌ಗಳ ಮಾಲೀಕರು, ಕಾರ್ಮಿಕರು ಹಾಗೂ ಉದ್ಯಮದ ಕಾರ್ಮಿಕರು ಪ್ರತಿಭಟನೆ ನಡೆಸಿದರು

'ಒಟ್ಟು 10 ಜಿಲ್ಲೆಗಳಲ್ಲಿ ಗಂಭೀರ ಸ್ಥಿತಿ'

ಬೆಂಗಳೂರು ನಗರ, ಛತ್ತೀಸಗಡದ ದುರ್ಗ್ ಜಿಲ್ಲೆ ಸೇರಿದಂತೆ ಒಟ್ಟು 10 ಜಿಲ್ಲೆಗಳಲ್ಲಿ ಪ್ರಕರಣಗಳು ಗರಿಷ್ಠ ಸಂಖ್ಯೆಯಲ್ಲಿ ದಾಖಲಾಗುತ್ತಿವೆ ಎಂದು ವಿ.ಕೆ.ಪಾಲ್ ತಿಳಿಸಿದ್ದಾರೆ.

ಪುಣೆ, ಮುಂಬೈ, ಠಾಣೆ, ನಾಗಪುರ, ನಾಸಿಕ್, ಔರಂಗಾಬಾದ್, ಅಹ್ಮದ್‌ನಗರ, ದೆಹಲಿ ಇತರೆ ಜಿಲ್ಲೆಗಳು. ಮಹಾರಾಷ್ಟ್ರ, ಪಂಜಾಬ್, ಛತ್ತೀಸಗಡ ಹೆಚ್ಚು ಕಳವಳಕ್ಕೆ ಕಾರಣವಾಗಿರುವ ರಾಜ್ಯಗಳಾಗಿವೆ ಎಂದರು.

ಪರಿಸ್ಥಿತಿ ನಿಯಂತ್ರಿಸಲು ಕೇಂದ್ರ 50 ಉನ್ನತ ಬಹುಶಿಸ್ತೀಯ ಸಾರ್ವಜನಿಕ ಆರೋಗ್ಯ ತಂಡಗಳನ್ನು ಪ್ರಕರಣ ಹೆಚ್ಚಿರುವ ರಾಜ್ಯಗಳಿಗೆ ಕಳುಹಿಸಲಿದೆ. ಮಹಾರಾಷ್ಟ್ರಕ್ಕೆ 30, ಛತ್ತೀಸಗಡಕ್ಕೆ 11 ಮತ್ತು ಪಂಜಾಬ್‌ಗೆ 9 ತಂಡಗಳು ತೆರಳಲಿವೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಕಳೆದ ಎರಡು ವಾರಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ಮಹಾರಾಷ್ಟ್ರದ ಪಾಲು ಶೇ 57ರಷ್ಟಿದ್ದರೆ, ಸಾವಿನ ಪ್ರಕರಣಗಳಲ್ಲಿ ಶೇ 47ರಷ್ಟಿದೆ. ಅಂತೆಯೇ, ಒಟ್ಟು ಪ್ರಕರಣಗಳಲ್ಲಿ ಪಂಜಾಬ್‌ನ ಕೊಡುಗೆ ಶೇ 4.5ರಷ್ಟಿದ್ದರೆ, ಛತ್ತೀಸಗಡದ ಕೊಡುಗೆಯು ಶೇ 4.3ರಷ್ಟಿದೆ.

ದೆಹಲಿ: 30ರವರೆಗೆ ರಾತ್ರಿ ಕರ್ಫ್ಯೂ

ನವದೆಹಲಿ: 'ಕೋವಿಡ್ 19' ಸೋಂಕು ಹರಡುವುದನ್ನು ತಡೆಯಲು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮಂಗಳವಾರದಿಂದ ಜಾರಿಗೆ ಬರುವಂತೆ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಏ. 30ರವರೆಗೆ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 5 ಗಂಟೆವರೆಗೆ ಕರ್ಫ್ಯೂ ವಿಧಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಯುವಜನರು, 45 ವರ್ಷ ಮೀರದವರಿಗೆ ಸದ್ಯ ಲಸಿಕೆ ಇಲ್ಲ'

ನವದೆಹಲಿ: ಕೋವಿಡ್ ಲಸಿಕೆ ನೀಡುವ ಕಾರ್ಯಸೂಚಿಯನ್ನು ವ್ಯವಸ್ಥಿತವಾಗಿ ರೂಪಿಸಲಾಗಿದೆ. 45 ವರ್ಷಕ್ಕಿಂತ ಕೆಳಗಿನವರಿಗೆ ಲಸಿಕೆ ಇರುವುದಿಲ್ಲ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಯುವಪೀಳಿಗೆಗೆ ಸದ್ಯದ ಸ್ಥಿತಿಯಲ್ಲಿ ಲಸಿಕೆ ನೀಡಲಾಗದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಮೂಲಕ '18 ವರ್ಷ ಮೀರಿದ ಎಲ್ಲರೂ ಲಸಿಕೆ ಪಡೆಯಲು ಅವಕಾಶ ಕಲ್ಪಿಸಬೇಕು' ಎಂದು ಕೆಲ ರಾಜ್ಯಗಳ ಮುಖ್ಯಮಂತ್ರಿಗಳು, ಭಾರತೀಯ ವೈದ್ಯಕೀಯ ಸಂಘದ (ಐಎಂಎ), ಆರೋಗ್ಯ ಕ್ಷೇತ್ರದ ಪರಿಣಿತರು ಮಾಡಿದ್ದ ಮನವಿಯನ್ನು ತಿರಸ್ಕರಿಸಿದ್ದಾರೆ.

ವೈದ್ಯರು, ನರ್ಸ್‌ಗಳು, ಇತರೆ ಸಿಬ್ಬಂದಿಯೇ ಸೋಂಕು ಪೀಡಿತರಾದರೆ ವ್ಯವಸ್ಥೆಯನ್ನು ಯಾರು ಮುನ್ನಡೆಸುತ್ತಾರೆ? ಎಲ್ಲ ದೇಶಗಳಲ್ಲೂ ಇವೇ ಮಾನದಂಡವಾಗಿವೆ ಎಂದು ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದರು.

ಈ ಮಧ್ಯೆ, ಭಾರತವು ಇದೇ ಮೊದಲ ಬಾರಿಗೆ ಸೋಮವಾರ ದಾಖಲೆ ಸಂಖ್ಯೆಯಲ್ಲಿ ಅಂದರೆ 40 ಲಕ್ಷ ಜನರಿಗೆ ಲಸಿಕೆ ನೀಡಿದೆ ಎಂದು ನೀತಿ ಆಯೋಗದ ಸದಸ್ಯ ವಿ.ಕೆ. ಪಾಲ್ ತಿಳಿಸಿದ್ದಾರೆ.

ಕಳೆದ 24 ಗಂಟೆಗಳಲ್ಲಿ 97 ಸಾವಿರ ಹೊಸ ಪ್ರಕರಣಗಳು ಮಂಗಳವಾರ ದೃಢಪಟ್ಟಿದ್ದು, 446 ಜನರು ಮೃತಪಟ್ಟಿದ್ದಾರೆ. ದೇಶದಾದ್ಯಂತ ಸಕ್ರಿಯವಾಗಿರುವ ಒಟ್ಟು ಪ್ರಕರಣಗಳ ಸಂಖ್ಯೆ 7.88 ಲಕ್ಷವಾಗಿದೆ. ಆರೋಗ್ಯ ಕಾರ್ಯಕರ್ತರು, ಲಸಿಕೆ ಕಾರ್ಯಕ್ರಮದಲ್ಲಿ ತೊಡಗಿರುವ 18 ರಿಂದ 44 ವರ್ಷದವರು ಗುರುತಿನಚೀಟಿ, ಉದ್ಯೋಗ ನೇಮಕ ಪ್ರಮಾಣಪತ್ರದ ನಕಲು ಪ್ರತಿ ತೋರಿಸಿ ವರಿಗೆ ಸರ್ಕಾರಿ 'ಕೋವಿಡ್ ಲಸಿಕೆ ಕೇಂದ್ರ'ಗಳಲ್ಲಿಯೇ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ ಆರೋಗ್ಯ ಸಚಿವಾಲಯ ಪ್ರಕಟಿಸಿದೆ.

ಸುದ್ದಿ 2 ನಿಮಿಷ

ಗಡಿಯುದ್ಧಕ್ಕೂ ಹೊಸ ಸವಾಲು: ಸೇನಾ ಮುಖ್ಯಸ್ಥ ನರವಣೆ

ನವದೆಹಲಿ: 'ಭಾರತ ಗಡಿಯುದ್ಧಕ್ಕೂ ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಸದ್ಯ ತರಬೇತಿ ಪಡೆಯುತ್ತಿರುವ ಅಧಿಕಾರಿಗಳು ಈ ಎಲ್ಲ ಬೆಳವಣಿಗೆಗಳ ಬಗ್ಗೆ ಅರಿವು ಹೊಂದಿರಬೇಕು' ಎಂದು ಸೇನಾ ಮುಖ್ಯಸ್ಥ ಎಂ.ಎಂ.ನರವಣೆ ಹೇಳಿದರು.

'ಪಶ್ಚಿಮ ಮತ್ತು ಉತ್ತರದ ಗಡಿ ಭಾಗದಲ್ಲಿನ ಬೆಳವಣಿಗೆಗಳು ಮತ್ತು ಭಾರತೀಯ ಸೇನೆಯ ಭವಿಷ್ಯದ ಕಾರ್ಯಸೂಚಿ' ವಿಷಯ ಕುರಿತು ಅವರು ತಮಿಳುನಾಡಿನ ವೆಲ್ಲಿಂಗ್ಟನ್‌ನ ಡಿಫೆನ್ಸ್ ಸರ್ವೀಸ್ ಸ್ಟಾಫ್ ಕಾಲೇಜಿನಲ್ಲಿ (ಡಿಎಸ್‌ಎಸ್‌ಸಿ) ಮಾತನಾಡಿದರು.

ಕೋವಿಡ್ ಸ್ಥಿತಿ ನಡುವೆಯೂ ತರಬೇತಿಯಲ್ಲಿ ಉನ್ನತ ಗುಣಮಟ್ಟ ಕಾಯ್ದುಕೊಳ್ಳಲಾಗಿದೆ ಎಂದು ನರವಣೆ ಶ್ಲಾಘಿಸಿದರು.

ಸೇನಾ ಮುಖ್ಯಸ್ಥರಾದ ನರವಣೆ ಅವರು ಕಾಲೇಜಿಗೆ ಎರಡು ದಿನದ ಭೇಟಿ ನೀಡಿದ್ದು, ಸಿಬ್ಬಂದಿ ತರಬೇತಿಯ 76ನೇ ಕಾರ್ಯಕ್ರಮದಲ್ಲಿ ಮಾತನಾಡಿದರು. ಡಿಎಸ್‌ಎಸ್‌ಸಿ ಕಮಾಂಡೆಂಟ್ ಲೆಫ್ಟಿನಂಟ್ ಜನರಲ್ ಎಂ.ಜೆ.ಎಸ್. ಕಹ್ಲೋನ್ ಅವರು ಸದ್ಯ ನಡೆಯುತ್ತಿರುವ ತರಬೇತಿ ಕಾರ್ಯಕ್ರಮ ಕುರಿತು ವಿವರ ನೀಡಿದರು ಎಂದು ಸೇನೆಯ ಹೇಳಿಕೆಯಲ್ಲಿ ತಿಳಿಸಿದೆ.



ದೇಶಮುಖ್ ಪ್ರಕರಣ: 'ಸುಪ್ರೀಂ' ಮೆಟ್ಟಿಲೇರಿದ ಮಹಾರಾಷ್ಟ್ರ ಸರ್ಕಾರ

ಮುಂಬೈ (ಪಿಟಿಐ): ಎನ್‌ಸಿಪಿ ನಾಯಕ ಅನಿಲ್ ದೇಶಮುಖ್ ಅವರ ವಿರುದ್ಧದ ಭ್ರಷ್ಟಾಚಾರ ಆರೋಪ ಕುರಿತು ಸಿಬಿಐ ಪ್ರಾಥಮಿಕ ತನಿಖೆ ನಡೆಸಬೇಕೆಂದು ಬಾಂಬೆ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಮಂಗಳವಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

'ಬಾಂಬೆ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ, ಮಹಾರಾಷ್ಟ್ರ ಸರ್ಕಾರದ ಪರವಾಗಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದೇವೆ' ಎಂದು ರಾಜ್ಯ ಸರ್ಕಾರದ ಸ್ಥಾಯಿ ಸಲಹೆಗಾರ ಸಚಿನ್ ಪಾಟೀಲ್ ತಿಳಿಸಿದ್ದಾರೆ.

ಅನಿಲ್ ದೇಶ್‌ಮುಖ್ ವಿರುದ್ಧ ಮುಂಬೈನ ಮಾಜಿ ಪೊಲೀಸ್ ಮುಖ್ಯಸ್ಥ ಪರಮ್ ವೀರ್ ಸಿಂಗ್ ಮಾಡಿರುವ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ 15 ದಿನಗಳಲ್ಲಿ ಪ್ರಾಥಮಿಕ ತನಿಖೆ ಪೂರ್ಣಗೊಳಿಸುವಂತೆ ಬಾಂಬೆ ಹೈಕೋರ್ಟ್ ಸೋಮವಾರ ಕೇಂದ್ರೀಯ ತನಿಖಾ ದಳಕ್ಕೆ(ಸಿಬಿಐ) ನಿರ್ದೇಶನ ನೀಡಿತ್ತು. ಇದರ ಬೆನ್ನಲ್ಲೇ ಅನಿಲ್ ತಮ್ಮ ಸಚಿವ ಸ್ಥಾನಕ್ಕೆ ಸೋಮವಾರ ರಾಜೀನಾಮೆ ಸಲ್ಲಿಸಿದರು.

ನಂತರ ರಾಜ್ಯಪಾಲ ಭಗತ್ ಸಿಂಗ್ ಕೋಶ್‌ಯಾರಿ ಅವರು ಗೃಹ ಸಚಿವ ಸ್ಥಾನದ ಉಸ್ತುವಾರಿಯನ್ನು ಎನ್‌ಸಿಪಿಯ ನಾಯಕ ದಿಲೀಪ್ ವಾಲ್ಸೆ ಪಾಟೀಲ್ ಅವರಿಗೆ ವಹಿಸಿದರು.

ತಮ್ಮ ಮೇಲಿನ ಆರೋಪಗಳನ್ನು ಅನಿಲ್ ದೇಶ್‌ಮುಖ್ ನಿರಾಕರಿಸಿದ್ದಾರೆ.

ಕೋವಿಡ್–ಗೆ ಯುವಜನ, ಮಧ್ಯವಯಸ್ಕರ ಸಾವು ಹೆಚ್ಚು: ಆರೋಗ್ಯ ಶಿಕ್ಷಣ ಸಚಿವ ಸುಧಾಕರ್ ಆತಂಕ

ಸಾವಿನ 'ಲೆಕ್ಕಪರಿಶೋಧನೆ' ನಡೆಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಯುವಜನರು ಮತ್ತು ಮಧ್ಯವಯಸ್ಕರೇ ಹೆಚ್ಚಿನ ಸಂಖ್ಯೆಯಲ್ಲಿ ಸಾವಿಗೀಡಾಗುತ್ತಿರುವುದು ಆತಂಕದ ವಿಷಯ. ಸಾವಿನ ಲೆಕ್ಕಪರಿಶೋಧನೆ (ಆಡಿಟ್) ನಡೆಸಲು ತಾಂತ್ರಿಕ ಸಲಹಾ ಸಮಿತಿಗೆ ಸೂಚಿಸಲಾಗಿದೆ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಮೊದಲ ಅಲೆಗೆ ಹೋಲಿಸಿದರೆ ಎರಡನೇ ಅಲೆ ಬೇಗ ಹರಡುತ್ತಿದೆ. ಇದರ ತೀವ್ರತೆ ಕಡಿಮೆ ಇದೆಯೋ ಅಥವಾ ಹೆಚ್ಚಿದೆಯೋ ಎಂದು ಹೇಳಲು ಈಗಲೇ ಸಾಧ್ಯವಿಲ್ಲ. ಆದರೆ ಅದನ್ನು ಎದುರಿಸಲು ಬೇಕಾದ ಸಿದ್ಧತೆಗಳನ್ನು ಮಾಡಲಾಗಿದೆ' ಎಂದರು.



ಡಾ.ಸುಧಾಕರ್

33 ಸಾವಿರ ಹಾಸಿಗೆ: 'ರಾಜ್ಯದಾದ್ಯಂತ 33,697 ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗಾಗಿ ಸಿದ್ಧಪಡಿಸಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಕೃತಕ ಆಮ್ಲಜನಕ ಸಹಿತ ಹಾಸಿಗೆಗಳ ಸಂಖ್ಯೆ 15,733 ಇದೆ. ಈ ಪೈಕಿ 10,083 ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ಮೀಸಲಿಡಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಶೇ 20 ಹಾಸಿಗೆ ಮೀಸಲಿಡಲು ಸೂಚಿಸಲಾಗಿದೆ' ಎಂದೂ ಮಾಹಿತಿ ನೀಡಿದರು.

ಚಿತ್ರಮಂದಿರ ಶೇ 100 ರಷ್ಟು ಭರ್ತಿ: ಚರ್ಚಿಸಿ ತೀರ್ಮಾನ

ಬೆಂಗಳೂರು: 'ಚಿತ್ರಮಂದಿರಗಳಲ್ಲಿ ಏ. 7ರ ನಂತರವೂ ಶೇ 100ರಷ್ಟು ಪ್ರೇಕ್ಷಕರಿಗೆ (ಆಸನಗಳ ಭರ್ತಿ) ಅವಕಾಶ ನೀಡಬೇಕೆಂಬ ಚಿತ್ರ ನಿರ್ಮಾಪಕರ ಸಂಘದ ಬೇಡಿಕೆ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಸಚಿವರನ್ನು ಮಂಗಳವಾರ ಭೇಟಿ ಮಾಡಿದ ಚಿತ್ರ ನಿರ್ಮಾಪಕ ಸಂಘದ ಸದಸ್ಯರು, 'ಏ. 7ರವರೆಗೆ ಮಾತ್ರ ಶೇ 100ರಷ್ಟು ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಚಿತ್ರ ನಿರ್ಮಾಪಕರು ತೀವ್ರ ಸಂಕಷ್ಟದಲ್ಲಿದ್ದಾರೆ. ಹೀಗಾಗಿ, ಆ ನಂತರವೂ ಪೂರ್ಣ ಪ್ರಮಾಣದಲ್ಲಿ ಆಸನಗಳ ಭರ್ತಿಗೆ ಅವಕಾಶ ನೀಡಬೇಕು' ಎಂದು ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಸುಧಾಕರ್, 'ಚಿತ್ರಮಂದಿರಗಳಲ್ಲಿ ಮುಂಗಡ ಟಿಕೆಟ್ ಬುಕ್ಕಿಂಗ್ ಪಡೆಯಲಾಗಿರುತ್ತದೆ. ಬುಕ್ಕಿಂಗ್ ಹಣ ವಾಪಸು ಕೊಡಲೂ ಆಗುವುದಿಲ್ಲ. ಹೀಗಾಗಿ, ಏ. 7ರವರೆಗೆ ಅವಕಾಶ ಕೊಡಿ ಎಂದು ಈ ಹಿಂದೆ ಚಿತ್ರ ನಿರ್ಮಾಪಕರು ಒತ್ತಾಯಿಸಿದ್ದರು. ಆ ನಂತರವೂ ಶೇ 100ರಷ್ಟು ಪ್ರೇಕ್ಷಕರಿಗೆ ಅವಕಾಶ ಕೊಡಬೇಕೆಂಬ ಬೇಡಿಕೆ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸುವೆ. ತಾಂತ್ರಿಕ ಸಲಹಾ ಸಮಿತಿಯ ಸಲಹೆ ಪಡೆಯುತ್ತೇವೆ' ಎಂದರು.

ಚಿತ್ರ ನಿರ್ಮಾಪಕರ ಸಂಘದ ಕಾರ್ಯದರ್ಶಿ ಕೆ. ಮಂಜು ಮಾತನಾಡಿ, 'ಸಿನಿಮಾ ಬಿಡುಗಡೆಯ ಮೊದಲ ದಿನ 'ಚಿತ್ರಮಂದಿರಗಳಲ್ಲಿ ಪ್ರೇಕ್ಷಕರು ಭರ್ತಿ ಆಗಬಹುದು. ನಂತರ ಶೇ 40ರಿಂದ 50ರಷ್ಟು ಮಾತ್ರ ಇರುತ್ತಾರೆ. ಹೀಗಾಗಿ, ಶೇ 50 ಸೀಟುಗಳಿಗೆ ನಿರ್ಬಂಧ ಮಾಡಬೇಡಿ. ನೀವು ಖುದ್ದಾಗಿ ಚಿತ್ರಮಂದಿರಗಳಿಗೆ ಬಂದು ನೋಡಿ' ಎಂದು ಸಚಿವರಲ್ಲಿ ಮನವಿ ಮಾಡಿದರು.

ನಿರ್ಮಾಪಕರ ಸಂಘದ ಅಧ್ಯಕ್ಷ ಪ್ರವೀಣ್, ಪದಾಧಿಕಾರಿಗಳಾದ ರಮೇಶ್ ಯಾದವ್, ರಾಮಮೂರ್ತಿ ಇದ್ದರು.

ಈಶ್ವರ ಖಂಡ್ರೆಗೆ ಕೋವಿಡ್ ದೃಢ

ಬೀದರ್: ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಈಶ್ವರ ಖಂಡ್ರೆ ಅವರಿಗೆ ಮಂಗಳವಾರ ಕೋವಿಡ್ ದೃಢಪಟ್ಟಿದೆ.

ಅವರು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ.



ಈಶ್ವರ ಖಂಡ್ರೆ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	13.26 ಕೋಟಿ ▲	1.273 ಕೋಟಿ ▲
ಸಕ್ರಿಯ ಪ್ರಕರಣ	2.29 ಕೋಟಿ ▲	8.08 ಲಕ್ಷ ▲
ಗುಣಮುಖ	10.69 ಕೋಟಿ ▲	1.17 ಕೋಟಿ
ಸಾವು	28.77 ಲಕ್ಷ ▲	1.65 ಲಕ್ಷ

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	5.54 ಲಕ್ಷ ▼	1,06,563 ▲
ಗುಣಮುಖ	4.98 ಲಕ್ಷ ▲	50,100 ▼
ಸಾವು	6,967 ▼	501 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಟರ್ಕಿ	ಅಮೆರಿಕ	ಬ್ರೆಜಿಲ್
42,551	56,742 ▲	38,233

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	56,211 ▲
ತಮಿಳುನಾಡು	12,804 ▲
ದೆಹಲಿ	11,113 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಫ್ರಾನ್ಸ್	ಬ್ರೆಜಿಲ್
66.69 ▼	44.36 ▲	12.53 ▼

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	30.97 ▲
ಕೇರಳ	11.41 ▲
ಆಂಧ್ರಪ್ರದೇಶ	9.10 ▲

ಪ್ರಜಾವಾಣಿ ಗ್ರಾಫಿಕ್ಸ್

ಪಾಕ್: 80 ವರ್ಷ ಮೇಲ್ಪಟ್ಟವರಿಗೆ ಮನೆಯಲ್ಲೇ ಕೊರೊನಾ ಲಸಿಕೆ

ಇಸ್ಲಾಮಾಬಾದ್ (ಪಿಟಿಐ): ಕೋವಿಡ್ ಹೊಸ ಅಲೆ ವಿರುದ್ಧದ ಹೋರಾಟಕ್ಕೆ ಅಣಿಯಾಗುತ್ತಿರುವ ಪಾಕಿಸ್ತಾನ ಸರ್ಕಾರ, ದೇಶದಲ್ಲಿನ 80 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ವಯಸ್ಸಿನ ನಾಗರಿಕರಿಗೆ ಅವರ ಮನೆಗಳಲ್ಲೇ ಕೋವಿಡ್ ಲಸಿಕೆ ನೀಡುವುದಾಗಿ ಪ್ರಕಟಿಸಿದೆ.

ಈ ಕುರಿತು ಸೋಮವಾರ ಮಾಹಿತಿ ನೀಡಿದ ಯೋಜನೆ ಮತ್ತು ಅಭಿವೃದ್ಧಿ ಸಚಿವ ಅಸಾದ್ ಉಮರ್ 'ಬೇಸಿಗೆಯಲ್ಲಿ ಹಿರಿಯ ನಾಗರಿಕರು ಲಸಿಕಾ ಕೇಂದ್ರಗಳನ್ನು ತಲುಪುವುದು ಕಷ್ಟ. ಜತೆಗೆ ಲಸಿಕೆ ಹಾಕಿಸಿಕೊಳ್ಳಲು ಸರದಿಯಲ್ಲಿ ನಿಂತು ಕಾಯಬೇಕು. ಹಿರಿಯ ನಾಗರಿಕರು ಎದುರಿಸುವ ಇಂಥ ಹಲವು ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ' ಎಂದು ಅವರು ಹೇಳಿದರು.

ವಿಶ್ವದಾದ್ಯಂತ 30 ಲಕ್ಷ ಗಡಿದಾಟಿದ ಸಾವು

ಬೆಂಗಳೂರು (ರಾಯಿಟರ್ಸ್): ಕೋವಿಡ್ 19 ಲಸಿಕೆಯ ಅಭಿಯಾನದ ನಡುವೆಯೂ ಸೋಂಕಿನ ಪ್ರಕರಣಗಳು ವಿಶ್ವದಾದ್ಯಂತ ಹೆಚ್ಚುತ್ತಿದ್ದು, ಕೊರೊನಾ ಸೋಂಕಿನಿಂದ ಸಾವಿಗೀಡಾದವರ ಸಂಖ್ಯೆ 30 ಲಕ್ಷದ ಗಡಿಯನ್ನು ಮಂಗಳವಾರ ದಾಟಿದೆ.

ವಿಶ್ವದಾದ್ಯಂತ ಕೋವಿಡ್ 19 ಸಾವಿನ ಸಂಖ್ಯೆ ಮತ್ತೊಮ್ಮೆ ಏರಿಕೆಯಾಗುತ್ತಿದೆ. ಅದರಲ್ಲೂ ಬ್ರೆಜಿಲ್ ಮತ್ತು ಭಾರತದಲ್ಲಿ ಕೋವಿಡ್ ಸಾವಿನ ಸಂಖ್ಯೆ ಏರುತ್ತಿದೆ.

ಬ್ರಿಟನ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಮೊದಲು ಕಾಣಿಸಿಕೊಂಡ ರೂಪಾಂತರಿ ಕೊರೊನಾ, ಲಾಕ್‌ಡೌನ್ ಮತ್ತು ಕೋವಿಡ್ ಮಾರ್ಗಸೂಚಿ ಸರಿಯಾಗಿ ಪಾಲಿಸದ ಹಾಗೂ ಸಾರ್ವಜನಿಕರ ನಿಲಕ್ಷ್ಯದಿಂದಾಗಿ ಸೋಂಕು ವ್ಯಾಪಿಸುತ್ತಿದೆ. ಮರಣ ಸಂಖ್ಯೆಯೂ ಹೆಚ್ಚುತ್ತಿದೆ ಎಂದು ಆರೋಗ್ಯ ಅಧಿಕಾರಿಗಳು ದೂಷಿಸಿದ್ದಾರೆ.

> **ಬ್ರೆಜಿಲ್ ತುಂಬಾ ಗಂಭೀರ ಪರಿಸ್ಥಿತಿ ಎದುರಿಸುತ್ತಿದೆ. ಆಸ್ಪತ್ರೆಗಳ ತೀವ್ರ ನಿಗಾ ಘಟಕಗಳು ಶೇ 90ಕ್ಕಿಂತಲೂ ಹೆಚ್ಚು ತುಂಬಿವೆ**
> **ಮಾರಿಯಾ ವ್ಯಾನ್ ಕೆರ್ಖೋವ್,** ವಿಶ್ವ ಆರೋಗ್ಯ ಸಂಸ್ಥೆಯ ಸಾಂಕ್ರಾಮಿಕ ರೋಗಶಾಸ್ತ್ರಜ್ಞ

ರಾಯಿಟರ್ಸ್ ಸುದ್ದಿಸಂಸ್ಥೆ ಮಾಡಿರುವ ಲೆಕ್ಕಾಚಾರದ ಪ್ರಕಾರ, ಜಾಗತಿಕವಾಗಿ ಕೊರೊನಾ ವೈರಸ್ ಸಂಬಂಧಿ ಸಾವಿನ ಸಂಖ್ಯೆ 20 ಲಕ್ಷ ತಲುಪಲು ಒಂದು ವರ್ಷಕ್ಕಿಂತ ಹೆಚ್ಚು ಸಮಯ ತೆಗೆದುಕೊಂಡಿತ್ತು. ಮುಂದಿನ 10 ಲಕ್ಷ ಸಾವುಗಳು ಕೇವಲ ಮೂರು ತಿಂಗಳಲ್ಲಿ ಸಂಭವಿಸಿವೆ.

ರಾಯಿಟರ್ಸ್ ವಿಶ್ಲೇಷಣೆಯ ಪ್ರಕಾರ, ಪ್ರತಿದಿನದ ಸರಾಸರಿ ಸಾವಿನ ಸಂಖ್ಯೆಯಲ್ಲಿ ಬ್ರೆಜಿಲ್ ವಿಶ್ವದಲ್ಲೇ ಅಗ್ರಸ್ಥಾನದಲ್ಲಿದೆ. ಪ್ರತಿದಿನ ವಿಶ್ವದಾದ್ಯಂತ ಕೋವಿಡ್ ಸಂಬಂಧಿತ ನಾಲ್ಕು ಸಾವುಗಳಲ್ಲಿ ಒಂದು ಸಾವಿನ ಪ್ರಕರಣ ಬ್ರೆಜಿಲ್‌ನಲ್ಲಿ ವರದಿಯಾಗುತ್ತಿದೆ.



ಕೊರೊನಾ ವೈರಸ್‌ನಿಂದಾಗಿ ಬ್ರೆಜಿಲ್‌ನಲ್ಲಿ ಭೀಕರ ಪರಿಸ್ಥಿತಿ ಎದುರಾಗಿರುವುದನ್ನು ವಿಶ್ವ ಆರೋಗ್ಯ ಸಂಸ್ಥೆ ಒಪ್ಪಿಕೊಂಡಿದ್ದು, ಸುಸಜ್ಜಿತ ಆರೋಗ್ಯ ವ್ಯವಸ್ಥೆಯನ್ನು ಹೊಂದಿರುವ ದೇಶವೇ ಇಂದು ಅತ್ಯಂತ ಗಂಭೀರ ಸ್ಥಿತಿಯಲ್ಲಿದೆ ಎಂದು ಅದು ಹೇಳಿದೆ.

ಭಾರತದಲ್ಲೂ ಸೋಮವಾರ ಕೋವಿಡ್ 19 ಸೋಂಕು ದಾಖಲೆಯ ಪ್ರಮಾಣದಲ್ಲಿ ಏರಿಕೆ ಕಂಡಿದ್ದು, ಅಮೆರಿಕದ ನಂತರ ಒಂದು ದಿನದಲ್ಲಿ ಲಕ್ಷಕ್ಕೂ ಹೆಚ್ಚು ಹೊಸ ಪ್ರಕರಣಗಳನ್ನು ದಾಖಲಿಸಿದ ಎರಡನೇ ರಾಷ್ಟ್ರವೆನಿಸಿದೆ.

ಭಾರತದಲ್ಲಿ ಅತೀ ಹೆಚ್ಚು ಪ್ರಕರಣಗಳು ದಾಖಲಾಗಿರುವ ಮಹಾರಾಷ್ಟ್ರ ರಾಜ್ಯದಲ್ಲಿ ಪರಿಸ್ಥಿತಿ ತುಂಬಾ ಗಂಭೀರವಾಗಿದ್ದು, ಆಸ್ಪತ್ರೆಗಳು ಕೋವಿಡ್ ರೋಗಿಗಳಿಂದ ತುಂಬಿ ಹೋಗಿವೆ. ಆ ರಾಜ್ಯದಲ್ಲಿ ಶಾಪಿಂಗ್ ಮಾಲ್‌ಗಳು, ಚಿತ್ರಮಂದಿರಗಳು, ಬಾರ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಪೂಜಾ ಸ್ಥಳಗಳನ್ನು ಮುಚ್ಚಲು ಪ್ರಾರಂಭಿಸಲಾಗಿದೆ.

ಬಿಜೆಪಿಯ 41ನೇ ಸಂಸ್ಥಾಪನಾ ದಿನಾಚರಣೆ

'ಉದ್ದೇಶಪೂರ್ವಕವಾಗಿ ಸುಳ್ಳುಗಳನ್ನು ಹಬ್ಬಿಸಲಾಗುತ್ತಿದೆ. ಇದು ನಮ್ಮ ಮುಂದಿರುವ ಗಂಭೀರ ಸವಾಲು. ಪಕ್ಷದ ಕಾರ್ಯಕರ್ತರು ಎಚ್ಚರದಿಂದಿರಬೇಕು'– ಮೋದಿ

'ರಾಜಕೀಯ ಅಸ್ಥಿರತೆ ಸೃಷ್ಟಿಸುವ ಪಿತೂರಿ'

ನವದೆಹಲಿ (ಪಿಟಿಐ): ನೂತನ ಕೃಷಿ ಕಾಯ್ದೆಗಳು, ಸಿಎಎ ಕುರಿತು ಅಪಪ್ರಚಾರ ಮಾಡುವ ಮೂಲಕ ದೇಶದಲ್ಲಿ ರಾಜಕೀಯ ಅಸ್ಥಿರತೆ ಸೃಷ್ಟಿಸುವ ಪಿತೂರಿ ನಡೆಯುತ್ತಿದೆ. ಈ ಕುರಿತು ಜನರಲ್ಲಿ ಅರಿವು ಮೂಡಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಬಿಜೆಪಿ ಕಾರ್ಯಕರ್ತರಿಗೆ ಮನವಿ ಮಾಡಿದರು.

ಬಿಜೆಪಿಯ 41ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ದೇಶಿಸಿ ಆನ್‌ಲೈನ್ ಮೂಲಕ ಮಾತನಾಡಿದ ಅವರು, 'ಕೇಂದ್ರ ಸರ್ಕಾರದ ಕೈಗೊಂಡ ನಿರ್ಧಾರಗಳ ವಿರುದ್ಧ ಕೆಲವು ವ್ಯಕ್ತಿಗಳು, ಸಂಘಟನೆಗಳಿಂದ ಅಪಪ್ರಚಾರ ನಡೆಯುತ್ತಿದೆ' ಎಂದು ಟೀಕಿಸಿದರು.



'ನೂತನ ಕೃಷಿ ಕಾಯ್ದೆಗಳ ಜಾರಿ ಮೂಲಕ ರೈತರ ಜಮೀನುಗಳನ್ನು ವಶಪಡಿಸಿಕೊಳ್ಳಲಾಗುತ್ತದೆ, ಸಿಎಎ ಜಾರಿಯಾದರೆ ಕೆಲವು ಜನರ ಪೌರತ್ವ ರದ್ದಾಗುತ್ತದೆ, ಮೀಸಲಾತಿಯನ್ನೇ ತೆಗೆದು ಹಾಕಲಾಗುತ್ತದೆ ಅಥವಾ ಸಂವಿಧಾನವನ್ನು ಬದಲಾವಣೆ ಮಾಡಲಾಗುತ್ತದೆ ಎಂಬಂಥ ಸುಳ್ಳುಗಳನ್ನು ಹಬ್ಬಿಸಲಾಗುತ್ತಿದೆ ' ಎಂದು ವಾಗ್ದಾಳಿ ನಡೆಸಿದರು.

'ಇದು ನಮ್ಮ ಮುಂದಿರುವ ಗಂಭೀರವಾದ ಸವಾಲು. ಇಂಥ ಸುಳ್ಳುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು' ಎಂದು ಅವರು ಹೇಳಿದರು.

'ಚುನಾವಣೆಗಳಲ್ಲಿ ಬಿಜೆಪಿ ಸತತ ಗೆಲುವು ಸಾಧಿಸುತ್ತಿರುವುದನ್ನು ವಿರೋಧ ಪಕ್ಷಗಳು ಟೀಕಿಸುತ್ತಿವೆ. ಅವರು ಗೆದ್ದಾಗ ನಾವು ಅವರನ್ನು ಅಭಿನಂದಿಸಿದ್ದೇವೆ. ಹೀಗಾಗಿ ಇದು ವಿಪಕ್ಷಗಳಲ್ಲಿನ ದ್ವಂದ್ವ ನಿಲುವನ್ನು ತೋರಿಸುತ್ತದೆ' ಎಂದು ಮೋದಿ ಹೇಳಿದರು.

'ಭಾರತದ ಮತದಾರರು ಪ್ರಬುದ್ಧರಾಗಿದ್ದಾರೆ ಎಂಬುದನ್ನು ವಿರೋಧ ಪಕ್ಷಗಳು ಅರ್ಥ ಮಾಡಿಕೊಳ್ಳುತ್ತಿಲ್ಲ. ಜನರ ಆಶೋತ್ತರಗಳು, ನಿರೀಕ್ಷೆಗಳು, ಅವರ ಕನಸುಗಳನ್ನು ಸಹ ಈ ಜನರು ಅರ್ಥ ಮಾಡಿಕೊಂಡಿಲ್ಲ' ಎಂದು ವಿರೋಧ ಪಕ್ಷಗಳ ವಿರುದ್ಧ ಹರಿಹಾಯ್ದರು.

ಪತ್ನಿ ಆಫ್ಶಾನ್ ಅನ್ಸಾರಿಗೆ ನಕಲಿ ಎನ್‌ಕೌಂಟರ್ ಆತಂಕ

ಉತ್ತರಪ್ರದೇಶಕ್ಕೆ ಪಾತಕಿ ಮುಖ್ತಾರ್ ಅನ್ಸಾರಿ ಸ್ಥಳಾಂತರ

ಚಂಡೀಗಡ(ಪಿಟಿಐ): ಪಂಜಾಬ್‌ನ ರೂಪ್‌ನಗರದ ಜೈಲಿನಲ್ಲಿರುವ ಪಾತಕಿ ಹಾಗೂ ರಾಜಕಾರಣಿ ಮುಖ್ತಾರ್ ಅನ್ಸಾರಿಯನ್ನು ಬಾಂದಾ ಜೈಲಿಗೆ ಸ್ಥಳಾಂತರಿಸಲು ಉತ್ತರಪ್ರದೇಶ ಪೊಲೀಸರು ಮಂಗಳವಾರ ವಶಕ್ಕೆ ಪಡೆದಿದ್ದಾರೆ.

ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ 2019ರ ಜನವರಿಯಿಂದ ರೂಪ್‌ನಗರ ಜೈಲಿನಲ್ಲಿರುವ ಅನ್ಸಾರಿಯನ್ನು ಉತ್ತರಪ್ರದೇಶ ಪೊಲೀಸರಿಗೆ ಹಸ್ತಾಂತರಿಸಲಾಗಿದೆ. ಆರೋಪಿಯನ್ನು ಆಂಬುಲೆನ್ಸ್‌ನಲ್ಲಿ ಪೊಲೀಸರು ಕರೆದೊಯ್ದಿದ್ದಾರೆ ಎಂದು ಪಂಜಾಬ್ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಕಾರಾಗೃಹ) ಪ್ರವೀಣ್ ಕುಮಾರ್ ಸಿನ್ಹಾ ತಿಳಿಸಿದ್ದಾರೆ.

ಅನ್ಸಾರಿ ಕರೆದೊಯ್ಯಲು ಉತ್ತರ ಪ್ರದೇಶದ ಪೊಲೀಸ್ ವಾಹನಗಳು, ಆಂಬುಲೆನ್ಸ್ ಮತ್ತು ವಜ್ರ ವಾಹನಗಳು ಮಧ್ಯಾಹ್ನ 12 ಗಂಟೆ ಸುಮಾರಿಗೆ ರೂಪ್‌ನಗರ ಜೈಲಿಗೆ ಬಂದಿದ್ದವು. ಉತ್ತರಪ್ರದೇಶದ ಪೊಲೀಸ್ ಸಿಬ್ಬಂದಿ ಕೂಡ ಮಂಗಳವಾರ ರೂಪ್‌ನಗರ ಜಿಲ್ಲೆಗೆ ಬಂದು, ಬೀಡುಬಿಟ್ಟಿದ್ದರು.

ರೂಪ್‌ನಗರ ಜೈಲಿನ ಹೊರಗಡೆ ಮತ್ತು ಜೈಲಿಗೆ ಹೋಗುವ ರಸ್ತೆಯಲ್ಲಿ ಪಂಜಾಬ್ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ, ಭಾರಿ ಭದ್ರತಾ ವ್ಯವಸ್ಥೆ ಮಾಡಿದ್ದರು.



ವ್ಹೀಲ್ ಚೇರ್‌ನಲ್ಲಿ ಮುಖ್ತಾರ್ ಅನ್ಸಾರಿ

ಹಲವು ಗಂಭೀರ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿ ಮುಖ್ತಾರ್ ಅನ್ಸಾರಿಯನ್ನು ಉತ್ತರಪ್ರದೇಶ ಸರ್ಕಾರಕ್ಕೆ ಹಸ್ತಾಂತರಿಸುವಂತೆ ಮಾರ್ಚ್ 26ರಂದು ಸುಪ್ರೀಂಕೋರ್ಟ್, ಪಂಜಾಬ್ ಸರ್ಕಾರಕ್ಕೆ ಸೂಚಿಸಿತ್ತು.

ಉತ್ತರ ಪ್ರದೇಶದ ಮೌ ಕ್ಷೇತ್ರದ ಬಿಎಸ್‌ಪಿ ಶಾಸಕ ಅನ್ಸಾರಿ ಮೇಲೆ ಸುಮಾರು 52 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 15 ಪ್ರಕರಣಗಳು ವಿಚಾರಣೆಯ ಹಂತದಲ್ಲಿವೆ. 2005ರಲ್ಲಿ ನಡೆದ ಬಿಜೆಪಿ ಶಾಸಕ ಕೃಷ್ಣಾನಂದ ರೈ ಹತ್ಯೆ ಪ್ರಕರಣದಲ್ಲೂ ಅನ್ಸಾರಿ ಆರೋಪಿಯಾಗಿದ್ದಾರೆ.

ಅನ್ಸಾರಿ ಪತ್ನಿ ಸುಪ್ರೀಂ ಮೊರೆ: ಅನ್ಸಾರಿಯನ್ನು ನಕಲಿ ಎನ್‌ಕೌಂಟರ್‌ನಲ್ಲಿ ಪೊಲೀಸರು ಕೊಲ್ಲಬಹುದೆಂಬ ಆತಂಕ ವ್ಯಕ್ತಪಡಿಸಿರುವ ಆತನ ಪತ್ನಿ ಆಫ್ಶಾನ್ ಅನ್ಸಾರಿ, ಪಂಜಾಬ್‌ನಿಂದ ಉತ್ತರಪ್ರದೇಶಕ್ಕೆ ಕರೆತರುವಾಗ ಮಾರ್ಗದಲ್ಲಿ ಅವರ ಜೀವಕ್ಕೆ ಯಾವುದೇ ಅಪಾಯ ಎದುರಾಗದಂತೆ ಭದ್ರತೆಕೊಡಿಸಬೇಕು ಎಂದು ಸುಪ್ರೀಂಕೋರ್ಟ್‌ಗೆ ಮೊರೆ ಇಟ್ಟಿದ್ದಾರೆ.

ಉತ್ತರಪ್ರದೇಶದ ಸರ್ಕಾರದ ಮೇಲೆ ನಂಬಿಕೆ ಇಲ್ಲವೆಂದಿರುವ ಪಾತಕಿ ಅನ್ಸಾರಿಯ ಸಹೋದರ ಹಾಗೂ ಬಿಎಸ್ಪಿ ಸಂಸದ ಅಫ್ಜಲ್ ಅನ್ಸಾರಿಯವರು, ತಮ್ಮ ಸಹೋದರನ ಜೀವದ ಬಗ್ಗೆ ಆತಂಕವಿದೆ ಎಂದಿದ್ದಾರೆ.

'ನನಗೆ ನ್ಯಾಯಾಂಗದ ಮೇಲೆ ಸಂಪೂರ್ಣ ನಂಬಿಕೆ ಇದೆ. ಆದರೆ, ಸರ್ಕಾರ ನಂಬಲು ಸಾಧ್ಯವಿಲ್ಲ. ಸರ್ಕಾರಕ್ಕೆ ಮುಖ್ತಾರ್ ಮೇಲೆ ಕೆಟ್ಟ ಉದ್ದೇಶವಿದೆ' ಎಂದು ಗಾಜಿಪುರದ ಲೋಕಸಭಾ ಕ್ಷೇತ್ರದ ಸಂಸದರಾದ ಅಫ್ಜಲ್ ಅನ್ಸಾರಿ ಮಂಗಳವಾರ ಹೇಳಿದ್ದಾರೆ.

'ಆಡಳಿತ ಪಕ್ಷದ ಮುಖಂಡರಿಗೆ ತುಂಬಾ ಆಪ್ತನಾಗಿರುವ ಮತ್ತೊಬ್ಬ ಪಾತಕಿ ಬ್ರಿಜೇಶ್ ಸಿಂಗ್ ವಿರುದ್ಧ ಮುಖ್ತಾರ್ ಧ್ವನಿ ಎತ್ತಿದ್ದರು. ಬ್ರಿಜೇಶ್ ಸಿಂಗ್ ರಕ್ಷಿಸಲು ರಾಜ್ಯ ಸರ್ಕಾರ ನನ್ನ ಸಹೋದರನ ವಿರುದ್ಧ ಪಿತೂರಿ ನಡೆಸುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

ಈ ನಡುವೆ ಮುಖ್ತಾರ್ ಅವರ ಪತ್ನಿ ಆಫ್ಶಾನ್ ಅನ್ಸಾರಿ, ಪಂಜಾಬ್‌ನಿಂದ ಬಾಂದಾ ಜೈಲಿಗೆ ಸಾಗಿಸುವಾಗ ಪತಿಯ ಜೀವದ ಸುರಕ್ಷತೆಯನ್ನು ಖಾತ್ರಿಪಡಿಸಲು ಉತ್ತರಪ್ರದೇಶ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಪತಿಯನ್ನು ನಕಲಿ ಎನ್‌ಕೌಂಟರ್‌ನಲ್ಲಿ ಪೊಲೀಸರು ಕೊಲ್ಲಬಹುದೆಂಬ ಆತಂಕವನ್ನು ಅವರು ಅರ್ಜಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಆಫ್ಶಾನ್ ಈ ಹಿಂದೆ ಇದೇ ರೀತಿ ಆತಂಕ ವ್ಯಕ್ತಪಡಿಸಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೆ ಪತ್ರ ಬರೆದಿದ್ದರು. 'ಕೊಲೆ ಪ್ರಕರಣದಲ್ಲಿ ನನ್ನ ಪತಿ ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಈ ಪ್ರಕರಣದಲ್ಲಿ ಪಾತಕಿ ಬ್ರಿಜೇಶ್ ಸಿಂಗ್ ಮತ್ತು ಆತನ ಒಬ್ಬ ಸಹಚರ ಪ್ರಮುಖ ಆರೋಪಿಗಳಾಗಿದ್ದಾರೆ' ಎಂದು ಆಫ್ಶಾನ್ ದೂರಿದ್ದಾರೆ.

'ಕರ್ಮದಿಂದ ಪಾರಾಗಲು ಯಾರಿಗೂ ಸಾಧ್ಯವಿಲ್ಲ'

ನವದೆಹಲಿ (ಪಿಟಿಐ): ರಫೇಲ್ ಯುದ್ಧವಿಮಾನಗಳ ಖರೀದಿಗೆ ಸಂಬಂಧಿಸಿ, ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದು, 'ಕ್ರಿಯೆಗೆ ಸಂಬಂಧಿಸಿದ ಕರ್ಮದಿಂದ ಯಾರೊಬ್ಬರೂ ಪಾರಾಗಲು ಸಾಧ್ಯವಿಲ್ಲ' ಎಂದಿದ್ದಾರೆ.

'ಮಧ್ಯವರ್ತಿ'ಗೆ 1.1 ಮಿಲಿಯನ್ ಯೂರೊ (₹9.51 ಕೋಟಿ) ಪಾವತಿಸಲಾಗಿದೆ ವಿಮಾನಗಳ ತಯಾರಿಕಾ ಸಂಸ್ಥೆಯ ಹೇಳಿಕೆ ಕುರಿತು ಫ್ರಾನ್ಸ್ ಮಾಧ್ಯಮಗಳ ವರದಿ ಕುರಿತಂತೆ ಈ ಹೇಳಿಕೆ ನೀಡಿದ್ದಾರೆ. ಬಿಜೆಪಿ ಈ ಮೊದಲು ಆರೋಪವನ್ನು ನಿರಾಕರಿಸಿತ್ತು.

ಯುದ್ಧವಿಮಾನಗಳ ಖರೀದಿ ವಹಿವಾಟಿನಲ್ಲಿ ಕಮಿಷನ್ ಪಾವತಿಯಾಗಿದೆ ಎಂದು ರಾಹುಲ್ ಗಾಂಧಿ ಈ ಹಿಂದೆಯೂ ಪ್ರಬಲವಾಗಿ ಆರೋಪಿಸಿದ್ದು, ಸರ್ಕಾರ ಸಾರಾಸಗಟಾಗಿ ತಿರಸ್ಕರಿಸಿತ್ತು.

'ಕರ್ಮ ಎಂಬುದು ಒಬ್ಬರ ಕ್ರಿಯೆಗೆ ಸಂಬಂಧಿಸಿದ ದಾಖಲೆ. ಅದರಿಂದ ಯಾರೂ ತಪ್ಪಿಸಿಕೊಳ್ಳಲಾಗದು' ಎಂದು ಅವರು ಟ್ವೀಟ್ ಮಾಡಿದ್ದಾರೆ. 2019ರ ಲೋಕಸಭೆ ಚುನಾವಣೆಯಲ್ಲಿಯೂ ಕಾಂಗ್ರೆಸ್ ಈ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿತ್ತು.



ರಾಹುಲ್ ಗಾಂಧಿ

ತಿದ್ದುಪಡಿ

ರಫೇಲ್ ಯುದ್ಧ ವಿಮಾನ ಖರೀದಿಗೆ ಸಂಬಂಧಿಸಿದಂತೆ ಭಾರತದ ಮಧ್ಯವರ್ತಿಗೆ ಫ್ರಾನ್ಸ್‌ನ ಡಾಸೊ ಕಂಪನಿಯು ನೀಡಿದ್ದ 'ಕೊಡುಗೆ' ₹ 9.51 ಕೋಟಿ (1.1 ಮಿಲಿಯನ್ ಯೂರೊ). ಸೋಮವಾರದ ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿತ್ತು. – ಸಂ

ಹಿರೆನ್ ಕೊಲೆ: ಸಿಎಂಎಸ್‌ಟಿಗೆ ವಾಜೆ ಕರೆದೊಯ್ದ ಎನ್‌ಐಎ

ಮುಂಬೈ (ಪಿಟಿಐ): ಉದ್ಯಮಿ ಮನ್‌ಸುಖ್ ಹಿರೆನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ತಂಡದ (ಎನ್‌ಐಎ) ಅಧಿಕಾರಿಗಳು ಪ್ರಕರಣದ ಆರೋಪಿ, ಅಮಾನತುಗೊಂಡ ಪೊಲೀಸ್ ಅಧಿಕಾರಿ ಸಚಿನ್ ವಾಜೆಯನ್ನು ಘಟನೆಯ ಮರುಸೃಷ್ಟಿಗಾಗಿ ದಕ್ಷಿಣ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್‌ಗೆ(ಸಿಎಸ್‌ಎಂಟಿ) ಕರೆದೊಯ್ದರು.

ಹಿರೆನ್ ಹತ್ಯೆ ನಡೆದ ದಿನ ಸಚಿನ ವಾಜೆ ಅವರು ನೆರೆಯ ಠಾಣೆಗೆ ಹೋಗಲು ಸಿಎಸ್‌ಎಂಟಿಯಿಂದ ರೈಲು ಹತ್ತಿದ್ದರು. ಮಾರ್ಚ್ 4 ರಂದು ತನಿಖಾ ತಂಡ ಸಂಗ್ರಹಿಸಿದ ಸಿಸಿಟಿವಿ ದೃಶ್ಯಗಳಲ್ಲಿ ವಾಜೆ ಅವರು ಇದೇ ರೈಲ್ವೆ ನಿಲ್ದಾಣದಿಂದ ಠಾಣೆಗೆ ಹೋಗುವ ರೈಲು ಹತ್ತಿರುವ ದೃಶ್ಯ ಸೆರೆಯಾಗಿತ್ತು.

ಈ ಹಿನ್ನೆಲೆಯಲ್ಲಿ ತನಿಖಾ ತಂಡವು ಸೋಮವಾರ ತಡರಾತ್ರಿ ಸಿಎಸ್‌ಎಂಟಿಗೆ ವಾಜೆ ಅವರನ್ನು ಕರೆದೊಯ್ದಿತ್ತು. ಇದಾದ ನಂತರ ಮಾರ್ಚ್ 5ರಂದು ಹಿರೆನ್ ಮನ್‌ಸುಖ್ ಶವ ಪತ್ತೆಯಾದ ಠಾಣೆಯ ಮುಂಬ್ರಾಕ್ ಹಳ್ಳದ ಬಳಿಗೂ ಕರೆದೊಯ್ಯಲಾಯಿತು ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಮಾರಾಟದ ಸರಕಾದ ವೈಯಕ್ತಿಕ ಮಾಹಿತಿ!

ವಿಶ್ವನಾಥ ಎಸ್.

ಸಾಮಾಜಿಕ ಮಾಧ್ಯಮಗಳಲ್ಲಿ ಖಾಸಗಿತನ ಮತ್ತು ವೈಯಕ್ತಿಕ ಮಾಹಿತಿಗಳಿಗೆ ಸುರಕ್ಷತೆ ಇಲ್ಲ ಎನ್ನುವುದನ್ನು ಪದೇ ಪದೇ ಸ್ಪಷ್ಟಪಡಿಸುವ ಹಲವು ಘಟನೆಗಳು ನಡೆಯುತ್ತಲೇ ಇವೆ. ಭಾರತವನ್ನೂ ಒಳಗೊಂಡು 106 ದೇಶಗಳ 53.3 ಕೋಟಿ ಫೇಸ್‌ಬುಕ್ ಬಳಕೆದಾರರ ವೈಯಕ್ತಿಕ ಮಾಹಿತಿ ಸೋರಿಕೆಯಾಗಿದೆ ಎನ್ನುವ ವರದಿಯು ಇದಕ್ಕೆ ಇನ್ನೊಂದು ಸೇರ್ಪಡೆಯಷ್ಟೆ. ಇದರಲ್ಲಿ 61 ಲಕ್ಷ ಭಾರತೀಯ ಬಳಕೆದಾರರ ಮಾಹಿತಿ ಸೋರಿಕೆ ಆಗಿದೆ ಎನ್ನುವುದನ್ನೂ ಗಮನಿಸಬೇಕಾಗಿದೆ.


ಸೈಬರ್ ಸುರಕ್ಷತಾ ಸಂಸ್ಥೆ ಹಡ್ಸನ್ ರಾಕ್ ನೀಡಿರುವ ಮಾಹಿತಿಯ ಪ್ರಕಾರ, ಈ ಖಾತೆಗಳು ಸೋರಿಕೆಯಷ್ಟೇ ಆಗಿಲ್ಲ, ಬದಲಾಗಿ ಹ್ಯಾಕಿಂಗ್ ವೇದಿಕೆಯಲ್ಲಿ ಉಚಿತವಾಗಿಯೂ ಪೋಸ್ಟ್ ಮಾಡಲಾಗಿದೆ. ಫೇಸ್‌ಬುಕ್ ಖಾತೆಗೆ ಬಳಸಿರುವ ಫೋನ್ ನಂಬರ್ ಅನ್ನೂ ಒಳಗೊಂಡು ಎಲ್ಲಾ ಮಾಹಿತಿಗಳೂ ಆನ್‌ಲೈನ್‌ನಲ್ಲಿ ಸೋರಿಕೆ ಆಗಿವೆ.

ಈ ಬಗ್ಗೆ ಫೇಸ್‌ಬುಕ್ ಹೇಳುವುದೇ ಬೇರೆ! 2019ರಲ್ಲಿ ಕಂಡುಬಂದಿದ್ದ ಸಮಸ್ಯೆ ಅದು, 2019ರ ಆಗಸ್ಟ್‌ನಲ್ಲಿ ಅದನ್ನು ಸರಿಪಡಿಸಲಾಗಿದೆ ಎಂದು ಫೇಸ್‌ಬುಕ್ ವಕ್ತಾರರು ಹೇಳಿದ್ದಾರೆ. ಆದರೆ, ಸೋರಿಕೆ ಆಗಿರುವ ಮಾಹಿತಿಯು ಹಳೆಯವೇ ಆಗಿದ್ದರೂ ಸೈಬರ್ ಅಪರಾಧಿಗಳಿಗೆ ಮೌಲ್ಯಯುತವಾಗಿದ್ದೇ ಆಗಿವೆ ಎನ್ನುವುದು ಹಡ್ಸನ್ ರಾಕ್ ಸಂಸ್ಥೆಯ ಸಹ ಸ್ಥಾಪಕ ಅಲನ್ ಗಾಲ್ ವಾದ. ಏಕೆಂದರೆ ಅವುಗಳಲ್ಲಿ ಬಳಕೆದಾರನ ಮೊಬೈಲ್ ಸಂಖ್ಯೆ ಇರುತ್ತದೆ. ಅದೊಂದು ಇದ್ದರೆ ಸಾಕು, ಹಲವು ರೀತಿಯ ದಾಳಿ ನಡೆಸಲು ಸೈಬರ್ ಅಪರಾಧಿಗಳಿಗೆ ಅನುಕೂಲ ಆಗುತ್ತದೆ ಎನ್ನುತ್ತಾರೆ ಅವರು.

ಫೇಸ್‌ಬುಕ್ ವಿರುದ್ಧ ದತ್ತಾಂಶ ಸುರಕ್ಷತೆಯ ಪ್ರಶ್ನೆ ಎದುರಾಗಿರುವುದು ಇದೇ ಮೊದಲಲ್ಲ ಎಂದೂ ಅವರು ಹೇಳುತ್ತಾರೆ. 2020ರ ಆರಂಭದಲ್ಲಿ ಪ್ರತಿಯೊಂದು ಫೇಸ್‌ಬುಕ್ ಖಾತೆಗೆ ಲಿಂಕ್ ಆಗಿರುವ ಫೋನ್ ನಂಬರ್‌ಗಳು ಸೋರಿಕೆ ಆಗಿವೆ. ಫೇಸ್‌ಬುಕ್ ಐಡಿ ಮತ್ತು ಬಳಕೆದಾರನ ಪೂರ್ಣ ಹೆಸರು ಸಹ ಸೋರಿಕೆ ಆಗಿದ್ದು. 2018ರ ಮಾರ್ಚ್‌ನಲ್ಲಿ 5.62 ಲಕ್ಷ ಭಾರತೀಯರ ಫೇಸ್‌ಬುಕ್ ಡೇಟಾ ಕಳುವಾಗಿತ್ತು ಎನ್ನುವ ಮಾಹಿತಿಯನ್ನೂ ಅವರು ನೀಡಿದ್ದಾರೆ.

ಈ ಡಿಜಿಟಲ್ ಯುಗದಲ್ಲಿ ಬಳಕೆದಾರನೇ ಮಾರಾಟದ ಸರಕಾಗಿರುವಾಗ ಅದೆಷ್ಟೇ ಎಚ್ಚರ ವಹಿಸಿದರೂ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದು ಕಷ್ಟವಾಗುತ್ತಿದೆ. ವಾಟ್ಸ್‌ಆ್ಯಪ್‌ನ ಹೊಸ ನೀತಿಯಿಂದ ಖಾಸಗಿತನಕ್ಕೆ ರಕ್ಷಣೆ ಸಿಗುವುದಿಲ್ಲ ಎಂದು ಜಗತ್ತಿನೆಲ್ಲೆಡೆ ವ್ಯಾಪಕ ವಿರೋಧ ವ್ಯಕ್ತವಾಗುತ್ತಿರುವ ಬೆನ್ನಲ್ಲೇ ಇದೀಗ ಫೇಸ್‌ಬುಕ್ ಬಳಕೆದಾರರ ಮಾಹಿತಿ ಸೋರಿಕೆ ಆಗಿರುವ ಕುರಿತ ವರದಿಯು ಸಾಮಾಜಿಕ ಮಾಧ್ಯಮಗಳನ್ನು ಬಳಸುವ ಬಗ್ಗೆ ಮತ್ತೆ ಮರುಚಿಂತನೆ ನಡೆಸುವಂತೆ ಮಾಡುತ್ತಿದೆ ಎಂದರೆ ತಪ್ಪಾಗಲಾರದು. ಏಕೆಂದರೆ, ಕಂಪನಿ ತನ್ನ ಲೋಪ ಸರಿಪಡಿಸಿಕೊಂಡರೂ ಬಳಕೆದಾರನ ಮೊಬೈಲ್ ಸಂಖ್ಯೆ, ಜನ್ಮ ದಿನಾಂಕ, ಇನ್ನಿತರ ವೈಯಕ್ತಿಕ ಮಾಹಿತಿಗಳು ಅದಾಗಲೇ ಜಗಜ್ಜಾಹೀರಾಗಿ ಬಿಟ್ಟಿರುತ್ತವೆ. ಊರು ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದಂತೆ! ಹೀಗಾಗಿ, ತೀರಾ ಅಗತ್ಯ ಇಲ್ಲದೇ ಮೊಬೈಲ್ ಸಂಖ್ಯೆ,

ಜನ್ಮ ದಿನಾಂಕ ಇನ್ನಿತರ ವೈಯಕ್ತಿಕ ಮಾಹಿತಿಗಳನ್ನು ಹಂಚಿಕೊಳ್ಳದಿರುವುದೇ ಒಳಿತು. ಅದರಲ್ಲಿಯೂ ಬ್ಯಾಂಕ್ ವಹಿವಾಟು ನಡೆಸುವ ಮೊಬೈಲ್ ಸಂಖ್ಯೆಯನ್ನು ಬೇರೆ ಉದ್ದೇಶಗಳಿಗೆ ಬಳಸದೇ ಇರುವುದು ಸುರಕ್ಷತೆಯ ದೃಷ್ಟಿಯಿಂದ ಹೆಚ್ಚು ಸೂಕ್ತ.



> ಸಾಮಾಜಿಕ ಮಾಧ್ಯಮಗಳಲ್ಲಿ ವೈಯಕ್ತಿಕ ಮಾಹಿತಿಗಳನ್ನು ಹಂಚಿಕೊಳ್ಳುವ ಮುನ್ನ ಅದರ ಅಗತ್ಯ ಏನು ಎನ್ನುವ ಕುರಿತು ಆಲೋಚಿಸಬೇಕಿದೆ. ಹಾಗೆ ಮಾಡದೇ ಇದ್ದರೆ ಮುಂದೆ ಪಶ್ಚಾತ್ತಾಪ ಪಡಬೇಕಾಗಬಹುದು!

ಫೇಸ್‌ಬುಕ್‌ನಲ್ಲಿ ಸುರಕ್ಷತೆಗೆ ಕೆಲವು ಸಲಹೆ

- ಡಿಲೀಟ್ ಆಯ್ಕೆ: ವೈಯಕ್ತಿಕ ಮಾಹಿತಿಗಳಾದ ಫೋನ್ ನಂಬರ್, ಹುಟ್ಟುಹಬ್ಬದ ಮಾಹಿತಿ, ಯಾವೆಲ್ಲಾ ಸ್ಥಳಕ್ಕೆ ಭೇಟಿ ನೀಡಿದ್ದೇವೆ ಎನ್ನುವುದನ್ನು ಡಿಲೀಟ್ ಮಾಡಲು ಹೀಗೆ ಮಾಡಿ. ಫೇಸ್‌ಬುಕ್ ಪುಟದಲ್ಲಿ ನಿಮ್ಮ ಪ್ರೊಫೈಲ್ ಚಿತ್ರದ ಮೇಲೆ ಕ್ಲಿಕ್ ಮಾಡಿದರೆ ಅಲ್ಲಿ Edit Public Details ಎನ್ನುವ ಆಯ್ಕೆ ಕಾಣಿಸುತ್ತದೆ. ಅದರ ಮೇಲೆ ಕ್ಲಿಕ್ ಮಾಡಿದರೆ ಡಿಲೀಟ್ ಮಾಡಬಹುದು ಅಥವಾ ಬದಲಿಸಬಹುದು.
- ಫೇಶಿಯಲ್ ರೆಕಗ್ನಿಷನ್: ಫೇಸ್‌ಬುಕ್ ಪುಟದ ಮೇಲ್ಭಾಗ ಬಲಬದಿಯಲ್ಲಿ ಮೂರು ಅಡ್ಡಗೆರೆಗಳು ಕಾಣಿಸುತ್ತವೆ ಅದರ ಮೇಲೆ ಕ್ಲಿಕ್ ಮಾಡಿ Settings & Privacy > Privacy Shortcuts > Control Face recongition ಇಲ್ಲಿ Do you want facebook to be able to recognize you in photos and videos ಅನ್ನು ಆಯ್ಕೆ ಕಾಣಿಸುತ್ತದೆ. ಅದರ ಮೇಲೆ ಕ್ಲಿಕ್ ಮಾಡಿ Yes/No ಆಯ್ಕೆ ಮಾಡಿ.
- ಡೇಟಾ ನಿಯಂತ್ರಣ: ಬೇರೆ ಆ್ಯಪ್‌ಗಳು ಅಥವಾ ನ್ಯೂಸ್‌ಪೇಪರ್ ಸೈಟ್‌ಗಳಿಗೆ ಲಾಗಿನ್ ಆಗಲು ಫೇಸ್‌ಬುಕ್ ಬಳಸಿದ್ದರೆ ಅವುಗಳು ನಮ್ಮ ಫೇಸ್‌ಬುಕ್ ಖಾತೆಯಲ್ಲಿರುವ ಎಲ್ಲಾ ಮಾಹಿತಿಗಳನ್ನೂ ಅಕ್ಸೆಸ್ ಮಾಡುತ್ತವೆ. ಇದನ್ನು ತಪ್ಪಿಸಲು ಫೇಸ್‌ಬುಕ್ ಪುಟದ ಮೇಲ್ಭಾಗ ಬಲಬದಿಯಲ್ಲಿ ಮೂರು ಅಡ್ಡಗೆರೆಗಳು ಕಾಣಿಸುತ್ತವೆ ಅದರ ಮೇಲೆ ಕ್ಲಿಕ್ ಮಾಡಿ Settings & Privacy > Settings > Apps and Websites ಇಲ್ಲಿ ಕ್ಲಿಕ್ ಮಾಡಿದ ಬಳಿಕ Apps, Websites and Games ಎಂದಿರುವಲ್ಲಿ Edit ಮೇಲೆ ಕ್ಲಿಕ್ ಮಾಡಿ. ಅಲ್ಲಿ Cancel ಮತ್ತು Turn off ಆಯ್ಕೆ ಕಾಣಿಸುತ್ತವೆ.





ಮೈಕ್ರೋಮ್ಯಾಕ್ಸ್ ಇನ್1, ತ್ರಿವಳಿ ಕ್ಯಾಮೆರಾ ಸೆಟಪ್

ಅಗ್ಗದ ಚೀನಾ ಫೋನ್‌ಗಳಿಗೆ ಭಾರತದ ಸವಾಲು

ಅವಿನಾಶ್ ಬಿ.

ಚೀನಾದ ಫೋನ್‌ಗಳ ಭರಾಟೆ ನಡುವೆ ನಲುಗಿ ಅಜ್ಞಾತವಾಸದಲ್ಲಿದ್ದು ಇದೀಗ ಮತ್ತೆ ಮಾರುಕಟ್ಟೆಗೆ ಇಳಿದಿರುವ ಭಾರತದ ಮೈಕ್ರೋಮ್ಯಾಕ್ಸ್, ಇತ್ತೀಚೆಗಷ್ಟೇ ಇನ್ 1ಬಿ ಹಾಗೂ ಇನ್ ನೋಟ್ 1 ಸಾಧನಗಳನ್ನು ಬಿಡುಗಡೆಗೊಳಿಸಿತ್ತು. ಇದೀಗ ಇನ್ 1ಬಿ ಸಾಧನದ ಸುಧಾರಿತ ಆವೃತ್ತಿಯನ್ನು ಇನ್ 1 ಹೆಸರಿನಲ್ಲಿ ಬಿಡುಗಡೆಗೊಳಿಸಿದೆ. ಪ್ರಜಾವಾಣಿಗೆ ರಿವ್ಯೂಗೆ ದೊರೆತಿರುವ ಈ ಸ್ಮಾರ್ಟ್ ಫೋನ್ ಹೇಗಿದೆ? ತಿಳಿಯೋಣ.

ಹೊಸ ಟ್ರೆಂಡ್ ಪ್ರಕಾರ 6.67 ಇಂಚಿನ ಸ್ಕ್ರೀನ್, ಫಿಂಗರ್ ಪ್ರಿಂಟ್ ಸ್ಕ್ಯಾನರ್ ಇರುವ ಪಾಲಿಕಾರ್ಬೊನೇಟ್ ಬಾಡಿ, ಆಕರ್ಷಕವಾದ ಕ್ಯಾಮೆರಾ ಪ್ಯಾನೆಲ್, ಯುಎಸ್‌ಬಿ ಟೈಪ್-ಸಿ ಚಾರ್ಜಿಂಗ್ ಪೋರ್ಟ್ ಇದರಲ್ಲಿದೆ. 48 ಮೆಗಾಪಿಕ್ಸೆಲ್ ಸಾಮರ್ಥ್ಯದ ಪ್ರಧಾನ ಕ್ಯಾಮೆರಾ ಹಾಗೂ 5000 mAh ಚಾರ್ಜಿಂಗ್ ಸಾಮರ್ಥ್ಯದ ಬ್ಯಾಟರಿ ಹಾಗೂ ಪ್ಯೂರ್ ಆಂಡ್ರಾಯ್ಡ್ 10 ಕಾರ್ಯಾಚರಣಾ ವ್ಯವಸ್ಥೆಯು ಚೀನಾದ ಫೋನ್‌ಗಳಿಗೆ ಪ್ರಬಲ ಪ್ರತಿಸ್ಪರ್ಧೆ ಒಡ್ಡುತ್ತಿದೆ. ಮುಂಭಾಗದಲ್ಲಿ ಪಂಚ್-ಹೋಲ್ ಸೆಲ್ಫೀ ಕ್ಯಾಮೆರಾ (8 ಮೆಗಾಪಿಕ್ಸೆಲ್) ಸೆಟಪ್ ಇದೆ. ಇನ್-1ಬಿಗೆ ಹೋಲಿಸಿದರೆ ಚಿತ್ರಗಳು ಹೆಚ್ಚು ಸ್ಫುಟವಾಗಿವೆ.

ಇಂಟಲಿಜೆಂಟ್ ಅಸಿಸ್ಟೆನ್ಸ್ ಎಂಬ ವೈಶಿಷ್ಟ್ಯ ಗಮನ ಸೆಳೆಯುತ್ತಿದ್ದು, ಫೋನ್ ತಿರುಗಿಸಿದರೆ ಕರೆ ನಿಶ್ಶಬ್ದವಾಗಿಸುವುದು, ಕರೆ ಬಂದಾಗ ಕಿವಿಯ ಬಳಿ ಹಿಡಿದಾಕ್ಷಣ ಉತ್ತರಿಸುವ 'ಸ್ಮಾರ್ಟ್ ಆನ್ಸರ್' ವ್ಯವಸ್ಥೆ, ಮೂರು ಬೆರಳುಗಳಲ್ಲಿ ಸ್ಕ್ರೀನ್ ಮೇಲೆ ಎಳೆದರೆ ಸ್ಕ್ರೀನ್ ಶಾಟ್ ತೆಗೆಯುವ ವ್ಯವಸ್ಥೆ, ಫೋನ್ ಎತ್ತಿಕೊಂಡಾಕ್ಷಣ ಸ್ಕ್ರೀನ್ ಆನ್ ಆಗುವುದು, ಕರೆ ಬಂದಾಗ ಬೆಳಕು ಫ್ಲ್ಯಾಶ್ ಆಗುವ ವ್ಯವಸ್ಥೆ - ಮುಂತಾದ ಆಸಕ್ತಿದಾಯಕ ವೈಶಿಷ್ಟ್ಯಗಳಿವೆ. ಡ್ಯೂರಾ ಸ್ಪೀಡ್ ಎಂಬ ಸೆಟ್ಟಿಂಗ್ ಮೂಲಕ, ಹಿನ್ನೆಲೆಯಲ್ಲಿ ನಿರ್ದಿಷ್ಟ ಆ್ಯಪ್‌ಗಳು ಕೆಲಸ ಮಾಡುವುದನ್ನು ಸ್ಥಗಿತಗೊಳಿಸಿ, ಮುನ್ನೆಲೆಯಲ್ಲಿರುವ ಆ್ಯಪ್‌ಗಳಿಗೆ ಹೆಚ್ಚು ವೇಗ ದೊರೆಯುತ್ತದೆ.

ಕ್ಯಾಮೆರಾ: ಹಿಂಭಾಗದಲ್ಲಿ 48 ಮೆಗಾಪಿಕ್ಸೆಲ್ ತ್ರಿವಳಿ ಕ್ಯಾಮೆರಾದ ಆಕರ್ಷಕ ಲಂಬ ಪ್ಯಾನೆಲ್ ಇದೆ. ತಲಾ 2 ಮೆಗಾಪಿಕ್ಸೆಲ್ ಸಾಮರ್ಥ್ಯದ ಮ್ಯಾಕ್ರೋ ಮತ್ತು ಡೆಪ್ತ್ ಸೆನ್ಸರ್ ಇದೆ. ಆದರೆ ಆಧುನಿಕ ಫೋನ್‌ಗಳಲ್ಲಿರುವಂತೆ ವೈಡ್ ಆ್ಯಂಗಲ್ ಸೆನ್ಸರ್ ಇಲ್ಲ. ಮುಂಭಾಗದಲ್ಲಿ 8MP ಸಾಮರ್ಥ್ಯದ ಸೆಲ್ಫೀ ಕ್ಯಾಮೆರಾ ವಿಡಿಯೊ ಕರೆಗೂ ಸೂಕ್ತವಾಗಿದೆ. ಸೂಕ್ತ ಬೆಳಕಿರುವಲ್ಲಿ ಚಿತ್ರ, ವಿಡಿಯೊ ಗುಣಮಟ್ಟ ಚೆನ್ನಾಗಿದೆ. ಎಐ ತಂತ್ರಜ್ಞಾನದೊಂದಿಗೆ ಅಪರ್ಚರ್ ಮೋಡ್, ಪ್ರೋ ಮೋಡ್, ಪೋರ್ಟ್ರೇಟ್, ನೈಟ್, HDR, ಮ್ಯಾಕ್ರೋ, ಬ್ಯೂಟಿ, ಟೈಮ್ ಲ್ಯಾಪ್ಸ್, ಸ್ಲೋ ಮೋಶನ್, ಪಾನೋರಮಾ ಮೋಡ್‌ಗಳು, ಇಂಟೆಲಿಜೆಂಟ್ ಸ್ಕ್ಯಾನಿಂಗ್ ವ್ಯವಸ್ಥೆ ಗಮನ ಸೆಳೆಯುತ್ತದೆ. ಆಟೋ-ಫೋಕಸ್ ಹಾಗೂ ವೈಡ್ ಆ್ಯಂಗಲ್ ವ್ಯವಸ್ಥೆ ಇಲ್ಲ ಎನ್ನುವುದು ಈ ಬೆಲೆಗೆ ಹೋಲಿಸಿದರೆ ದೊಡ್ಡ ತೊಡಕಾಗಲಾರದು.

ಯುಎಸ್‌ಬಿ ಟೈಪ್-ಸಿ ಪೋರ್ಟ್ ಇದ್ದು, ಭರ್ಜರಿ ಅನ್ನಿಸುವ 5000 mAh ಬ್ಯಾಟರಿಗೆ 18W ವೇಗದ ಚಾರ್ಜಿಂಗ್ ಅಡಾಪ್ಟರ್ ಇದೆ. ಸಾಮಾನ್ಯ ಬಳಕೆಯಲ್ಲಿ 2 ದಿನಗಳ ಬ್ಯಾಟರಿ ಚಾರ್ಜ್‌ಗೆ ಸಮಸ್ಯೆಯಾಗಲಿಲ್ಲ.

ಬೆಲೆ: 4 + 64 GB ಮಾದರಿಗೆ ₹10,499 ಹಾಗೂ 6 + 128GB ಮಾದರಿಗೆ ₹11,999.

ವೈಶಿಷ್ಟ್ಯಗಳು

- ಡಿಸ್‌ಪ್ಲೇ: 6.67- ಇಂಚಿನ IPS ಡಿಸ್‌ಪ್ಲೇ, Full HD + ರೆಸೊಲ್ಯುಶನ್ (2,400 x 1,080 ಪಿಕ್ಸೆಲ್), 60 Hz ರಿಫ್ರೆಶ್ ರೇಟ್, 20:9 ಆಸ್ಪೆಕ್ಟ್ ಅನುಪಾತ ಹಾಗೂ 395 ppi ಸ್ಪಷ್ಟತೆ. ಜೊತೆಗೆ, ಪಂಚ್-ಹೋಲ್ ಸೆಲ್ಫೀ ಕ್ಯಾಮೆರಾ.
- ತಂತ್ರಾಂಶ: ಆಂಡ್ರಾಯ್ಡ್ 10.
- ಸಿಪಿಯು: 12 nm ಮೀಡಿಯಾಟೆಕ್ ಹೀಲಿಯೊ G80 ಒಕ್ಟಾ-ಕೋರ್ 2.0 GHz
- ಮೆಮೊರಿ: 4 GB / 6 GB RAM LPDDR4X
- ಸ್ಟೋರೇಜ್: 64 GB / 128 GB, ವಿಸ್ತರಿಸಬಹುದು
- ಪ್ರಧಾನ ಕ್ಯಾಮೆರಾ: AI ತ್ರಿವಳಿ ಕ್ಯಾಮೆರಾ (48 MP f/1.79 ಪ್ರಧಾನ + 2 MP f/2.4 ಮ್ಯಾಕ್ರೋ + 2 MP f/2.4 ಡೆಪ್ತ್ ಸೆನ್ಸರ್), LED ಫ್ಲ್ಯಾಶ್
- ಸೆಲ್ಫೀ ಕ್ಯಾಮೆರಾ: 8 MP f/2.0
- ಸಂಪರ್ಕ: USB ಟೈಪ್-C, 3.5 ಮಿಮೀ ಪೋರ್ಟ್, IR, Wi-Fi, ಬ್ಲೂಟೂತ್, ಜಿಪಿಎಸ್
- ಸುರಕ್ಷತೆ: ಫಿಂಗರ್‌ಪ್ರಿಂಟ್ ಸ್ಕ್ಯಾನರ್. ಮುಖಚಹರೆ ಅನ್‌ಲಾಕ್ ಪಾರ್ಶ್ವದಲ್ಲಿ ಗೂಗಲ್ ಅಸಿಸ್ಟೆಂಟ್ ಕೀ
- ಡ್ಯುಯಲ್ 4G, ನ್ಯಾನೋ SIMಗಳು, ಪ್ರತ್ಯೇಕ ಮೈಕ್ರೋಎಸ್‌ಡಿ ಕಾರ್ಡ್ ಸ್ಲಾಟ್
- ಬ್ಯಾಟರಿ: 5,000 mAh
- ಚಾರ್ಜಿಂಗ್: 18W ವೇಗದ ಚಾರ್ಜಿಂಗ್
- ಬಣ್ಣಗಳು: ನೀಲಿ ಮತ್ತು ನೇರಳೆ


ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ತ್ರಿಕೋನಮಿತಿ ನಿತ್ಯ ಸಮೀಕರಣಗಳು

ಗಣಿತ

ಎಸ್ಸೆಸ್ಸೆಲ್ಸಿ

ಚರಾಕ್ಷರಗಳ ಎಲ್ಲಾ ಬೆಲೆಗಳಿಗೆ ಒಂದು ಸಮೀಕರಣವು ಸತ್ಯವಾದರೆ ಅದನ್ನು ನಿತ್ಯ ಸಮೀಕರಣ ಎನ್ನುತ್ತೇವೆ. ಹಾಗೆಯೇ ಒಂದು ಕೋನದ ತ್ರಿಕೋನಮಿತಿ ಅನುಪಾತಗಳನ್ನು ಹೊಂದಿರುವ ಸಮೀಕರಣವು ಕೋನದ ಎಲ್ಲಾ ಅಳತೆಗಳಿಗೆ ಸತ್ಯವಾಗಿದ್ದರೆ ತ್ರಿಕೋನ ಮಿತಿ ಎಂದು ಕರೆಯುತ್ತೇವೆ.



ΔABC ಯಲ್ಲಿ $B = 90^0 = AB^2 + BC^2 + AC^2 \ldots\ldots (1)$

$$\frac{AB^2}{AC^2} + \frac{BC^2}{AC^2} = \frac{AC^2}{AC^2}$$

$$\left[\frac{AB^2}{AC^2}\right] + \left[\frac{BC^2}{AC^2}\right] = 1$$

$$(COSA)^2 + (SinA)^2 = 1$$

$$(COS^2A) + (Sin^2A) = 1$$

ಈ ಸಮೀಕರಣವು $A = 0^0$ ನಿಜ ಆಗಿದೆ. $A = 10^0$ ಆಗಲಿ ಈ ಸಮೀಕರಣವು ಸತ್ಯವಾಗುತ್ತದೆ.

$$\frac{AB^2}{BC^2} + \frac{BC^2}{BC^2} = \frac{BC^2}{BC^2}$$

$$\left(\frac{AB^2}{BC^2}\right) + 1 = \left[\frac{AC^2}{BC^2}\right]$$

$(COt^2A) + 1 = cosec^2A$ ಆಗುತ್ತದೆ.

ಇದೇ ವಿಧಾನದಲ್ಲಿ

$$\frac{AB^2}{AB^2} + \frac{BC^2}{AB^2} = \frac{AC^2}{AB^2}$$

$$\left(\frac{AB}{AB}\right)^2 + \left[\frac{BC}{AB}\right]^2 = \left(\frac{AC}{AB}\right)^2$$

$$1 + ton^2 A = Sec^2 A$$

ಈ ನಿತ್ಯ ಸಮೀಕರಣಗಳನ್ನು ಬಳಸಿ ಪ್ರತಿ ತ್ರಿಕೋನಮಿತಿ ಅನುಪಾತವನ್ನು ಮತ್ತೊಂದು ತ್ರಿಕೋನ ಮಿತಿ ಅನುಪಾತದಲ್ಲಿ ವ್ಯಕ್ತಪಡಿಸಬಹುದು. ಅಂದರೆ ಯಾವುದಾದರೂ ಒಂದು ಅನುಪಾತ ತಿಳಿದಿದ್ದರೆ ಉಳಿದ ತ್ರಿಕೋನ ಮಿತಿ ಅನುಪಾತಗಳನ್ನು ಲೆಕ್ಕಿಸಬಹುದು.

$tonA = \frac{1}{\sqrt{3}}$ ಎಂದು ಭಾವಿಸೋಣ ಆಗ

$$CotA = \sqrt{3} \quad sec^2A = 1 + ton^2A$$

$$sec^2A = 1 + \left(\frac{1}{\sqrt{3}}\right)^2$$

$$sec^2A = 1 + \frac{1}{\sqrt{3}}$$

$secA = \frac{2}{\sqrt{3}}$ ಮತ್ತು $cosA = \frac{\sqrt{3}}{2}$

ಮತ್ತು $SinA = \sqrt{1 - \cos^2}A$

$$= \sqrt{1 - \frac{3}{4}} = 1/2$$

$SinA = 1/2, \quad CoseeA = 2$ ಆಗುತ್ತದೆ.

ಅಲ್ಲದೇ cosA, tonA ಮತ್ತು secA ಅನುಪಾತಗಳನ್ನು sinA ರೂಪದಲ್ಲಿ ವ್ಯಕ್ತಪಡಿಸಬಹುದು.

$$\cos^2A + Sin^2A = 1$$

$$\cos^2A = 1 - Sin^2A$$

$$\cos A\sqrt{1 - Sin^2A}$$

$$tonA = \frac{\sin A}{\cos A} = \frac{\sin A}{\sqrt{1 - \sin^2 A}}$$

$secA = \frac{1}{\cos} = \frac{1}{\sqrt{1 = \sin^2 A}}$ ಆಗುತ್ತದೆ.

(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಕ್ವಾಡ್ರಾಟಿಕ್ ಇಕ್ವೇಷನ್_ನೇಚರ್ ಆಫ್ ರೂಟ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3mqaBnN


ಫ್ರಕ್ಟೋಸ್

ರಸಾಯನಶಾಸ್ತ್ರ


ದ್ವಿತೀಯ ಪಿಯುಸಿ


ಫ್ರಕ್ಟೋಸ್ ಒಂದು ಪ್ರಮುಖ ಕೀಟೊ ಹೆಕ್ಸೋಸ್ ಆಗಿದೆ. ಇದನ್ನು ಡೈಸ್ಯಾಕರೈಡ್ ಆದ ಸುಕ್ರೋಸ್‌ನ ಜಲವಿಭಜನೆಯಿಂದ ಗ್ಲುಕೋಸ್‌ನ ಜತೆ ಇದನ್ನು ಪಡೆಯಲಾಗುತ್ತದೆ.

ಫ್ರಕ್ಟೋಸ್ ಸಹ C6H1206 ಅಣು ಸೂತ್ರವನ್ನು ಹೊಂದಿದೆ ಮತ್ತು ಪ್ರತಿಕ್ರಿಯೆಗಳ ಆಧಾರದಲ್ಲಿ ಕಂಡು ಬರುವುದೇನೆಂದರೆ ಅದರ ಇಂಗಾಲ ಸಂಖ್ಯೆ 2 ರಲ್ಲಿ ಕೀಟೊನಿಕ್ ಕ್ರಿಯಾತ್ಮಕ ಗುಂಪು ಇದ್ದು ಗ್ಲುಕೋಸ್‌ನಲ್ಲಿದ್ದಂತೆ ಆರು ಇಂಗಾಲಗಳು ನೇರ ಸರಪಳಿಯಲ್ಲಿ ಇವೆ.




ಇದು ಸಹ ಎರಡು ಸೈಕ್ಲಿನಿಕ್ ರೂಪದಲ್ಲಿ ಅಸ್ತಿತ್ವದಲ್ಲಿದ್ದು, ಅವನ್ನು C-5 ನಲ್ಲಿರುವ - OH ಗುಂಪು, (C = 0) ಗುಂಪಿನೊಡನೆ ಕೂಡಿಕೊಂಡು ಪಡೆಯಲಾಗುತ್ತದೆ. ಈ ರೀತಿ ಉಂಟಾದ ಚಕ್ರ ಐದು ಪರಮಾಣುವಿನ ಚಕ್ರ ಆಗಿದ್ದು, ಫ್ಯುರಾನ್ ಸಂಯುಕ್ತದೊಡನೆ ಸಾದೃಶ್ಯ ಹೊಂದಿರುವುದರಿಂದ ಅದನ್ನು ಫ್ಯುರನೋಸ್ ಎಂದು ಹೆಸರಿಸಲಾಗಿದೆ.





ಫ್ಯುರಾನ್

ಫ್ರಕ್ಟೋಸ್ ಎರಡು ಆನೋಮರ್‌ಗಳ ಸೈಕ್ಲಿಕ್ ರಚನೆಯನ್ನು ಈ ಕೆಳಗೆ ತೋರಿಸಿದಂತೆ ಹಾವರ್ಥ ರಚನೆಯಲ್ಲಿ ಪ್ರತಿನಿಧಿಸಲಾಗಿದೆ.



ಪ್ರೊಟೀನ್‌ಗಳು

ಪ್ರೊಟೀನ್‌ಗಳು ಜೀವ ವ್ಯವಸ್ಥೆಯಲ್ಲಿ ಅತಿ ಹೇರಳವಾಗಿ ಇರುವ ಜೈವಿಕ ಅಣುಗಳಾಗಿವೆ. ಪ್ರೊಟೀನ್‌ಗಳ ಮುಖ್ಯ ಆಕರಗಳು ಹಾಲು, ಗಿಣ್ಣು, ಧಾನ್ಯಗಳು, ನೆಲಗಡಲೆ, ಮೀನು, ಮಾಂಸ ಮುಂತಾದವು. ಇವುಗಳು ದೇಹದ ಪ್ರತಿಯೊಂದು ಭಾಗದಲ್ಲೂ ಇವೆ ಮತ್ತು ಜೀವದ ರಚನೆ ಮತ್ತು ಕಾರ್ಯ ವಿಧಾನಗಳ ಮೂಲಾಧಾರವಾಗಿರುತ್ತವೆ. ಇವು ದೇಹದ ಬೆಳವಣಿಗೆ ಮತ್ತು ನಿರ್ವಹಣೆಗೆ ಅಗತ್ಯವಾಗಿವೆ. ಪ್ರೊಟೀನ್ ಎಂಬ ಶಬ್ದವನ್ನು ಗ್ರೀಕ್ ಪದ ಪ್ರೊಟಿಯೋಸ್‌ನಿಂದ ಪಡೆಯಲಾಗಿದ್ದು, ಇದರ ಅರ್ಥ ಪ್ರಾಥಮಿಕ ಅಥವಾ ಪ್ರಾಮುಖ್ಯ ಎಲ್ಲಾ ಪ್ರೊಟೀನುಗಳು ಅಮೈನೋ ಆಮ್ಲಗಳ ಪಾಲಿಮರ್‌ಗಳಾಗಿವೆ.

ಅಮೈನೋ ಆಮ್ಲಗಳು ಅಮೈನೋ ($-NH_2$) ಮತ್ತು ಕಾರ್ಬಾಕ್ಸಿಲ್ -COOH ಕಾರ್ಯಕಾರಿ ಗುಂಪುಗಳನ್ನು ಹೊಂದಿದೆ. ಪ್ರೊಟೀನ್‌ಗಳು ಜಲವಿಭಜನೆಯಾದಾಗ $\alpha -$ ಅಮೈನೋ ಆಮ್ಲಗಳು ಮಾತ್ರ ದೊರಕುತ್ತವೆ.

ಎಲ್ಲಾ $\alpha -$ ಅಮೈನೋ ಆಮ್ಲಗಳು ರೂಢಿ ನಾಮಗಳನ್ನು ಹೊಂದಿವೆ ಮತ್ತು ಅವುಗಳು ಸಾಮಾನ್ಯವಾಗಿ ಆ ಸಂಯುಕ್ತದ ಗುಣಲಕ್ಷಣ ಮತ್ತು ಮೂಲವನ್ನು ಪ್ರತಿಬಿಂಬಿಸುತ್ತವೆ.

ಅಮೈನೋ ಆಮ್ಲಗಳನ್ನು ಸಾಮಾನ್ಯವಾಗಿ ಮೂರು ಅಕ್ಷರಗಳ ಸಂಕೇತದಿಂದ ಸೂಚಿಸಲಾಗುತ್ತದೆ. ಕೆಲವೊಮ್ಮೆ ಒಂದು ಅಕ್ಷರದ ಸಂಕೇತವನ್ನು ಕೂಡಾ ಉಪಯೋಗಿಸಲಾಗುತ್ತದೆ. ಕೆಲವು ಸಾಮಾನ್ಯವಾಗಿ ಕಾಣ ಸಿಗುವ ಅಮೈನೋ ಆಮ್ಲಗಳ ರಚನೆಯನ್ನು ಅವುಗಳ 3 ಅಕ್ಷರ ಮತ್ತು 1 ಅಕ್ಷರದ ಸಂಕೇತಗಳ ಜತೆಯಲ್ಲಿ ನೀಡಲಾಗಿದೆ.

$$R - CH - COOH$$
$$NH_2$$

$\alpha -$ ಅಮೈನೋ ಆಮ್ಲದ ಸಾಮಾನ್ಯ ಸೂತ್ರ

($R -$ ಪಕ್ಕ ಸರಪಳಿ)

ಕ್ರ.ಸಂ	ಅಮೈನೋ ಆಮ್ಲದ ಹೆಸರು	ಮೂರು ಅಕ್ಷರದ ಸಂಕೇತ	ಒಂದು ಅಕ್ಷರ ಸಂಕೇತ
1	ಗ್ಲೈಸೀನ್	Gly	G
2	ಅಲಾನಿನ್	Ala	A
3	ವ್ಯಾಲಿನ್	Val	V
4	ಲ್ಯೂಸಿನ್	Leu	L
5	ಐಸೋಲ್ಯೂಸಿನ್	Ile	I
6	ಅರ್ಜಿನಿನ್	Arg	R
7	ಲೈಸೀನ್	Lys	K
8	ಗ್ಲುಟಾಮಿಕ್ ಆಮ್ಲ	Gla	E
9	ಅಸ್ಪಾರ್ಟಿಕ್ ಆಮ್ಲ	Asp	D
10	ಗ್ಲುಟಾಮೀನ್	Gln	Q
11	ಆಸ್ಪಾರ್‌ಜೀನ್	Asn	N
12	ಥ್ರಿಯೋನೀನ್	Thr	T
13	ಸೇರಿನ್	Ser	S
14	ಸಿಸ್ಟೀನ್	Cys	C
15	ಮೀಥೈಯೋನೀನ್	Met	M
16	ಫೀನೈಲ್ ಅಲಾನಿನ್	Phe	F
17	ಟೈರೋಸೀನ್	Tyr	Y
18	ಟ್ರಿಪ್ಟೋಫೇನ್	Trp	Type equation here.
19	ಹಿಸ್ಟಿಡಿನ್	His	H
20	ಪ್ರೊಲೀನ್	Pro	P

(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರೋ ಮ್ಯಾಗ್ನೆಟಿಕ್ ವೇವ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3urhtE5

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಸ್ವಂತ ಗೊಡ್ಡಾಚಾರಗಳು ಮಾನವರನ್ನು ಸಂಕೋಲಿಸಿ ಗುಲಾಮರಾಗಿಸುವಂತೆ ಯಾವ ವಸಾಹತುಶಾಹಿ ವಿಲಾಯತಿಯೂ ಮಾಡಲಾರ.

-ಕೆ.ಎಸ್.ನಿಸಾರ್ ಅಹಮದ್

ನಕ್ಸಲರ ಅಟ್ಟಹಾಸ ನಿಗ್ರಹಿಸಿ ಜನರ ವಿಶ್ವಾಸ ಗಳಿಸಿ

ಛತ್ತೀಸಗಡದ ಬಸ್ತಾರ್ ಪ್ರದೇಶದಲ್ಲಿ 10 ದಿನಗಳ ಅಂತರದಲ್ಲಿ ನಡೆದ ಮಾವೊವಾದಿ ಉಗ್ರರ ಎರಡು ದಾಳಿಗಳಲ್ಲಿ ಅರೆಮಿಲಿಟರಿ ಮತ್ತು ಭದ್ರತಾ ಪಡೆಗಳ 27 ಯೋಧರು ಹುತಾತ್ಮರಾಗಿದ್ದಾರೆ. ಮಾರ್ಚ್ 23ರಂದು ನಡೆದ ಮಾವೊವಾದಿಗಳ ದಾಳಿಯಲ್ಲಿ ಜಿಲ್ಲಾ ಮೀಸಲು ಪಡೆಯ ಐವರು ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದರು. ಏಪ್ರಿಲ್ 3ರಂದು ಮಾವೊವಾದಿ ಉಗ್ರರು ಇನ್ನೂ ದೊಡ್ಡ ಮಟ್ಟದ ದಾಳಿ ನಡೆಸಿದಾಗ ಅರೆಮಿಲಿಟರಿ ಪಡೆಗಳ 22 ಯೋಧರು ಮೃತರಾಗಿದ್ದಾರೆ. ಸುಕ್ಮಾ ಜಿಲ್ಲೆಯಲ್ಲಿ ನಡೆದ ಈ ದಾಳಿಯಲ್ಲಿ ಒಬ್ಬ ಯೋಧ ಕಣ್ಮರೆಯಾಗಿ, 32 ಜನ ಗಾಯಗೊಂಡಿರುವುದು ಈ ಪ್ರದೇಶದಲ್ಲಿ ಮಾವೊವಾದಿಗಳ ಅಟ್ಟಹಾಸ ಮಿತಿ ಮೀರಿರುವುದನ್ನು ಎತ್ತಿ ತೋರಿಸುತ್ತದೆ. ಛತ್ತೀಸಗಡದಲ್ಲಿ ಮಾವೊವಾದಿಗಳು ಹಾಗೂ ಭದ್ರತಾ ಪಡೆಗಳ ನಡುವಣ ಘರ್ಷಣೆಗೆ ಐದು ದಶಕಗಳ ದೀರ್ಘ ಇತಿಹಾಸವೇ ಇದೆ. ಕಳೆದ ಶತಮಾನದ 70ರ ದಶಕದಲ್ಲಿ ಈ ಪ್ರದೇಶದಲ್ಲಿ ಹುಟ್ಟಿಕೊಂಡ ನಕ್ಸಲ್ ಚಳವಳಿಯನ್ನು ಮಟ್ಟ ಹಾಕಲು ಸರ್ಕಾರ ಬಹಳಷ್ಟು ಶ್ರಮ ಪಟ್ಟಿದೆ. ಸಶಸ್ತ್ರ ಕಾರ್ಯಾಚರಣೆ ಮಾತ್ರವಲ್ಲ, ಉಗ್ರರ ಮನವೊಲಿಸುವಿಕೆ, ದಟ್ಟ ಅರಣ್ಯದ ಒಳಭಾಗದಲ್ಲಿ ನೆಲೆಸಿರುವ ಆದಿವಾಸಿಗಳ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳ ಜಾರಿ ಮುಂತಾಗಿ ಎಲ್ಲ ರೀತಿಯ ಪ್ರಯತ್ನಗಳನ್ನೂ ನಡೆಸಿದೆ. ಇದರಿಂದ ನಕ್ಸಲ್ ಚಳವಳಿ ಸ್ವಲ್ಪಮಟ್ಟಿಗೆ ದುರ್ಬಲಗೊಂಡಿತ್ತು. ಆದರೆ 2004ರ ಬಳಿಕ ಈ ಪ್ರದೇಶದಲ್ಲಿ ಮಾವೊವಾದಿ ಚಳವಳಿ ಇನ್ನಷ್ಟು ಉಗ್ರಗೊಂಡಿರುವುದು ಸ್ಪಷ್ಟ. ಸುಕ್ಮಾ ಜಿಲ್ಲೆಯಲ್ಲಿ ಅರೆಮಿಲಿಟರಿ ಪಡೆಗಳ ಜೊತೆ ನಡೆಸಿದ ಗುಂಡಿನ ದಾಳಿಯಲ್ಲಿ 400ಕ್ಕೂ ಹೆಚ್ಚು ಮಾವೊವಾದಿಗಳು ಪಾಲ್ಗೊಂಡಿದ್ದರು ಎನ್ನುವುದು ಈ ಆದಿವಾಸಿ ಪ್ರದೇಶದಲ್ಲಿ ಮಾವೊವಾದಿಗಳು ಹೊಂದಿರುವ ಹಿಡಿತಕ್ಕೆ ಸಾಕ್ಷಿ. 2000ದಿಂದ ಈಚೆಗೆ ಮಾವೊವಾದಿಗಳು ಮತ್ತು ನಮ್ಮ ಭದ್ರತಾ ಪಡೆಗಳ ನಡುವೆ ನಡೆದಿರುವ ಹಲವು ಘರ್ಷಣೆಗಳಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎನ್ನುವುದು ಪರಿಸ್ಥಿತಿಯ ತೀವ್ರತೆಯನ್ನು ತೋರಿಸುತ್ತದೆ.



ಈ ಪ್ರದೇಶದಲ್ಲಿ ಸರ್ಕಾರವು ಗುಪ್ತಚರ ಜಾಲವನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಜೊತೆಗೆ ಜನರ ಜೀವನಮಟ್ಟವನ್ನು ಎತ್ತರಿಸುವ ಮತ್ತು ಮೂಲ ಸೌಕರ್ಯಗಳನ್ನು ಕಲ್ಪಿಸುವ ದಿಸೆಯಲ್ಲಿ ಇನ್ನಷ್ಟು ವ್ಯಾಪಕ ಕ್ರಮಗಳನ್ನು ಕೈಗೊಳ್ಳಬೇಕಿದೆ

ಈ ಪ್ರದೇಶದಲ್ಲಿ ಸರ್ಕಾರವು ಗುಪ್ತಚರ ಜಾಲವನ್ನು ಮತ್ತಷ್ಟು ಬಲಗೊಳಿಸುವ ಅಗತ್ಯವಿದೆ ಎನ್ನುವುದು ಸ್ಪಷ್ಟ. ಸುಕ್ಮಾ ಜಿಲ್ಲೆಯಲ್ಲಿ ನಡೆದ ದಾಳಿಯಲ್ಲಿ 22 ಮಂದಿ ಯೋಧರು ಪ್ರಾಣ ಕಳೆದುಕೊಳ್ಳಲು ಗುಪ್ತಚರ ವಿಭಾಗದ ವೈಫಲ್ಯವೇ ಕಾರಣ ಎಂಬ ಆರೋಪ ಇದೆ. ಮಾವೊವಾದಿಗಳ ವಿರುದ್ಧ ದೊಡ್ಡ ಮಟ್ಟದ ಕಾರ್ಯಾಚರಣೆಯನ್ನು ಕೈಗೊಳ್ಳುವ ಮುನ್ನ ಅರೆಮಿಲಿಟರಿ ಪಡೆಯ ಅಧಿಕಾರಿಗಳು ಹೆಲಿಕಾಪ್ಟರ್‌ಗಳಲ್ಲಿ ತಿರುಗಾಡುತ್ತಿದ್ದುದು ಮಾವೊವಾದಿಗಳಿಗೆ ದಾಳಿಯ ಮುನ್ಸೂಚನೆಯನ್ನು ಒದಗಿಸಿರಬಹುದು ಎಂಬ ವರದಿಗಳಿವೆ. ನಮ್ಮ ಭದ್ರತಾ ಪಡೆಗಳಿಗೆ ಸಿಕ್ಕಿದ ಗುಪ್ತಚರ ಮಾಹಿತಿ ದಾರಿ ತಪ್ಪಿಸುವಂತೆ ಇದ್ದುದು ಕೂಡಾ, ಮಾವೊವಾದಿಗಳ ಜಾಲದ ಮಧ್ಯೆ ಯೋಧರು ಸಿಲುಕಿ ಬೀಳಲು ಕಾರಣವಾಗಿರಬೇಕು ಎಂದು ಶಂಕಿಸಲಾಗಿದೆ. ಸಶಸ್ತ್ರ ಪಡೆಗಳ ಜೊತೆಗೆ ನಕ್ಸಲೀಯರು ಸತತ ಐದು ಗಂಟೆಗಳ ಕಾಲ ಗುಂಡಿನ ಚಕಮಕಿ ನಡೆಸಿದ್ದರು. ಈ ಸಂದರ್ಭದಲ್ಲಿ ಇನ್ನಷ್ಟು ಅರೆಮಿಲಿಟರಿ ಪಡೆಗಳನ್ನು ಸ್ಥಳಕ್ಕೆ ಕಳುಹಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಆದಿವಾಸಿ ಪ್ರದೇಶಗಳಲ್ಲಿ ಜನರ ಜೀವನಮಟ್ಟವನ್ನು ಎತ್ತರಿಸುವ ಮತ್ತು ಮೂಲ ಸೌಕರ್ಯಗಳನ್ನು ಕಲ್ಪಿಸುವ ದಿಸೆಯಲ್ಲಿ ಛತ್ತೀಸಗಡ ಸರ್ಕಾರ ಇನ್ನಷ್ಟು ವ್ಯಾಪಕ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ಆದಿವಾಸಿಗಳಲ್ಲಿ ಸರ್ಕಾರದ ಯೋಜನೆಗಳ ಬಗ್ಗೆ ವಿಶ್ವಾಸ ಮೂಡಿಸುವ ಕೆಲಸವನ್ನು ಅಧಿಕಾರಿಗಳು ಹೆಚ್ಚು ಶ್ರಮಪಟ್ಟು ಮಾಡಬೇಕಿದೆ. ಹಾಗಾದರೆ ಮಾತ್ರ ಮಾವೊವಾದಿಗಳ ಬಲ ಕುಂದಿಸಲು ಸಾಧ್ಯವಾಗಬಹುದು. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲದ, ಹಿಂಸೆಯ ಮೂಲಕವೇ ಮಾತನಾಡಲು ಯತ್ನಿಸುವ ಮಾವೊವಾದಿಗಳನ್ನು ಉಕ್ಕಿನ ಮುಷ್ಟಿಯಿಂದ ನಿಯಂತ್ರಿಸಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ನಕ್ಸಲರ ಬಂದೂಕಿನ ಮೊರೆತಕ್ಕೆ ಭದ್ರತಾ ಪಡೆಗಳ ಮೂಲಕ ಉತ್ತರ ಕೊಡುವುದರ ಜೊತೆಯಲ್ಲೇ, ನಕ್ಸಲ್‌ಪೀಡಿತ ಪ್ರದೇಶಗಳ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿರುವುದೂ ಅಗತ್ಯವಾಗಿ ಆಗಬೇಕಿರುವ ಕೆಲಸ.

ದಿನದ ಟ್ವೀಟ್



ಲಸಿಕೆಗೆ ಅರ್ಹರಾಗಲಿ

ಬಹಳಷ್ಟು ಯುವಜನರು ದೇಶದಾದ್ಯಂತ ಮನೆಗಳಲ್ಲಿ ಹಿರಿಯರ ಆರೈಕೆ ಕೆಲಸದಲ್ಲಿ ತೊಡಗಿದ್ದಾರೆ. 45ಕ್ಕಿಂತ ಕಡಿಮೆ ವಯಸ್ಸಿನವರಾದ ಅವರು ಲಸಿಕೆಗೆ ಅರ್ಹರಾಗಿಲ್ಲ. ಆರೋಗ್ಯ ಕಾರ್ಯಕರ್ತರು ಎಂದು ಅವರನ್ನು ಅಧಿಕೃತವಾಗಿ ವರ್ಗೀಕರಿಸಿಲ್ಲ. ರೋಗಿಗಳ ಆರೋಗ್ಯ ಕಾಪಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾ ತಮ್ಮನ್ನು ಅಪಾಯಕ್ಕೆ ಒಡ್ಡಿಕೊಳ್ಳುವ ಈ ಸಮರ್ಪಿತ ಮನೋಭಾವದ ಯುವ ಕಾರ್ಯಕರ್ತರನ್ನೂ ಲಸಿಕೆ ಪಡೆಯಲು ಅರ್ಹರನ್ನಾಗಿಸಬೇಕು.

ರಜನಿ ಸುರೇಂದ್ರ ಭಟ್, ಶ್ವಾಸಕೋಶ ತಜ್ಞೆ

25 ವರ್ಷಗಳ ಹಿಂದೆ

ಭಾನುವಾರ, 7-4-1996

- **ಕೇಂದ್ರ ಮಂತ್ರಿ, ರಾಜ್ಯದ 4 ಸಚಿವರು ಸೇರಿ ಕಣದಲ್ಲಿ 978 ಸ್ಪರ್ಧಿಗಳು**

ಬೆಂಗಳೂರು, ಏ. 6– ಕೇಂದ್ರ ಸಚಿವ ಎಂ.ವಿ.ಚಂದ್ರಶೇಖರ ಮೂರ್ತಿ, ಹಿರಿಯ ಮುಖಂಡರುಗಳಾದ ಎಸ್. ಮಲ್ಲಿಕಾರ್ಜುನಯ್ಯ, ಬಿ.ಶಂಕರಾನಂದ, ಜನಾರ್ದನ ಪೂಜಾರಿ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ಎಸ್. ಬಂಗಾರಪ್ಪ, ಆಸ್ಕರ್ ಫರ್ನಾಂಡಿಸ್ ಹಾಗೂ ರಾಜ್ಯದ ನಾಲ್ವರು ಸಚಿವರೂ ಸೇರಿದಂತೆ ಒಟ್ಟು 978 ಅಭ್ಯರ್ಥಿಗಳು ಲೋಕಸಭೆಯ 28 ಸ್ಥಾನಗಳ ಸ್ಪರ್ಧಿಗಳಾಗಿ ಕಣದಲ್ಲಿ ಉಳಿದಿದ್ದಾರೆ.

ಏ. 27 ಮತ್ತು ಮೇ 2ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಬೆಳಗಾವಿ ಕ್ಷೇತ್ರದಲ್ಲಿ 456 ಅಭ್ಯರ್ಥಿಗಳಿರುವುದರಿಂದ ಚುನಾವಣಾ ಚಿಹ್ನೆಯನ್ನು ವಿತರಣೆ ಮಾಡುವುದೇ ದುಸ್ತರವಾಗಿರುವ ಹಿನ್ನೆಲೆಯಲ್ಲಿ ಅಲ್ಲಿಯ ಚುನಾವಣಾ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಮಾನ್ಯತೆ ಪಡೆದಿರುವ ಪಕ್ಷಗಳ ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದವರಿಗೆ ಹಂಚುವುದಕ್ಕೆ ಚಿಹ್ನೆ ಕೊರತೆಯಾಗಿರುವುದೇ ಈ ಪ್ರಕ್ರಿಯೆ ಸ್ಥಗಿತಗೊಳ್ಳಲು ಕಾರಣ ಎಂದು ಅಧಿಕೃತ ಮೂಲಗಳು ವಿವರಿಸಿವೆ.

- **ರಾಷ್ಟ್ರಪತಿ ಕ್ಷಮಿಸಿದರೆ ಶರಣು– ವೀರಪ್ಪನ್**

ಮದ್ರಾಸ್, ಏ. 6 (ಪಿಟಿಐ)– ಕುಖ್ಯಾತ ದಂತಚೋರ ವೀರಪ್ಪನ್, ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾ ಅವರು ‘ಸಂಪೂರ್ಣ ಕ್ಷಮಾದಾನ’ದ ಅಭಯ ನೀಡಿದಲ್ಲಿ ತಾನು ಶರಣಾಗಲು ಸಿದ್ಧನಿರುವುದಾಗಿ ಘೋಷಿಸಿದ್ದಾನೆ.

ವೀರಪ್ಪನ್ ತಮಿಳು ವಾರಪತ್ರಿಕೆ ‘ನಕ್ಕೀರನ್’ಗೆ ವಿಡಿಯೊ ಸಂದರ್ಶನ ನೀಡಿದ್ದು, ಸಂದರ್ಶನವನ್ನು ಖಾಸಗಿ ಉಪಗ್ರಹ ಚಾನೆಲ್ ‘ಸನ್’ ಟಿ.ವಿ ನಾಳೆ ರಾತ್ರಿ 9 ಗಂಟೆಗೆ ಪ್ರಸಾರ ಮಾಡಲಿದೆ. ಈ ಸಂದರ್ಶನ ಧಾರಾವಾಹಿ ರೂಪದಲ್ಲಿ 9 ವಾರಗಳ ಕಾಲ ಪ್ರಸಾರಗೊಳ್ಳಲಿದೆ.

50 ವರ್ಷಗಳ ಹಿಂದೆ

ಬುಧವಾರ, 7-4-1971

- **ಸಿಲ್ಹೆಟ್ ವಿಮುಕ್ತ**

ಢಾಕಾ, ಏ. 6– ಎರಡು ದಿನಗಳ ಉಗ್ರ ಕಾಳಗದ ನಂತರ ಬಾಂಗ್ಲಾದೇಶದ ‘ಮುಕ್ತಿ ಫೌಜ್’ ಇಂದು ಸಿಲ್ಹೆಟ್ ನಗರವನ್ನು ಸ್ವಾಧೀನಪಡಿಸಿಕೊಂಡು ಪಾಕಿಸ್ತಾನಿ ಪಡೆಗಳನ್ನು ಕೆಲವು ಕಿಲೊಮೀಟರುಗಳ ದೂರದ ಖದೀಂ ನಗರದಲ್ಲಿರುವ ಶಿಬಿರಗಳಿಗೆ ಅಟ್ಟಿತೆಂದು ಗಡಿಯಾಚೆಯಿಂದ ವರದಿ ಬಂದಿದೆ.

ಸೈನ್ಯವು ಶಿಬಿರಗಳಿಗೆ ಹಿಮ್ಮೆಟ್ಟಿದ ನಂತರ ಪಾಕಿಸ್ತಾನಿ ವಿಮಾನಗಳು ನಗರದ ಮೇಲೆ ಹಾಗೂ ವಿಮೋಚನಾ ಪಡೆ ವಶಪಡಿಸಿಕೊಂಡ ಪಕ್ಕದ ಸಲೂಶಿಕಾರ್ ವಿಮಾನ ನಿಲ್ದಾಣದ ಮೇಲೆ ಬಾಂಬ್ ದಾಳಿ ನಡೆಸಿದವೆಂದು ವರದಿಯಾಗಿದೆ.

- **ಗುಜರಾತಿಗೆ ಮತ್ತೆ ಸಂಸ್ಥಾ ಕಾಂಗ್ರೆಸ್ ಸರ್ಕಾರ– ಇಂದು ಅಧಿಕಾರಕ್ಕೆ**

ಅಹಮದಾಬಾದ್, ಏ. 6– ಗುಜರಾತ್‌ನಲ್ಲಿ ಹೊಸ ಸರ್ಕಾರ ರಚಿಸಲು ರಾಜ್ಯಪಾಲ ಶ್ರೀಮನ್ ನಾರಾಯಣ್ ಅವರು ಇಂದು ಉಸ್ತುವಾರಿ ಸರ್ಕಾರದ ಮುಖ್ಯಮಂತ್ರಿ ಹಿತೇಂದ್ರ ದೇಸಾಯಿ ಅವರನ್ನು ಆಹ್ವಾನಿಸಿದರು.

ಹೊಸ ಸಂಪುಟವು ಬುಧವಾರ ರಾಜಭವನದಲ್ಲಿ ಪ್ರಮಾಣವಚನ ಸ್ವೀಕರಿಸುತ್ತದೆ.

‘ಎರಡೂ ಕಾಂಗ್ರೆಸ್ ಪಕ್ಷಗಳ ಪುನರೇಕೀಕರಣ’ದ ಹೆಸರಿನಲ್ಲಿ ತನ್ನ ಹಿಂದಿನ ಅನೇಕ ಶಾಸಕರನ್ನು ಮತ್ತೆ ತನ್ನ ಮಡಿಲಿಗೆ ತಂದುಕೊಳ್ಳುವುದರಲ್ಲಿ ಸಂಸ್ಥಾ ಕಾಂಗ್ರೆಸ್ ಇಂದು ಯಶಸ್ವಿಯಾಯಿತು.

ಭ್ರಮೆ ಚಿಮ್ಮಿಸುವ ಯೋಜನೆಗಳು ಸಾಕು; ಜಲಸುರಕ್ಷತೆ ಸಾಧಿಸುವ ಮಾದರಿಗಳು ಬೇಕು

ನೀರ ನೆಮ್ಮದಿಯೆಂಬ ಮೃಗಜಲ!



ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಕಳೆದ ಆಗಸ್ಟ್‌ನಲ್ಲಷ್ಟೇ ನೆರೆಯಿಂದ ತತ್ತರಿಸಿದ್ದ ಗದಗ ಜಿಲ್ಲೆಯ ಬೆಣ್ಣಿಹಳ್ಳದ ಚಿತ್ರಗಳ ನೆನಪಿನಲ್ಲಿ, ಈಗೊಮ್ಮೆ ಆ ಪ್ರದೇಶದಲ್ಲಿ ಸಂಚರಿಸಿದರೆ ಆಘಾತವಾಗುತ್ತದೆ. ಒಂಟಿಮರದ ನೆರಳೂ ಅಪರೂಪವಾಗಿರುವ ಒಣಭೂಮಿಯ ಹೊಳೆ-ಹಳ್ಳಗಳೆಲ್ಲ ಬತ್ತಿ ಆರು ತಿಂಗಳೇ ಸಂದಿವೆ. ಕೆರೆಗಳಲ್ಲಿ ಹೂಳುತುಂಬಿ ನೀರು ಆರುತ್ತಿದೆ. ಬೇಸಿಗೆಯಲ್ಲಿನ್ನು ಮನೆಬಳಕೆಯ ಬಿಂದಿಗೆ ನೀರು ತರಲೂ ಮಹಿಳೆಯರು ಶ್ರಮಪಡಬೇಕು. ಆರು ತಿಂಗಳ ಅಂತರದಲ್ಲಿ ಕಾಡುವ ನೆರೆ ಹಾಗೂ ಬರಗಳ ನಡುವಿನ ಸೆಣಸಾಟವಾಗಿದೆ ಇಲ್ಲಿನ ಜನಸಾಮಾನ್ಯರ ಬದುಕು!

ಎಂಬತ್ತರ ದಶಕದಂಚಿನ ಮಾತು. ಹಿಂದಿನ ವರ್ಷಗಳ ಬರದಿಂದ ತತ್ತರಿಸಿದ್ದ ನಾಡಿನ ಜನ, ದೇಶಕ್ಕೇ ಮಾದರಿಯೆಂಬಂತೆ ಆಗಷ್ಟೇ ಜಾರಿಯಾಗಿದ್ದ ಪಂಚಾಯಿತಿ ವ್ಯವಸ್ಥೆಯಿಂದ ಹೊಸ ಚೈತನ್ಯ ಪಡೆಯಲು ಮುಂದಾಗಿದ್ದ ಕಾಲವದು. ಗ್ರಾಮೀಣಾಭಿವೃದ್ಧಿ ಸಚಿವ ನಜೀರ್‌ಸಾಬರು ತಂದ ಸಮುದಾಯ ಕೊಳವೆಬಾವಿಗಳು, ತೊಟ್ಟು ನೀರಿಗೂ ತತ್ವಾರವಾಗಿದ್ದ ಒಳನಾಡಿನ ಹಳ್ಳಿಗರಿಗೆ ಸಂಜೀವಿನಿಯಂತೆ ತೋರಿದ್ದವು. ಹಸಿರುಕ್ರಾಂತಿಯ ತಂತ್ರಜ್ಞಾನಗಳು ಕೃಷಿಭೂಮಿಯನ್ನು ಬಂಜರಾಗಿಸುತ್ತಿದ್ದ ಅರಿವಿನ ಪ್ರಸರಣದಿಂದಾಗಿ, ಅನೇಕ ನವ ಪದವೀಧರರು ಹಳ್ಳಿಗಳಿಗೆ ಹಿಂತಿರುಗಿ ಸಾವಯವ ಕೃಷಿ ಕೈಗೊಳ್ಳಲೂ ಕನಸತೊಡಗಿದ್ದರು. ಆಗಷ್ಟೇ ಕನ್ನಡದಲ್ಲೂ ಪ್ರಕಟವಾಗಿದ್ದ ಜಪಾನಿ ಸಂತ ಫುಕುವೊಕಾರ ‘ಒಂದು ಹುಲ್ಲಿನ ಕ್ರಾಂತಿ’ಯಿಂದ ಪ್ರೇರಿತರಾದ ಅನೇಕ ರೈತರು, ತಮ್ಮಲ್ಲೇ ಸಂಘಟಿತರಾಗಿ ಸಹಜಕೃಷಿಯ ದೇಸಿಮಾರ್ಗಗಳನ್ನು ಅನ್ವೇಷಿಸತೊಡಗಿದ್ದರು.

ಇಂಥ ಸಂಕ್ರಮಣದಲ್ಲಿ, ಗದುಗಿನ ಭರಮಗೌಡರಂಥ ಸಾವಯವ ಕೃಷಿಕರ ಪ್ರೇರಣೆಯೊಂದಿಗೆ ಉತ್ತರ ಕರ್ನಾಟಕದಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳುತ್ತಿದ್ದ ನಮ್ಮಂಥ ಯುವತಲೆಮಾರಿಗೆ, ಮುಂದಿನ ದಶಕಗಳಲ್ಲಿ ರಾಜ್ಯದಲ್ಲಿ ಪರಿಸರಸ್ನೇಹಿ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿಯ ಹೊಸ ಶಕೆ ಆರಂಭವಾಗಲಿದೆ ಎಂಬುದರಲ್ಲಿ ಸಂಶಯವೇ ಇರಲಿಲ್ಲ!

ಆದರೆ, ಒಳನಾಡಿನಲ್ಲೀಗ ಆಗುತ್ತಿರುವುದಾದರೂ ಏನು? ಹಸಿರು ಕವಚವೆಲ್ಲ ಮಾಯವಾಗಿ, ಕೃಷಿಭೂಮಿಯ ತೇವಾಂಶ ಮತ್ತಷ್ಟು ಕುಸಿದಿದೆ. ಕೃಷಿಅರಣ್ಯ ತತ್ವ ಮಾಯವಾಗಿ, ಹೊಳೆಬದಿಯ ಮರಗಿಡಗಳ ಸಾಲು ಕರಗಿ, ನದಿಯಂಚು ಅತಿಕ್ರಮಣವಾಗಿ, ಸಣ್ಣ ಮಳೆಗೂ ಪ್ರವಾಹ ಉಕ್ಕುತ್ತಿದೆ. ಹೂಳು ತುಂಬಿದ ಹಾಗೂ ಏರಿ ಒಡೆದ ಕೆರೆಗಳಲ್ಲಿ ನೀರು ನಿಲ್ಲದಾಗುತ್ತಿದೆ. ಕುಡಿಯುವ ನೀರು ಹಾಗೂ ಮಿತಿಯುಳ್ಳ ನೀರಾವರಿಗೆ ಮಾತ್ರ ಬಳಕೆಯಾಗಬೇಕಿದ್ದ ಕೊಳವೆಬಾವಿಗಳು ಖಾಸಗಿಯವರ ದಾಹಕ್ಕೆ ಬಲಿಯಾಗಿ, ಸಾವಿರಾರು ಅಡಿ ಆಳಕ್ಕಿಳಿದರೂ ನೀರು ದೊರಕದಷ್ಟು ಅಂತರ್ಜಲ ಕುಸಿದಿದೆ! ಇಷ್ಟಿದ್ದರೂ, ಹಿಂಗಾರಿನಲ್ಲೂ ಭತ್ತ, ಕಬ್ಬು ಬೆಳೆಯುವ ಅಥವಾ ಒಣಭೂಮಿಯಲ್ಲೂ ನೀರು ಬೇಡುವ ಅಡಿಕೆಯಂಥ ಆರ್ಥಿಕ ಬೆಳೆಗೆ ಕೈಹಾಕುವ ದೊಡ್ಡ ರೈತರ ನಡವಳಿಕೆಯಲ್ಲಿ ಬದಲಾವಣೆ ತೋರುತ್ತಿಲ್ಲ. ಬಹುಪಾಲು ಬಾವಿ-ಕೆರೆಗಳಿಗೆ ಊರು-ನಗರಗಳ ಕೊಳಚೆ ಸೇರುತ್ತಿರುವುದರಿಂದ, ಕುಡಿಯುವ ನೀರಿನ ಪರದಾಟವಂತೂ ನಿಲ್ಲುತ್ತಲೇ ಇಲ್ಲ.

ಅಂದರೆ, ಕೃಷಿ ಹಾಗೂ ಮನೆಬಳಕೆಯ ಕನಿಷ್ಠ ನೀರನ್ನೂ ಸರ್ಕಾರವೇ ಪೂರೈಸಬೇಕಾದ ಅನಿವಾರ್ಯಕ್ಕೆ ಒಳನಾಡು ತಲುಪಿದೆ. ಕಾಡು, ಗೋಮಾಳ, ಹೊಳೆ, ಕೆರೆ-ಎಲ್ಲ ಬಗೆಯ ನೆಲ-ಜಲಮೂಲಗಳನ್ನು ಅನಾದಿಯಿಂದ ನಿರ್ವಹಿಸುತ್ತಿದ್ದ ಹಳ್ಳಿಗರ ಹಕ್ಕನ್ನು ಕಸಿದು, ಅವರ ಸ್ವಾವಲಂಬಿತನವನ್ನೇ ಮುರಿಯಲು ಮೊದಲು ಆರಂಭಿಸಿದ್ದು ವಸಾಹತುಶಾಹಿ ಆಡಳಿತ. ಆದರೆ, ಕ್ಷಮತೆ ಹಾಗೂ ಪಾರದರ್ಶಕತೆಯೇ ಇಲ್ಲದ ತನ್ನ ಪಾದಕ್ಕೇ ಎಲ್ಲರನ್ನೂ ಕೆಡವಿ, ಹಳ್ಳಿಗರ ಸ್ವಾಯತ್ತತೆಯನ್ನೇ ಹರಣ ಮಾಡುವ ಕಾರ್ಯ ಪೂರ್ತಿಗೊಳಿಸುತ್ತಿರುವುದು ಮಾತ್ರ ಅಧಿಕಾರ ರಾಜಕಾರಣದಲ್ಲಿ ಮಿಂದೇಳುತ್ತಿರುವ ನಮ್ಮದೇ ಚುನಾಯಿತ ಸರ್ಕಾರಗಳು!

ನೆಲ-ಜಲವನ್ನು ಹಿತಮಿತವಾಗಿ ಬಳಸಿ, ಕೃಷಿಪರಿಸರ ಹಾಗೂ ಗ್ರಾಮೀಣ ಬದುಕನ್ನು ಹಸನಾಗಿಸಲು ಶ್ರಮಿಸುತ್ತಿರುವ ಅಸಂಖ್ಯ ಪ್ರಗತಿಪರ ಕೃಷಿಕರು ಹಾಗೂ ಸಮುದಾಯಾಧಾರಿತ ಸಂಘ-ಸಂಸ್ಥೆಗಳ ಯಶೋಗಾಥೆಗಳನ್ನು ಈ ಸರ್ಕಾರಿ ಧೋರಣೆಯು ಬಲಿ ತೆಗೆದುಕೊಳ್ಳುತ್ತಿದೆ.

ನೀರು ಒದಗಿಸುವ ದಾರಿಗಳನ್ನು ಸರ್ಕಾರ ಶೋಧಿಸುತ್ತಿಲ್ಲವೆಂದೇನೂ ಅಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಜಲಮೂಲ ರಕ್ಷಿಸುವ ಹಾಗೂ ಕುಡಿಯುವ ನೀರು ಒದಗಿಸುವ ಅನೇಕ ಯೋಜನೆಗಳಿವೆ. ನಗರಾಭಿವೃದ್ಧಿ ಇಲಾಖೆಯು ಪಟ್ಟಣಗಳ ತ್ಯಾಜ್ಯ ಸಂಸ್ಕರಿಸಿ, ಜಲಮೂಲಗಳ ಶುದ್ಧತೆ ಕಾಪಾಡಲು ಪ್ರಯತ್ನಿಸುತ್ತಿದೆ. ಕೃಷಿಹೊಂಡ, ಹನಿ ನೀರಾವರಿ ಯೋಜನೆಗಳು ಕೃಷಿ ಹಾಗೂ ತೋಟಗಾರಿಕಾ ಇಲಾಖೆಗಳಲ್ಲಿವೆ. ನರೇಗಾ ಯೋಜನೆಯಾದರೋ ನೈಸರ್ಗಿಕ ಸಂಪನ್ಮೂಲಗಳನ್ನು ಬೆಳೆಸಿಯೇ ಜೀವನೋಪಾಯ ಕಲ್ಪಿಸುವ ಉದ್ದೇಶದ್ದು. ಕೃಷಿಅರಣ್ಯ ತತ್ವಾಧಾರಿತ ಮಾದರಿ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು, ವಿಶ್ವಬ್ಯಾಂಕ್ ಅನುದಾನದೊಂದಿಗೆ ಜಲಾನಯನ ಇಲಾಖೆಯು ಹಲವು ಜಿಲ್ಲೆಗಳಲ್ಲಿ ವಿವಿಧ ಹಂತಗಳಲ್ಲಿ ಹಮ್ಮಿಕೊಳ್ಳುತ್ತಿದೆ. ಜಿಲ್ಲಾ ಪಂಚಾಯಿತಿಯ ಸಾಮಾಜಿಕ ಅರಣ್ಯ ವಿಭಾಗವು ಕಾಡಿನಲ್ಲಿ ಮಳೆನೀರು ಇಂಗಿಸಿ ಊರಿನ ಅಂತರ್ಜಲ ಹೆಚ್ಚಿಸುವ ಇಂಗುಗುಂಡಿಗಳನ್ನು ತೋಡುತ್ತಿದೆ.

2014ರಲ್ಲಿ ರಚಿತವಾದ ‘ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ’ವು ಸಣ್ಣ ನೀರಾವರಿ ಇಲಾಖೆಯ ಮೂಲಕ ರಾಜ್ಯದ ಕೆರೆಗಳನ್ನೆಲ್ಲ ಸುಸ್ಥಿತಿಗೆ ತರಲು ಚಿಂತಿಸುತ್ತಿದೆ. ಕೆರೆ ನೀರು ಬಳಕೆದಾರರ ಸಂಘಗಳನ್ನು ಸ್ಥಾಪಿಸುವ ಹಾಗೂ ಕೊಳವೆಬಾವಿಗಳಿಗೆ ಜಲಮರುಪೂರಣ ಮಾಡುವ ಯೋಜನೆಗಳೂ ಜಿಲ್ಲಾ ಪಂಚಾಯಿತಿಯಡಿ ಬಂದಾಗಿವೆ. ಸಾವಯವ ಹಾಗೂ ಶೂನ್ಯ ಬಂಡವಾಳದ ಕೃಷಿಗೂ ಯೋಜನೆಗಳು ಜಾರಿಯಾಗಿವೆ. ಆದರೆ, ಮೂರು ದಶಕಗಳಿಂದ ಜಾರಿಯಾಗುತ್ತಲೇ ಇರುವ ಈ ಬಗೆಯ ಯೋಜನೆಗಳೆಲ್ಲದರ ಫಲಶ್ರುತಿಯಾದರೂ ಏನು? ದಿಕ್ಕುತಪ್ಪಿದ ಆಡಳಿತ ನೀತಿ ಹಾಗೂ ಅಧಿಕಾರಶಾಹಿಗೆ, ಅವೈಜ್ಞಾನಿಕ ಕಾಮಗಾರಿ ಹಾಗೂ ಭ್ರಷ್ಟಾಚಾರಗಳೂ ಜೊತೆಯಾಗಿ, ಯೋಜನೆಗಳಲ್ಲಿ ಜನಸಹಭಾಗಿತ್ವ ಇಲ್ಲದಾಗಿ, ಆಶಯಗಳೆಲ್ಲ ಸರ್ಕಾರಿ ದಾಖಲೆಗಳಲ್ಲೇ ಉಳಿದವಲ್ಲ! ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ, ಚಿತ್ರದುರ್ಗ, ಗದಗ, ಕೊಪ್ಪಳ, ರಾಯಚೂರು- ಒಳನಾಡಿನ ಎಲ್ಲಿ ನೋಡಿದರೂ ನೀರಿನ ಲಭ್ಯತೆ ಮಾತ್ರ ಮರೀಚಿಕೆಯಾಗುತ್ತಿದೆ.



ಪಾರಂಪರಿಕ ಜಲಸುರಕ್ಷತೆ ವಿಧಾನಗಳನ್ನೆಲ್ಲ ಪ್ರಜ್ಞಾಪೂರ್ವಕವಾಗಿ ಹೊಸಕಿಹಾಕಿ, ಸರ್ಕಾರವೇ ಸೃಷ್ಟಿಸುತ್ತಿರುವ ಈ ಅಪಾಯಕಾರಿ ಬೆಳವಣಿಗೆಗಳ ಲಾಭ ಪಡೆಯುತ್ತಿರುವುದು ಮಾತ್ರ ಸರ್ಕಾರಿ ಪೋಷಿತ ಸಿವಿಲ್ ಕಾಮಗಾರಿ ಉದ್ಯಮಲೋಕ. ಎಲ್ಲೆಂದರಲ್ಲಿ ಒಡ್ಡು-ಜಲಾಶಯ ನಿರ್ಮಿಸಿ, ಎಲ್ಲೆಡೆ ಕಾಲುವೆ ಹಾಗೂ ಕೊಳವೆಗಳಲ್ಲಿ ನೀರು ಹರಿಸುವ ಭ್ರಮೆಯನ್ನು ಬೃಹತ್ ನೀರಾವರಿ ಇಲಾಖೆ ಹಾಗೂ ಅದರ ಜಲನಿಗಮಗಳು ಸೃಷ್ಟಿಸುತ್ತಿವೆ. ಈ ಕಾಮಗಾರಿ ಮೋಹದ ವ್ಯೂಹಕ್ಕೆ ಸರ್ಕಾರವೂ ಕೈಜೋಡಿಸುತ್ತಿದೆ ಎನ್ನದೆ ವಿಧಿಯಿಲ್ಲ. ಇಲ್ಲವೆಂದರೆ, ಈಗಿರುವ ಹಲವು ಕಾಲುವೆಗಳಲ್ಲೇ ಇನ್ನೂ ನೀರು ಹರಿಯದಿರುವಾಗ, ಹೊಸ ಪ್ರಸ್ತಾಪಗಳಿಗೆ ಸರ್ಕಾರ ಒಪ್ಪುತ್ತಿತ್ತೇ? ಕೈಗೊಂಡ ನೀರಾವರಿ ಯೋಜನೆಗಳೇ ಅಧ್ವಾನವಾಗಿರುವಾಗ, ಕುಡಿಯುವ ನೀರಿನ ಹೆಸರಿನಲ್ಲಿ ಪರಿಸರ ಕಾನೂನುಗಳಿಗೆಲ್ಲ ಮಣ್ಣೆರಚಿ ಅವೈಜ್ಞಾನಿಕವಾಗಿ ಎತ್ತಿನಹೊಳೆಯಂಥ ಯೋಜನೆ ಕೈಗೆತ್ತಿಕೊಳ್ಳುತ್ತಿತ್ತೇ?


ಇದೀಗ, ಸಹ್ಯಾದ್ರಿ ತಪ್ಪಲಿನಲ್ಲಿ ಪಶ್ಚಿಮಕ್ಕೆ ಹರಿಯುವ ಬೇಡ್ತಿ ನದಿಯಿಂದ ಗದಗ- ರಾಯಚೂರಿನೆಡೆಗೆ ನೀರು ಒಯ್ಯುವ ಬೇಡ್ತಿ- ವರದಾ ನದಿ ಜೋಡಣೆ ಯೋಜನೆ ಪ್ರಸ್ತಾಪವಾಗಿದೆ. ಅಕ್ಷರಶಃ ಹೆಚ್ಚುವರಿ ನೀರಿಲ್ಲದ ಆ ನದಿಯಿಂದ ನೀರೊದಗಿಸುವ ಭ್ರಮೆ ಚಿಮ್ಮಿಸುವ ಇಂಥ ಯೋಜನೆ ಏಕೆ ಬೇಕು? ನಾಡನ್ನು ಬೆಂಗಾಡಾಗಿಸುವ ಈ ಅರಾಜಕತೆ ಕೊನೆಗೊಳ್ಳಲೇಬೇಕಿದೆ.

ಮಳೆನೀರು ಸಂಗ್ರಹ, ಜನಸಹಭಾಗಿತ್ವದ ನಿರ್ವಹಣೆ ಹಾಗೂ ವೈಜ್ಞಾನಿಕ ಬಳಕೆಯ ಮೂಲಕ ಜಲಸುರಕ್ಷತೆ ಸಾಧಿಸುವ ಮಾದರಿಗಳು ಮುನ್ನೆಲೆಗೆ ಬರಬೇಕಿದೆ. ಈ ದಿಸೆಯಲ್ಲಿ ಸಮಗ್ರ ಪರಿಹಾರ ನೀಡಬಲ್ಲ ಮಾರ್ಗಗಳು ‘ಕರ್ನಾಟಕ ಜ್ಞಾನ ಆಯೋಗ’ವು ಸರ್ಕಾರಕ್ಕೆ ಸಲ್ಲಿಸಿರುವ ‘ಕರ್ನಾಟಕ ಜಲನೀತಿ- 2019’ರಲ್ಲಿವೆ. ಅವುಗಳ ಅನುಷ್ಠಾನವಷ್ಟೇ ಬಾಕಿಯಿದೆ.

ಆಹಾರಬೆಳೆಯ ಕಣಜವಾದ ಸಮೃದ್ಧ ಒಳನಾಡಿನ ಜನರ ಮೊಗದಲ್ಲಿ ನೀರನೆಮ್ಮದಿ ಕಾಣುವಂತಾಗಬೇಕು. ಗದಗದ ಬೆಣ್ಣಿಹಳ್ಳದ ನೆರೆ ನೀರನ್ನು, ಪಂಚಾಯಿತಿ ವ್ಯವಸ್ಥೆಯ ಮೂಲಕವೇ ತುಂಗಭದ್ರಾ ಕಣಿವೆಯ ಕೆರೆಗಳಿಗೆ ತುಂಬಿಸುವಂಥ ಸುಸ್ಥಿರ ಮಾರ್ಗಗಳಿಂದ ಅದು ಖಂಡಿತ ಸಾಧ್ಯವಿದೆ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಚೇಂಜ್ ಬೇಕು

• ಮಣ್ಣೆ ರಾಜು

‘ಕೊರೊನಾ ಕಾಟ, ಆದಾಯ ಖೋತಾದಿಂದಾಗಿ ಜೀವನದಲ್ಲಿ ಜುಗುಪ್ಸೆ ಆಗಿದೆ, ಲೈಫ್‌ನಲ್ಲಿ ಚೇಂಜ್ ಇಲ್ಲ...’ ವಿಶ್ವ ವಿಷಾದಿಸಿದ.

‘ಕಾಲ ಬದಲಾಗಿ ಹಣೆಬರಹ ಚೇಂಜ್ ಆಗುತ್ತೆ ಬಿಡು’ ಚಂದ್ರು ಸಮಾಧಾನ ಹೇಳಿದ.

‘ಚೇಂಜ್ ಇಲ್ಲ ಸಾರ್, ಟೀ ಬಿಲ್ ಅನ್ನು ಅಕೌಂಟ್ ಪೇ ಮಾಡಿ...’ ಎಂದು ಹೋಟೆಲ್ ಸಿದ್ಧಪ್ಪ ಟೀ ತಂದಿಟ್ಟ.

‘ಯುಗಾದಿಗೆ ಸಿ.ಎಂ ಚೇಂಜ್ ಆಗ್ತಾರೆ ಅಂತ ರೆಬೆಲ್ ನಾಯಕರು ಹಬ್ಬದ ಆಫರ್ ಕೊಟ್ಟಿದ್ದರಲ್ಲ, ಚೇಂಜ್ ಆಗ್ತಾರಂತಾ?’ ಪರಮ ಬಂದು ಟೀ ಪಾರ್ಟಿಗೆ ಜಾಯಿನ್ ಆದ.

‘ಸಿ.ಎಂ ಚೇಂಜ್ ಮಾಡೋ ಮನಃಸ್ಥಿತಿಯನ್ನ ಚೇಂಜ್ ಮಾಡಿಕೊಳ್ಳಿ, ಹೆಚ್ಚೂಕಮ್ಮಿಯಾದರೆ ಸರ್ಕಾರವೇ ಚೇಂಜ್ ಆಗಿಬಿಡುತ್ತದೆ ಅಂತ ರೆಬೆಲ್‌ಗಳಿಗೆ ವರಿಷ್ಠರು ವಾರ್ನಿಂಗ್ ಕೊಟ್ಟಿದ್ದಾರಂತೆ’ ಗಿರಿ ವರದಿ ನೀಡಿದ.

‘ಯುಗಾದಿಗೆ ಸಿ.ಎಂ ಚೇಂಜ್ ಆಗೋದು ಖಚಿತ ಅಂತ ಟಿ.ವಿ ಜ್ಯೋತಿಷಿ ಎಡೆಬಿಡದೆ ಪಂಚಾಂಗ ಪಠಣ ಮಾಡ್ತಿದ್ದರಲ್ಲಾ...’

‘ಇಂಥಾ ಜ್ಯೋತಿಷಿ ನಂಬಿಕೊಂಡರೆ ಕೆಳಗಿಳಿದಿರುವ ಟಿಆರ್‌ಪಿ ಚೇಂಜ್ ಆಗಲ್ಲ ಅಂತ ಚಾನೆಲ್‌ನವರು ಜ್ಯೋತಿಷಿಯನ್ನೇ ಚೇಂಜ್ ಮಾಡಿದರಂತೆ...’ ಎನ್ನುತ್ತಾ ಸೀನ ಬಂದ.

‘ಚಾನೆಲ್‌ನವರು ಹಳೇ ಸಿ.ಡಿ. ಉಜ್ಜೋದನ್ನ ನಿಲ್ಲಿಸಿ, ಸಿ.ಡಿ. ಸಿನಿಮಾ ಚೇಂಜ್ ಮಾಡದಿದ್ದರೆ ನಾವೂ ಚಾನೆಲ್ ಚೇಂಜ್ ಮಾಡಬೇಕಾಗ್ತದೆ’ ವಿಶ್ವನ ತೀರ್ಮಾನ.

‘ಸರ್ಕಾರದಲ್ಲಿ ಇನ್ನಷ್ಟು ಸಿ.ಡಿ. ಸಿನಿಮಾ ಗಳಿವೆಯಂತೆ. ಯಾವುದಾದರೊಂದು ರಿಲೀಸ್ ಮಾಡಿ ಜನರು, ರೆಬೆಲ್ ನಾಯಕರು ಸಿ.ಡಿ. ಸಿನಿಮಾ ವಿಮರ್ಶೆಯಲ್ಲಿ ಮೈಮರೆಯುವಂತೆ ಮಾಡಿದರೆ ಸರ್ಕಾರ ಇನ್ನಷ್ಟು ಕಾಲ ಸುಭದ್ರ ಅಲ್ವಾ?’ ಸೀನನ ಸಜೆಷನ್.

‘ಸಿ.ಡಿ. ನಂಬಿಕೊಂಡು ಸರ್ಕಾರ ನಡೆಸೋ ಪರಿಸ್ಥಿತಿ ಬರಬಾರದು. ಜನರ ದುಃಸ್ಥಿತಿ ಚೇಂಜ್ ಮಾಡುವತ್ತ ಸರ್ಕಾರದ ವ್ಯವಸ್ಥೆ ಚೇಂಜ್ ಆಗಬೇಕು...’ ಟೀ ಬಿಲ್ ಕೊಟ್ಟ ಸಿದ್ಧಪ್ಪ.

ಸಂಗತ

ಕಂಡಿರಾ... ಜೀವನಶ್ರದ್ಧೆ ಇರುವವರ?

ಆರೋಗ್ಯದ ಬಗೆಗಿನ ಸೂಕ್ತ ನಿರ್ಧಾರಗಳನ್ನು ಆತ್ಮಸಾಕ್ಷಿ ಹಾಗೂ ಜೀವನಶ್ರದ್ಧೆಯಿಂದ ತೆಗೆದುಕೊಳ್ಳಬೇಕಾದ ತುರ್ತಿನಲ್ಲಿ ನಾವಿದ್ದೇವೆ

• ಡಾ. ಕೆ.ಎಸ್.ಪವಿತ್ರ

ಕೋವಿಡ್ ಬಿಕ್ಕಟ್ಟಿನ ನಡುವೆಯೇ ಮತ್ತೊಂದು ವಿಶ್ವ ಆರೋಗ್ಯ ದಿನ (ಏ. 7) ಬಂದಿದೆ. 1948ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಸ್ಥಾಪನೆಯಾದ ನೆನಪಿಗೆಂದು ಈ ದಿನ. ‘ಎಲ್ಲರಿಗೂ ನ್ಯಾಯವನ್ನು ನೀಡುವ, ಆರೋಗ್ಯಕರ ಜಗತ್ತನ್ನು ನಿರ್ಮಿಸೋಣ’ ಎಂಬುದು ಈ ಬಾರಿಯ ಧ್ಯೇಯವಾಕ್ಯ. ಕೋವಿಡ್ ಸೋಂಕಿನ ಸಂಕಷ್ಟ ‘ಕೆಲವರು ಮಾತ್ರ ಜಗತ್ತಿನಲ್ಲಿ ಆರೋಗ್ಯಕರ ಬದುಕು ನಡೆಸಲು, ಆರೋಗ್ಯ ಸೇವೆಗಳನ್ನು ಸುಲಭವಾಗಿ ಪಡೆಯಲು ತಮ್ಮ ಹಿನ್ನೆಲೆಯಿಂದ ಸಾಧ್ಯವಾಗಿದೆ’ ಎಂಬುದನ್ನು ಎತ್ತಿ ತೋರಿಸಿರುವುದೇ ಈ ಧ್ಯೇಯದ ಹಿಂದಿನ ಪ್ರಮುಖ ಆಶಯ.

ನಮ್ಮ ಆಯುಷ್ಯ ‘ಎಷ್ಟು ದೀರ್ಘ’ ಎಂಬುದನ್ನು ನಮ್ಮ ವಂಶವಾಹಿಗಳು ಶೇ 10ರಷ್ಟು ಮಾತ್ರ ನಿರ್ಧರಿಸುತ್ತವೆ ಎಂಬುದನ್ನು ಅಧ್ಯಯನಗಳು ದೃಢಪಡಿಸಿವೆ. ಉಳಿದ ಶೇ 90ರಷ್ಟನ್ನು ನಿರ್ಧರಿಸುವುದು ನಮ್ಮ ಜೀವನಶೈಲಿಯೇ. ಯಾವುದು ನಮ್ಮನ್ನು ಆರೋಗ್ಯವಾಗಿ ಇರಿಸುತ್ತದೆ ಎಂಬ ಬಗ್ಗೆ ನಮಗಿರುವ ಗೊಂದಲ ಈ ಕೋವಿಡ್ ಸಮಯದಲ್ಲಂತೂ ಭಯಂಕರವಾಗಿಬಿಟ್ಟಿದೆ! ಯಾವುದನ್ನು ತಿನ್ನಬೇಕು, ಯಾವುದನ್ನು ತಿನ್ನಬಾರದು, ವ್ಯಾಕ್ಸಿನ್ ತೆಗೆದುಕೊಳ್ಳಬೇಕೆ, ಬೇಡವೆ, ಜ್ವರ ಬಂದರೆ ಡಾಕ್ಟರ್ ಹತ್ತಿರ ಹೋಗಿ ಚಿಕಿತ್ಸೆ ಪಡೆಯುವುದು ಒಳ್ಳೆಯದೇ ಅಥವಾ ಮನೆಯಲ್ಲೇ ಇದ್ದು ಕಾದು ನೋಡುವುದೆ ಸೂಕ್ತವೇ ಇತ್ಯಾದಿ. ಆರೋಗ್ಯದ ಬಗೆಗಿನ ಜನರ ಗೊಂದಲ ಆಡಳಿತ ವ್ಯವಸ್ಥೆಯನ್ನೂ ಬಿಟ್ಟಿಲ್ಲ ಎನ್ನುವುದು ಸ್ಪಷ್ಟವಾಗಿಯೇ ಇದೆ. ಸಾಮಾಜಿಕವಾಗಿ ಬೆರೆಯುವ ಬಗೆಗಿನ ನಿರ್ಧಾರಗಳನ್ನು ಆಡಳಿತ ವ್ಯವಸ್ಥೆ ದಿನಕ್ಕೊಮ್ಮೆ ಬದಲು ಮಾಡುತ್ತಿರುವುದೇ ಈ ಗೊಂದಲದಿಂದ.

ಆರೋಗ್ಯವೆಂದರೆ ‘ದೀರ್ಘಾಯುಷ್ಯ’ ಎಂಬ ನಮ್ಮ ಹಿಂದಿನ ಕಲ್ಪನೆ ನಿಧಾನವಾಗಿ ಆರೋಗ್ಯ ಎಂದರೆ ಜೀವನದ ಗುಣಮಟ್ಟ ಎಂಬುದರೆಡೆಗೆ ತಿರುಗುತ್ತಿದೆ. ನಮ್ಮ ಜೀವನಶೈಲಿ ಸರಿಯಾಗಿದ್ದೇ ಆದರೆ, ಕ್ಯಾನ್ಸರ್, ಮಧುಮೇಹ, ದೀರ್ಘಕಾಲಿಕ ಕಾಯಿಲೆಗಳು, ಹೃದಯ ಸಂಬಂಧಿ ಕಾಯಿಲೆಗಳಿರದ ಆರಾಮದ ಜೀವನ ನಮ್ಮದಾಗಬಲ್ಲದು. ಆದರೆ ಈ ಜೀವನಶೈಲಿ ಯಾವುದು ಎಂಬುದನ್ನು ಕಂಡು ಹಿಡಿಯುವುದು, ಅದನ್ನು ಅಳವಡಿಸಿಕೊಳ್ಳುವುದು ಹೇಗೆ?!

ನೂರು ವರ್ಷಕ್ಕೂ ಮೀರಿ ಜೀವಿಸಿರುವ ಜನರ ‘ಗುಂಪು’ಗಳು ಅಲ್ಲಲ್ಲಿ ಜಗತ್ತಿನಲ್ಲಿ ಕಾಣುತ್ತವೆ. ಇಟಲಿಯ ಕರಾವಳಿ ತೀರದಲ್ಲಿರುವ ಸಾರ್ಡಿನಿಯಾ ಎಂಬ ದ್ವೀಪದಲ್ಲಿ 102 ವರ್ಷದವರು ಬೈಕ್ ಓಡಿಸುತ್ತಾರೆ, ಮರಗೆಲಸ ಮಾಡುತ್ತಾರೆ, ತಮಗಿಂತ 60 ವರ್ಷ ಕಡಿಮೆ ವಯಸ್ಸಿನವರನ್ನು ಸ್ಪರ್ಧೆಯಲ್ಲಿ ಸೋಲಿಸುತ್ತಾರೆ. ಆಹಾರ-ನಿಯಮಿತ ವ್ಯಾಯಾಮಗಳೇ ಅವರ ದೀರ್ಘಾಯುಷ್ಯದ ಗುಟ್ಟು ಎಂದು ಮಾಮೂಲಾಗಿ ನಾವಂದುಕೊಳ್ಳಬಹುದು. ಆದರೆ ನಿಜವಾದ ಮಾತು ಅದಷ್ಟೇ ಅಲ್ಲ. ಅವರ ಸಮಾಜ ರೂಪುಗೊಂಡಿರುವ ಬಗೆ. ಸಾರ್ಡಿನಿಯಾದ ಜನ ವಯಸ್ಸು ಹೆಚ್ಚಾಗಿರುವುದನ್ನು, ವಯಸ್ಸಾದರೂ ಆರೋಗ್ಯವಂತರಾಗಿ ಜೀವಿಸಿರುವುದನ್ನು ಸಂಭ್ರಮಿಸುತ್ತಾರೆ.

ಇಂಥದ್ದೇ ಇನ್ನೊಂದು ಸಮುದಾಯ ಟೋಕಿಯೊದಿಂದ 800 ಮೈಲುಗಳ ದಕ್ಷಿಣಕ್ಕೆ ಒಕಿನಾವಾ ಎಂಬ ಸ್ಥಳದಲ್ಲಿದೆ. ಸುಮಾರು 161 ಪುಟ್ಟ ದ್ವೀಪಗಳಿರುವ ಈ ಪ್ರದೇಶದ ಒಂದು ದ್ವೀಪದಲ್ಲಿ ಜಗತ್ತಿನ ಅತ್ಯಂತ ಹಿರಿಯ ಮಹಿಳೆಯರಿದ್ದಾರೆ. ಅಸಮರ್ಥತೆ ರಹಿತ, ಆರೋಗ್ಯವಂತ ದೀರ್ಘಾಯುಷ್ಯದ ಹಿರಿಮೆ ಅವರದು. ನಮಗೆಲ್ಲರಿಗೂ ಬೇಕಾದದ್ದು ಅವರ ಬಳಿ ಇದೆ! ಮತ್ತೆ ಇಲ್ಲಿಯೂ ಅವರ ಆಹಾರ ಪದ್ಧತಿ ಸರಳ, ಹೊಟ್ಟೆ ಶೇ 80ರಷ್ಟು ತುಂಬಿದೆ ಎಂದಾಕ್ಷಣ ನಿಲ್ಲಿಸುವ ಅಭ್ಯಾಸ, ಚಿಕ್ಕ ಚಿಕ್ಕ ತಟ್ಟೆಗಳಲ್ಲಿ, ಹಲವು ಬಾರಿ ಹೆಚ್ಚು ಬಣ್ಣ ಬಣ್ಣದ ತರಕಾರಿಗಳಿಂದ ಮಾಡಿದ ಖಾದ್ಯ ತಿನ್ನುವ ರೂಢಿ. ಆದರೆ ಅವರ ಆಯುಷ್ಯ-ಆರೋಗ್ಯಗಳಿಗೆ ಕಾರಣ ಅದಷ್ಟೇ ಅಲ್ಲ.



ಪ್ರತ್ಯೇಕಿಸುವಿಕೆ ಹಲವು ರೀತಿಗಳಲ್ಲಿ ನಮ್ಮನ್ನು ಕೊಲ್ಲುತ್ತದೆ ಎಂಬುದು ನಮಗೀಗ ಖಂಡಿತವಾಗಿ ಗೊತ್ತು. ಒಕಿನಾವಾದಲ್ಲಿ ಹುಟ್ಟಿದರೆ ನಿಮಗೆ ಮಾವೋಯ್ ಎಂಬ ಸಾಮಾಜಿಕ ವ್ಯವಸ್ಥೆಯ ಮೂಲಕ 6 ಜನ ಸ್ನೇಹಿತ, ಸ್ನೇಹಿತೆಯರು ಗ್ಯಾರಂಟಿ. ಅವರೊಡನೆ ಸುಖ-ದುಃಖಗಳನ್ನು ಹಂಚಿಕೊಳ್ಳಲೇಬೇಕು.

ಎಲ್ಸ್‌ವರ್ತ್ ವೇರ್ಹ್ಯಾಮ್ ಎಂಬ 97 ವರ್ಷದ ಕೋಟ್ಯಧೀಶ ತೋಟಕ್ಕೆ ಬೇಲಿ ಹಾಕಿಸಲು ಒಬ್ಬ ಕಂಟ್ರಾಕ್ಟರ್ 6,000 ಡಾಲರ್ ಕೇಳಿದ್ದಕ್ಕೆ ‘ಅಷ್ಟು ದುಡ್ಡಿಗೆ ನಾನೇ ಮಾಡುತ್ತಿದ್ದೆನಲ್ಲ’ ಎಂದು ಮುಂದಿನ ಮೂರು ದಿನಗಳ ಕಾಲ ಗುದ್ದಲಿ-ಪಿಕಾಸಿ ಹಿಡಿದು ಕೆಲಸ ಮಾಡಿದನಂತೆ. ನಾಲ್ಕನೇ ದಿನ ಆಪರೇಷನ್ ಥಿಯೇಟರ್‌ಗೆ ಧಾವಿಸಿದನಂತೆ. ಪೇಷೆಂಟ್ ಆಗಿಯಲ್ಲ, ತೆರೆದ ಹೃದಯದ ಶಸ್ತ್ರಚಿಕಿತ್ಸೆ ಮಾಡುವ ವೈದ್ಯನಾಗಿ! 97ರ ವಯಸ್ಸಿನಲ್ಲಿ ಪ್ರತೀ ತಿಂಗಳು ಸುಮಾರು 20 ತೆರೆದ ಹೃದಯದ ಶಸ್ತ್ರಚಿಕಿತ್ಸೆಗಳನ್ನು ಆತ ಮಾಡುತ್ತಾನೆ. ನಮ್ಮ ಭಾರತದಲ್ಲಿಯೂ ಇಂತಹ ಜೀವನ ಶ್ರದ್ಧೆಯುಳ್ಳವರು ಇದ್ದಾರೆ. ಅವರ ಜೀವನಶೈಲಿಯನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ ಆ ಶೈಲಿಯನ್ನು ನಿರ್ದೇಶಿಸುವುದು ಅವರ ಜೀವನಶ್ರದ್ಧೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

ವಿಶ್ವ ಆತ್ಮಸಾಕ್ಷಿಯ ದಿನ ಮುಗಿದ ಎರಡೇ ದಿನಗಳಿಗೆ ವಿಶ್ವ ಆರೋಗ್ಯ ದಿನವಿರುವುದು ಕಾಕತಾಳೀಯವೇ ಇರಬಹುದಾದರೂ ಅವೆರಡಕ್ಕೂ ಸಂಬಂಧ ಕಲ್ಪಿಸಬಹುದಾಗಿದೆ. ಆರೋಗ್ಯದ ಬಗೆಗಿನ ನಿರ್ಧಾರಗಳನ್ನು ಆತ್ಮಸಾಕ್ಷಿ- ಜೀವನಶ್ರದ್ಧೆಗಳಿಂದ ತೆಗೆದುಕೊಳ್ಳಬೇಕಾದ ತುರ್ತಿನಲ್ಲಿ ನಾವಿದ್ದೇವೆ. ಸರಿಯಾದ ಅರಿವು ಮಾತ್ರ ಮುನ್ನಡೆಸಬಲ್ಲದು. ಆದರೆ ಅರಿವಿನ ಸಲುವಾಗಿ ನಾವು ಅವಲಂಬಿಸಬಹುದಾದ ಮೂಲಗಳನ್ನು ವಿಜ್ಞಾನಿಗಳು-ವೈದ್ಯರು-ಆಡಳಿತ ವ್ಯವಸ್ಥೆಗಳು ಒದಗಿಸಿಕೊಡಬೇಕಾಗಿದೆ.

ವಾಚಕರ ವಾಣಿ

ಭೂಮಿ ನುಂಗಣ್ಣರ ಕಬಂಧಬಾಹು

‘ಆಸ್ತಿ ಕೊಳ್ಳೆಗೆ ಅಪ್ಪನೇ ಬದಲು!’ ಸುದ್ದಿ (ಪ್ರ.ವಾ., ಏ. 6) ಬೆಚ್ಚಿಬೀಳಿಸುವಂತಹುದು. ಬೆಂಗಳೂರು ನಗರ ಜಿಲ್ಲೆ ಹೆಸರಘಟ್ಟ ಹೋಬಳಿಯ ಮಾದಪ್ಪನಹಳ್ಳಿಯಲ್ಲಿ ₹ 200 ಕೋಟಿ ಮೌಲ್ಯದ 32.4 ಎಕರೆ ಸರ್ಕಾರಿ ಜಮೀನು ನಕಲಿ ದಾಖಲೆಗಳ ಮೂಲಕ ‘ಗುಳುಂ’ ಆಗಿದೆಯೆಂಬ ಪ್ರಕರಣವನ್ನು ಪತ್ತೆ ಹಚ್ಚಿರುವ ವಿಶೇಷ ಜಿಲ್ಲಾಧಿಕಾರಿ ಎಂ.ಕೆ. ಜಗದೀಶ್ ಅವರ ಕೆಲಸಕ್ಕೆ ಭಲೆ ಎನ್ನಲೇಬೇಕು.

‘ಭೂಮಿ ನುಂಗಣ್ಣ’ರ ಕಬಂಧಬಾಹು ಇಂದು ಎಲ್ಲೆಲ್ಲೂ ಹೇಗೆ ಅಟ್ಟಹಾಸದಿಂದ ಚಾಚಿದೆಯೆಂಬುದು ಗಾಬರಿ ಮೂಡಿಸುವಂತಹುದು. ಅದರಲ್ಲೂ ರಾಜಧಾನಿಯ ಹೊರವಲಯದಲ್ಲೇ ಹೀಗಾಗಿದೆಯೆಂದರೆ, ಇನ್ನು ಇತರ ಜಿಲ್ಲೆಗಳಲ್ಲಿ ಏನೇನಾಗಿರಬಹುದು ಎಂಬುದನ್ನು ಊಹಿಸುವುದು ಕಷ್ಟವೇನಲ್ಲ. ಖಾಲಿ ಇರುವ ಪಕ್ಕದ ನಿವೇಶನವನ್ನೇ ಒತ್ತರಿಸುವ ಅಥವಾ ಸದ್ದಿಲ್ಲದೆ ಗುಳುಂ ಮಾಡುವಂಥ ನುಂಗಣ್ಣರು ಇರುವಾಗ, ಬೀಳು ಬಿದ್ದಿರುವ ಸರ್ಕಾರಿ ಜಾಗವನ್ನು ಸುಮ್ಮನೆ ಬಿಟ್ಟಾರೆಯೇ?

ಹಳ್ಳಿ-ಹಳ್ಳಿಗಳಲ್ಲೂ ಕೆರೆ-ಕಟ್ಟೆ, ರಾಜಕಾಲುವೆ, ಸರ್ಕಾರಿ ಶಾಲಾ- ಕಾಲೇಜು ಜಾಗ, ರಸ್ತೆ- ಉದ್ಯಾನ ಹಾಗೂ ಸರ್ಕಾರಕ್ಕೆ ಸೇರಿದ ಇತರ ಖಾಲಿ ಜಾಗಗಳನ್ನು ಎಗ್ಗಿಲ್ಲದೆ ಒತ್ತುವರಿ ಮಾಡಿರುವ ಪ್ರಕರಣಗಳಿಗೇನೂ ಕೊರತೆಯಿಲ್ಲ. ಇಂಥದ್ದರ ವಿರುದ್ಧ ದನಿಯೆತ್ತುವವರನ್ನೇ ಮಟ್ಟ ಹಾಕುವ ಮಟ್ಟಕ್ಕೆ ‘ಭೂಮಿ ನುಂಗಣ್ಣ’ರ ದುಷ್ಟಕೂಟ ಪ್ರಬಲವಾಗಿದೆ. ಇಂಥ ವಿಷಮ ಸನ್ನಿವೇಶದಲ್ಲೂ ದಿಟ್ಟ ಕ್ರಮ ಕೈಗೊಂಡಿರುವುದು ಅಭಿನಂದನೀಯ. ಪ್ರತೀ ಜಿಲ್ಲೆ-ತಾಲ್ಲೂಕಿನಲ್ಲೂ ಸರ್ಕಾರಿ ಅಧಿಕಾರಿಗಳು ಹೀಗೆ ದಿಟ್ಟ ಕ್ರಮ ಜರುಗಿಸಿದರೆ, ಅದೆಷ್ಟು ಕೋಟಿ ಮೌಲ್ಯದ ಸರ್ಕಾರಿ ಜಮೀನು ಪತ್ತೆ ಆದೀತೋ?!

ಆರ್.ಎಸ್.ಅಯ್ಯರ್, ತುಮಕೂರು

ಯಾವುದು ಶ್ರಮದ ಮೌಲ್ಯ?

ಕೂಲಿ ಕಾರ್ಮಿಕರ ನಡುವೆ ವೇತನದಲ್ಲಿ ಲಿಂಗತಾರತಮ್ಯ ಸಹಜ ಎಂದು ಜಿ.ಎಚ್.ವೆಂಕಟೇಶಮೂರ್ತಿ ಅವರು ಬರೆದಿದ್ದಾರೆ (ವಾ.ವಾ., ಏ. 6). ಶ್ರಮದ ಮೌಲ್ಯ ನಿರ್ಧರಿಸುವುದು ಎತ್ತುವ ಭಾರವೋ? ಸುರಿಸುವ ಬೆವರೋ? ವಿನಿಯೋಗಿಸುವ ಸಮಯವೋ? ಅಥವಾ ಕೆಲಸದ ಉಪಯುಕ್ತತೆಯೋ? ಭಾರ-ಸಮಯ-ಉಪಯುಕ್ತತೆಯೇ ಮಾನದಂಡವಾಗಿದ್ದಲ್ಲಿ ಇವತ್ತು ಅತಿಹೆಚ್ಚು ಕೂಲಿಯು ಮಲದಗುಂಡಿಗೆ ಇಳಿಯುವ ಸಫಾಯಿ ಕರ್ಮಚಾರಿಗಳಿಗೆ, ಕಲ್ಲುಮಣ್ಣು ಇಟ್ಟಿಗೆ ಹೊರುವವರಿಗೆ, ಗಣಿ ಕೆಲಸದವರಿಗೆ, ಬಸುರಿನ ಭಾರದ ಜೊತೆಗೆ ದುಡಿಯುವ ಹೆಣ್ಣುಗಳಿಗೆ ಸಿಗಬೇಕಿತ್ತು. ವಿಪರ್ಯಾಸವೆಂದರೆ, ಭಾರತದಲ್ಲಿ ಶ್ರಮದ ಕೆಲಸ ಕೀಳು, ಅದಕ್ಕೆ ಅತಿಕಡಿಮೆ ವೇತನ. ವಿರಾಮದಲ್ಲಿ ಮಾಡುವ ಬೌದ್ಧಿಕ ಕೆಲಸಗಳಿಗೆ ಕೈತುಂಬ ಸಂಬಳ. ಇನ್ನು ಹೆಣ್ಣು ದುಡಿಮೆಯನ್ನಂತೂ ಕೇಳುವಂತೇ ಇಲ್ಲ.

ಮಹಿಳೆಯರು ಕೆಲಸದ ಸ್ಥಳಕ್ಕೆ ಹೋಗುವಾಗ ತೆರುವ ಬಸ್‌ಚಾರ್ಜಿಗೆ, ಕಡಿಮೆ ತಿಂದರೂ ಹೋಟೆಲಿಗೆ ಕೊಡುವ ಹಣಕ್ಕೆ ಇಲ್ಲದ ವ್ಯತ್ಯಾಸವು ಸಂಬಳದ ವಿಷಯ ಬಂದಾಗ ಎದ್ದುಕಾಣುತ್ತದೆ. 1976ರಲ್ಲಿ ಸಮಾನ ವೇತನ ಕಾಯ್ದೆ ಭಾರತದಲ್ಲಿ ಜಾರಿಗೆ ಬಂದರೂ ಶೇ 20ರಷ್ಟು ವೇತನ ತಾರತಮ್ಯ ಇದೆ. ಮನೆಗೆಲಸವೂ ಸೇರಿ ಮಹಿಳಾ ದುಡಿಮೆಯ ಶೇ 66ರಷ್ಟು ವೇತನರಹಿತವಾಗಿದೆ. ಕಡಿಮೆ ಸಂಬಳ ಮತ್ತು ಪುಕ್ಕಟೆ ಕೆಲಸ ಮಾಡುವವರು ಮಹಿಳೆಯರೇ ಆಗಿದ್ದಾರೆ. ಹೀಗಿರುವಾಗ ಕಡಿಮೆ ಭಾರ ಎತ್ತಬಲ್ಲ ಮಹಿಳೆಯರಿಗೆ ಪುರುಷರಷ್ಟೇ ಸಂಬಳ ಕೊಟ್ಟರೆ ‘ಪಾಪರ್ ಆಗ್ತೀವಿ’ ಎಂದು ಯೋಚಿಸುವ ಸಮಾಜವು ಆತ್ಮಾವಲೋಕನ ಮಾಡಿಕೊಳ್ಳುವುದು ಅವಶ್ಯ.

ಡಾ. ಎಚ್.ಎಸ್.ಅನುಪಮಾ, ಕವಲಕ್ಕಿ, ಹೊನ್ನಾವರ

ರಾಹುಲ್ ಹೇಳಿಕೆ ತಂದ ಮಿಶ್ರಭಾವ

ಕೇರಳದ ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಮಾತನಾಡುತ್ತ ‘ಸಿಪಿಎಂ ಮುಕ್ತ ಭಾರತ ಎಂದೇಕೆ ಮೋದಿ ಹೇಳುತ್ತಿಲ್ಲ’ ಎಂದು ಪ್ರಶ್ನಿಸುತ್ತ ‘ಕಾಂಗ್ರೆಸ್ ಒಂದುಗೂಡಿಸುವ ಶಕ್ತಿಯೇ ಹೊರತು ಎಡಪಕ್ಷಗಳಂತೆ ವಿಭಜಕ ಶಕ್ತಿಯಲ್ಲ... ಎಡಪಕ್ಷಗಳು ಕೂಡಾ ಹಿಂಸೆಯ ಸಿದ್ಧಾಂತ ಹೊಂದಿವೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹೇಳಿರುವುದನ್ನು ಓದಿ (ಪ್ರ.ವಾ., ಏ. 4) ಇಷ್ಟು ವರ್ಷಗಳ ನಂತರವಾದರೂ ಕಾಂಗ್ರೆಸ್‌ನ ಒಬ್ಬ ಮುಖಂಡರೆಂಬುವವರಿಗೆ ಈ ದಿವ್ಯಜ್ಞಾನ ಉದಯಿಸಿತಲ್ಲಾ ಎಂದು ಸಂತೋಷವೂ ಆಶ್ಚರ್ಯವೂ ಅನುಮಾನವೂ ಏಕಕಾಲಕ್ಕೇ ಉಂಟಾದವು. ಆಶ್ಚರ್ಯವೇಕೆಂದರೆ, ರಾಹುಲ್ ಅವರ ಅಜ್ಜಿ ಮತ್ತು ಕಾಂಗ್ರೆಸ್‌ನ ಮಹಾನ್ ನಾಯಕಿ ಇಂದಿರಾ ಗಾಂಧಿ ಅವರಿಗೆ ಎಡಪಕ್ಷಗಳ ಬಗ್ಗೆ ಇದ್ದ ವ್ಯಾಮೋಹವಾದರೂ ಅದೆಷ್ಟು ತೀವ್ರವಾದದ್ದು! ತಮ್ಮ ಆಡಳಿತದುದ್ದಕ್ಕೂ ರಾಹುಲ್ ಅವರು ವರ್ಣಿಸಿರುವ ‘ವಿಭಜಕ ಮತ್ತು ಹಿಂಸಾ ಸಿದ್ಧಾಂತ’ದ ಎಡಪಕ್ಷಗಳೊಂದಿಗೆ ಅವರ ಸಖ್ಯ ಅದೆಷ್ಟು ಗಾಢವಾಗಿತ್ತು! ಅವರ ಸಂಪುಟದ ಕೆಲವರು ಎಡಪಕ್ಷಗಳ ಔರಸ ಪುತ್ರರಂತಿದ್ದುದು ಎಲ್ಲರಿಗೂ ತಿಳಿದೇ ಇದೆ. ತುರ್ತು ಪರಿಸ್ಥಿತಿಯಲ್ಲಿ ಎಡಪಕ್ಷಗಳವರೇ ಅವರಿಗೆ ಕುಲಗುರುಗಳಂತಿದ್ದರು.

ದೇಶದ ಉಳಿದೆಲ್ಲ ವಿರೋಧ ಪಕ್ಷಗಳು ಒಂದು ಕಡೆ ಇದ್ದರೆ ಕಾಂಗ್ರೆಸ್ ಮತ್ತು ಎಡಪಕ್ಷಗಳು ಮಾತ್ರ ಗಾಢ ಮೈತ್ರಿಯಿಂದಿದ್ದವು. ಆಗ ಕಾಂಗ್ರೆಸ್‌ಗೆ ಮಾತ್ರ ಅವು ಹಿಂಸೆಯ ಸಿದ್ಧಾಂತ ಹೊಂದಿದ ಹಾಗೂ ವಿಭಜಕ ಶಕ್ತಿಯ ಪಕ್ಷಗಳೆನಿಸಿರಲಿಲ್ಲ ಅಥವಾ ಯಾರಿಗೆ ಗೊತ್ತು ಕೇರಳದಲ್ಲಿನ ನಂಬೂದಿರಿಪಾಡ್ ನೇತೃತ್ವದ ‘ದೇಶದ ಮೊದಲ ಕಮ್ಯುನಿಸ್ಟ್ ಸರ್ಕಾರ’ವನ್ನು ಇಂದಿರಾ ಗಾಂಧಿಯವರು ಉರುಳಿಸಿದ ಸೇಡನ್ನು ತುರ್ತು ಪರಿಸ್ಥಿತಿಯನ್ನು ಬೆಂಬಲಿಸುವ ಮೂಲಕ ಅವರ ಸರ್ಕಾರವನ್ನು ಉರುಳಿಸಲು ಅದು ಎಡಪಕ್ಷಗಳು ಹೂಡಿದ್ದ ಸಂಚೋ? ಏನೇ ಆಗಲಿ ಈ ಬಗ್ಗೆ ಸಂಶೋಧನೆಗೆ ಅವಕಾಶವಿದೆ! ಇನ್ನು ಅನುಮಾನವೇಕೆಂದರೆ, ಇದು ಕೇವಲ ಚುನಾವಣಾ ಸಮಯದ ಸ್ಟಂಟೋ ಎಂದು. ಮುಂದೆಂದಾದರೂ ಮೈತ್ರಿ ಮಾಡಿಕೊಳ್ಳಬೇಕಾಗಿ ಬಂದರೆ, ಕೋಮುವಾದಿ ಪಕ್ಷವನ್ನು ದೂರವಿಡಲು ಎಂಥ ಪಕ್ಷದೊಂದಿಗಾದರೂ ಮೈತ್ರಿ ಮಾಡಿಕೊಳ್ಳಲೂ ಸಿದ್ಧ ಎಂಬ ನುಡಿಮುತ್ತನ್ನು ಉರುಳಿಸಿದರಾಯಿತು ಅಷ್ಟೆ!

ಹಾಗೆ ನೋಡಿದರೆ ಎಡಪಕ್ಷಗಳನ್ನು ಹೊರತುಪಡಿಸಿದರೆ ನಮ್ಮ ದೇಶದಲ್ಲಿ ಯಾವ ಪಕ್ಷಕ್ಕೆ ತಾನೇ ಸಿದ್ಧಾಂತದ ಗೊಡವೆ ಇದೆ? ಎಡಪಕ್ಷಗಳಿಗೆ ದೇಶ, ಜನತೆ, ಅಧಿಕಾರ ಎಲ್ಲಕ್ಕಿಂತ ತಮ್ಮ ಸಿದ್ಧಾಂತ ಮುಖ್ಯ. ಸಿದ್ಧಾಂತಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಬಲ್ಲ ಪಕ್ಷಗಳೆಂದರೆ ಎಡಪಕ್ಷಗಳು ಮಾತ್ರ! ಬಹುಶಃ ಸಿಪಿಎಂ ಮುಕ್ತ ಭಾರತ ಎಂದು ಮೋದಿ ಹೇಳದಿರಲು ಕಾರಣ, ಎಡಪಕ್ಷಗಳನ್ನು ಅವರು ಲೆಕ್ಕಕ್ಕೆ ಇಟ್ಟಿಲ್ಲದಿರುವುದೇ ಆಗಿರಬೇಕು!

ಆರ್.ಲಕ್ಷ್ಮೀನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕ್ರಿಕೆಟ್ ಭ್ರಷ್ಟಾಚಾರ ಬೇಡವೇ ಮೂಗುದಾರ?

• ಗಿರೀಶ ದೊಡ್ಡಮನಿ

ಬೆಂಗಳೂರು: 'ಕ್ರಿಕೆಟ್ ಬೆಟ್ಟಿಂಗ್ ಅನ್ನು ಕಾನೂನುಬದ್ಧಗೊಳಿಸಬೇಕು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲಿರುವ ಪದಾಧಿಕಾರಿಗಳು, ಆಡಳಿತ ಸಿಬ್ಬಂದಿ, ಆಟಗಾರರು ಇದರಲ್ಲಿ ಭಾಗಿಯಾಗುವಂತಿಲ್ಲ. ಅವರೆಲ್ಲರೂ ತಮ್ಮ ಆಸ್ತಿಪಾಸ್ತಿಯ ವಿವರವನ್ನು ಸಲ್ಲಿಸಬೇಕು...'

ವಿಶ್ವದ ಶ್ರೀಮಂತ ಕ್ರೀಡಾ ಸಂಸ್ಥೆಗಳಲ್ಲಿ ಒಂದಾಗಿರುವ ಬಿಸಿಸಿಐ ಆಡಳಿತದಲ್ಲಿ ಸುಧಾರಣೆ ತರಲು ನಿವೃತ್ತ ನ್ಯಾಯಮೂರ್ತಿ ಆರ್‌.ಎಂ. ಲೋಧಾ ಅವರ ಸಮಿತಿಯು ನೀಡಿರುವ ಶಿಫಾರಸುಗಳ ಆಧಾರದಲ್ಲಿ ರಚನೆಯಾಗಿರುವ ನಿಯಮಾವಳಿಯಲ್ಲಿರುವ ಅಂಶ ಇದು. ಇದರ ಪ್ರಕಾರ; ಬೆಟ್ಟಿಂಗ್ ಕಾನೂನುಬದ್ಧವಾದರೆ, ಸರ್ಕಾರದ ನಿಯಂತ್ರಣ ಇರುತ್ತದೆ. ಅಲ್ಲದೇ ಅದರಿಂದ ಬರುವ ಆದಾಯವು ಮಂಡಳಿಗೆ ಮತ್ತು ತೆರಿಗೆಯ ಹಣ ಸರ್ಕಾರಕ್ಕೆ ಸಂದಾಯವಾಗುತ್ತದೆ. ಆದರೆ, ಮಂಡಳಿಯೊಳಗಿನ ಯಾರೂ ಇದರಲ್ಲಿ ಭಾಗಿಯಾಗುವಂತಿಲ್ಲ ಎಂಬುದು ಸ್ಪಷ್ಟ. ಏಕೆಂದರೆ, ಈ ಹಿಂದಿನ ಪ್ರಕರಣಗಳಲ್ಲಿ ಬಿಸಿಸಿಐ ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ನಲ್ಲಿ 'ಹಿತಾಸಕ್ತಿ ಸಂಘರ್ಷ'ಗಳ ಉದಾಹರಣೆಗಳಿವೆ.

ಆದರೆ, ಇದೀಗ ಬಿಸಿಸಿಐನ ಭ್ರಷ್ಟಾಚಾರ ತಡೆ ಘಟಕ (ಎಸಿಯು) ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿರುವ ಶಬೀರ್ ಹುಸೇನ್ ಖಂಡ್ವಾವಾಲಾ ಅವರ ಹೇಳಿಕೆಯು ಲೋಧಾ ಸಮಿತಿಯ ಈ ಶಿಫಾರಸಿಗೆ ತಿಲಾಂಜಲಿ ಇಡುವ ಮುನ್ನುಡಿಯಂತೆ ಕಾಣುತ್ತಿದೆ. ಇನ್ನೆರಡು ದಿನಗಳು ಕಳೆದರೆ ಐಪಿಎಲ್ ಆರಂಭವಾಗಲಿದೆ. ಈ ವರ್ಷ ಟಿ20 ವಿಶ್ವಕಪ್ ಟೂರ್ನಿಗೂ ಭಾರತವೇ ಆತಿಥ್ಯ ವಹಿಸಲಿದೆ. ಈ ಕಾರಣಕ್ಕೆ ಶಬೀರ್ ಹೇಳಿಕೆಯು ಮಹತ್ವ ಪಡೆದುಕೊಂಡಿದೆ.

'ಬೆಟ್ಟಿಂಗ್ ಕಾನೂನುಬದ್ಧಗೊಳಿಸುವುದರಿಂದ ಮ್ಯಾಚ್ ಫಿಕ್ಸಿಂಗ್‌ಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಭ್ರಷ್ಟಾಚಾರದ ಚಟುವಟಿಕೆಗಳನ್ನು ಮಟ್ಟ ಹಾಕಬೇಕು. ಬೆಟ್ಟಿಂಗ್ ನಿಯಮಬದ್ಧವಾದರೆ ಸರ್ಕಾರಕ್ಕೆ ಅಪಾರ ಆದಾಯ ಬರುತ್ತದೆ ಎಂಬುದು ಮೇಲ್ನೋಟದ ಮಾತು. ಬೆಟ್ಟಿಂಗ್ ಅಪಾಯಕಾರಿ, ಅದರಿಂದಾಗುವ ಅನಾಹುತ ಹೆಚ್ಚು. ಪಿಡುಗು ತಡೆಯಲು ನಿಯಮ ರೂಪಿಸುವ ಹೊತ್ತಿನಲ್ಲಿ, ಅಪರಾಧವನ್ನೇ ಕಾನೂನುಬದ್ಧಗೊಳಿಸುವುದು ಸರಿಯಲ್ಲ' ಎಂದು ಗುಜರಾತ್‌ನ ಮಾಜಿ ಪೊಲೀಸ್ ಮಹಾನಿರ್ದೇಶಕರಾಗಿರುವ ಶಬೀರ್ ಹೇಳಿದ್ದಾರೆ.

ಕಳೆದೆರಡು ದಶಕಗಳಿಂದ ಭಾರತದ ಕ್ರಿಕೆಟ್ ಅನ್ನು ಈ ಪಿಡುಗು ಕಾಡುತ್ತಿದ್ದರೂ ಕಟ್ಟುನಿಟ್ಟಿನ ಕಾನೂನು ರಚನೆಯಾಗಿಲ್ಲ. 1999- 2000ರಲ್ಲಿ ಮೊದಲ ಬಾರಿಗೆ ದೊಡ್ಡ ಸದ್ದು ಮಾಡಿದ್ದ ಪಂದ್ಯ ಫಿಕ್ಸಿಂಗ್ ಪ್ರಕರಣದಲ್ಲಿ, ಭಾರತ ತಂಡದ ನಾಯಕರಾಗಿದ್ದ ಮೊಹಮ್ಮದ್ ಅಜರುದ್ದೀನ್, ಮನೋಜ್ ಪ್ರಭಾಕರ್, ಅಜಯ್ ಜಡೇಜ, ದಕ್ಷಿಣ ಆಫ್ರಿಕಾದ ಹ್ಯಾನ್ಸಿ ಕ್ರೊನಿಯೆ ಅವರೆಲ್ಲರೂ ಕಳಂಕ ಮೆತ್ತಿಕೊಂಡಿದ್ದರು. ಯಾವುದೋ ದೇಶದಲ್ಲಿ ಕುಳಿತು ಫೋನ್ ಮೂಲಕ ಕ್ರಿಕೆಟ್ ಅಭಿಮಾನಿಗಳಿಂದ ಬಾಜಿ ಕಟ್ಟಿಸುವ ಮಾಫಿಯಾ ಕಿಂಗ್‌ಪಿನ್‌ಗಳು, ಇನ್ನೊಂದು ಹಾದಿಯಿಂದ ತಮಗೆ ಲಾಭ ತರುವಂತಹ ಫಲಿತಾಂಶಕ್ಕಾಗಿ ಕ್ರಿಕೆಟ್ ಆಟಗಾರರನ್ನು ಬುಕ್ಕಿಗಳ ಮೂಲಕ ಬುಟ್ಟಿಗೆ ಹಾಕಿಕೊಳ್ಳುವ ತಂತ್ರ ಅನುಸರಿಸಿದ್ದರು. ಆಮಿಷಗಳಿಗೆ ತಾರಾವರ್ಚಸ್ಸಿನ ಆಟಗಾರರು ಬಲಿಯಾಗಿದ್ದರು.

ಆನಂತರವೂ ಈ ಪಿಡುಗು ಬೇರೆ ಬೇರೆ ರೂಪ ಪಡೆದು ಅಟ್ಟಹಾಸ ಮೆರೆಯುತ್ತಿದೆ. ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಹಣ, ಆಸ್ತಿಪಾಸ್ತಿ ಕಳೆದುಕೊಂಡು ಬೀದಿಪಾಲಾದವರ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಟಿ20 ಮಾದರಿ ಜನಪ್ರಿಯವಾದ ಮೇಲಂತೂ ಬಾಜಿ ಲೋಕವು ತನ್ನ ಕಬಂಧಬಾಹುಗಳನ್ನು ಮತ್ತಷ್ಟು ವಿಸ್ತರಿಸಿದೆ. 2013ರಲ್ಲಿ ಐಪಿಎಲ್‌ನಲ್ಲಿ ನಡೆದ ಸ್ಪಾಟ್ ಫಿಕ್ಸಿಂಗ್‌ನಲ್ಲಿ ಆಗಿನ ಬಿಸಿಸಿಐ ಅಧ್ಯಕ್ಷ ಎನ್. ಶ್ರೀನಿವಾಸನ್ ಅವರ ಅಳಿಯ ಗುರುನಾಥ್ ಮೇಯಪ್ಪನ್ ಸಿಕ್ಕಿಬಿದ್ದಿದ್ದರು. ಅವರು ಅಧಿಕಾರಿಯಾಗಿದ್ದ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಇದೇ ಹಗರಣದಲ್ಲಿ ಸಿಕ್ಕಿಬಿದ್ದ ಆಟಗಾರರಾದ ಎಸ್. ಶ್ರೀಶಾಂತ್, ಅಜಿತ್ ಚಾಂಡಿಲಾ ಮತ್ತು ಅಂಕಿತ್ ಚವ್ಹಾಣ್ ಪ್ರತಿನಿಧಿಸುತ್ತಿದ್ದ ರಾಜಸ್ಥಾನ್ ರಾಯಲ್ಸ್ ತಂಡಗಳು ಎರಡು ವರ್ಷ ನಿಷೇಧಕ್ಕೊಳಗಾದವು. ಆ ಸಂದರ್ಭದಲ್ಲಿಯೇ ಸುಪ್ರೀಂ ಕೋರ್ಟ್ ಲೋಧಾ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯು ನೀಡಿರುವ ನಿಯಮಗಳಲ್ಲಿ ಬೆಟ್ಟಿಂಗ್ ಕಾನೂನುಬದ್ಧಮಾಡುವುದು ಕೂಡ ಪ್ರಮುಖವಾಗಿದೆ.

ಡಿಜಿಟಲ್ ಸ್ಪರ್ಶ: ಭಾರತದ ಉದ್ದಗಲಕ್ಕೂ ಕ್ರಿಕೆಟ್ ಅನ್ನು ಆರಾಧಿಸುವ ಕೋಟಿ ಕೋಟಿ ಅಭಿಮಾನಿಗಳಿದ್ದಾರೆ. ಪಂದ್ಯಗಳ ಮೇಲೆ, ತಮ್ಮ ನೆಚ್ಚಿನ ಆಟಗಾರರ ಮೇಲೆ ಬಾಜಿ ಕಟ್ಟುವ ಲಕ್ಷಾಂತರ ಜನರೂ ಇದ್ದಾರೆ. ಈಗಂತೂ ಬೆಟ್ಟಿಂಗ್ ದಂಧೆ ವಿಕೇಂದ್ರೀಕರಣಗೊಂಡಿದೆ. ಡಿಜಿಟಲ್ ಯುಗದಲ್ಲಿ ಎಲ್ಲರ ಕಿಸೆಯಲ್ಲಿರುವ ಮೊಬೈಲ್ ಫೋನ್ ಬಾಜಿ ಲೋಕದ ಹೆಬ್ಬಾಗಿಲುಗಳಾಗಿವೆ.



ಸದ್ಯ ಮನರಂಜನೆಗಾಗಿ ಎಂದು ಹೇಳಿಕೊಳ್ಳುತ್ತಿರುವ ಕೆಲವು ಆನ್‌ಲೈನ್ ಗೇಮಿಂಗ್ ತಾಣಗಳೂ ಪರೋಕ್ಷವಾಗಿ ಬೆಟ್ಟಿಂಗ್‌ಗೆ ಕುಮ್ಮಕ್ಕು ಕೊಡುತ್ತಿವೆ ಎಂದು ಸಂಘಟನೆಯೊಂದು ಕೋರ್ಟ್‌ನಲ್ಲಿ ದಾವೆ ಹೂಡಿದೆ. ಕೊರೊನಾ ಸಮಯದಲ್ಲಿ ಶಾಲೆ ತರಗತಿಗಳು, ಕಚೇರಿ ಕೆಲಸಗಳು, ಸಂವಹನ ಮತ್ತು ಮನರಂಜನೆಗಾಗಿ ಬಹುಪಾಲು ಜನರು ಇಂಟರ್‌ನೆಟ್ ತಾಣಗಳನ್ನೇ ಆಶ್ರಯಿಸಿದ್ದಾರೆ. ಇದರಿಂದಾಗಿ ಶಾಲಾ ವಿದ್ಯಾರ್ಥಿಗಳಿಂದ ಹಿರಿಯ ನಾಗರಿಕರವರೆಗೂ ಬೆಟ್ಟಿಂಗ್ ಮಾರುಕಟ್ಟೆ ವಿಸ್ತರಿಸುವ ಅವಕಾಶ ಸೃಷ್ಟಿಯಾಗಿದೆ. ಇದರಿಂದಾಗಬಹುದಾದ ಅನಾಹುತ ತಡೆಗೆ ಕಾನೂನಿನ ಕಟ್ಟುನಿಟ್ಟಿನ ಚೌಕಟ್ಟು ಬೇಕು ಎಂಬುದು ಹಲವರ ಒತ್ತಾಯವಾಗಿದೆ.

'ಮ್ಯಾಚ್ ಫಿಕ್ಸಿಂಗ್ ಪ್ರಕರಣಗಳನ್ನು ಗಂಭೀರ ಅಪರಾಧಗಳೆಂದು ಪರಿಗಣಿಸಬೇಕು. ಅವುಗಳನ್ನು ಕಾನೂನಿನಡಿಯಲ್ಲಿ ತರಬೇಕು. ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ಕಾನೂನು ತಜ್ಞರು ಹಲವು ವರ್ಷಗಳಿಂದ ಹೇಳುತ್ತಿದ್ದಾರೆ. ಆದರೆ, ಈ ವಿಷಯದಲ್ಲಿ ಭಾರತದಲ್ಲಿ ಪೊಲೀಸರ ಕೈ ಕಟ್ಟಿಹಾಕಲಾಗಿದೆ' ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಭ್ರಷ್ಟಾಚಾರ ತಡೆ ಘಟಕದ ಸಂಯೋಜಕ ಸ್ಟೀವ್ ರಿಚರ್ಡ್ಸನ್ ಒಂದು ವರ್ಷದ ಹಿಂದೆ ಹೇಳಿದ್ದರು. ಕ್ರಿಕೆಟ್ ಕ್ಷೇತ್ರಕ್ಕೆ ದೊಡ್ಡಣ್ಣನಾಗಿರುವ ಬಿಸಿಸಿಐ, ಈಗಲಾದರೂ ಎಚ್ಚೆತ್ತುಕೊಂಡರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗೌರವ ಹೆಚ್ಚಿಸಿಕೊಳ್ಳಬಹುದು ಎಂಬುದು ಕ್ರಿಕೆಟ್ ಪ್ರೇಮಿಗಳ ನಿರೀಕ್ಷೆಯಾಗಿದೆ.

ಕಾನೂನು ರಚನೆಯ ಪರವಾಗಿದ್ದ ಶೇಖಾವತ್

ಬಿಸಿಸಿಐ ಎಸಿಯುನ ನಿಕಟಪೂರ್ವ ಮುಖ್ಯಸ್ಥ ಅಜಿತ್ ಸಿಂಗ್ ಶೇಖಾವತ್ ಅವರು ಬೆಟ್ಟಿಂಗ್ ಅನ್ನು ಕಾನೂನು ಬದ್ಧಗೊಳಿಸುವುದರ ಪರವಾಗಿದ್ದರು. ಮ್ಯಾಚ್ ಫಿಕ್ಸಿಂಗ್ ನಿಯಂತ್ರಣ ಕಾಯ್ದೆ ರಚಿಸಬೇಕು ಎಂದು ಹಲವು ಬಾರಿ ಒತ್ತಾಯಿಸಿದ್ದರು. ಆದರೆ, ಅವರ ಬೇಡಿಕೆ ಈಡೇರಲಿಲ್ಲ.

'ಈ ಪಿಡುಗನ್ನು ನಿಯಂತ್ರಿಸುವುದು ಅಸಾಧ್ಯವೇನಲ್ಲ. ಅದಕ್ಕಾಗಿ ಒಂದು ವಿಶೇಷ ಕಾನೂನಿನ ಅಗತ್ಯವಿದೆ. ಸ್ಪಷ್ಟವಾದ ನಿಯಮ, ನಿರ್ದೇಶನವಿದ್ದರೆ ಪೊಲೀಸರ ಕಾರ್ಯನಿರ್ವಹಣೆಯೂ ಉನ್ನತ ಮಟ್ಟಕ್ಕೇರುತ್ತದೆ. ಆದ್ದರಿಂದ ಈ ಅವ್ಯವಹಾರಗಳಿಗೆ ಕಡಿವಾಣ ಹಾಕಬಹುದು' ಎಂದು ಶೇಖಾವತ್ ಈ ಹಿಂದೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು. ಬಿಸಿಸಿಐ ಮತ್ತು ಐಸಿಸಿಯಲ್ಲಿ ಭ್ರಷ್ಟಾಚಾರ ತಡೆ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಸಿಕ್ಕಿಬಿದ್ದ ಆಟಗಾರರ ಬಂಧನ ಮತ್ತು ತನಿಖೆಗಳು ಪೊಲೀಸ್ ವ್ಯಾಪ್ತಿಗೆ ಬರುತ್ತವೆ. ಆದರೆ, ಶಿಕ್ಷೆ ನೀಡುವ ಪ್ರತ್ಯೇಕವಾದ ಕಾನೂನು ಇಲ್ಲಿಲ್ಲ. ಈ ಲೋಪವನ್ನೇ ಬಳಸಿಕೊಂಡು ಆರೋಪಿಗಳು ಪಾರಾಗುತ್ತಾರೆ ಎಂದು ತಜ್ಞರು ಹೇಳುತ್ತಾರೆ.

ರಾಜ್ಯ ಲೀಗ್‌ಗಳಿಗೂ ಕಳಂಕ

ಫಿಕ್ಸಿಂಗ್ ಮತ್ತು ಬೆಟ್ಟಿಂಗ್ ಪಿಡುಗುಗಳು ರಾಷ್ಟ್ರ–ಅಂತರರಾಷ್ಟ್ರೀಯ ಮಟ್ಟಕ್ಕೆ ಮಾತ್ರ ಸೀಮಿತವಾಗಿಲ್ಲ. ಐಪಿಎಲ್ ಪ್ರಭಾವದಿಂದ ರಾಜ್ಯಮಟ್ಟದಲ್ಲಿ ಆರಂಭಗೊಂಡ ಫ್ರಾಂಚೈಸಿ ಲೀಗ್‌ಗಳಲ್ಲಿಯೂ ಫಿಕ್ಸಿಂಗ್ ಸದ್ದು ಮಾಡಿತ್ತು.

ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಮತ್ತು ತಮಿಳುನಾಡು ಪ್ರೀಮಿಯರ್ ಲೀಗ್ (ಟಿಎನ್‌ಪಿಎಲ್) ನಲ್ಲಿ ನಡೆದ ಹಗರಣಗಳು 2019ರಲ್ಲಿ ಭಾರಿ ಸದ್ದು ಮಾಡಿದ್ದವು. ರಾಜ್ಯದ ಯುವ ಆಟಗಾರರ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯೆಂದು ಬಿಂಬಿತವಾಗಿದ್ದ ಈ ಟೂರ್ನಿಗಳು ಕಳಂಕ ಮೆತ್ತಿಕೊಂಡವು.

ಬೆಟ್ಟಿಂಗ್: ಜಗತ್ತಿನ ಹಲವೆಡೆ ದೊಡ್ಡ ಉದ್ಯಮ

ಕ್ರೀಡೆಗಳಲ್ಲಿ ಬೆಟ್ಟಿಂಗ್ ನಡೆಸಲು ಜಗತ್ತಿನ ಹಲವು ರಾಷ್ಟ್ರಗಳು ಅವಕಾಶ ಮಾಡಿಕೊಟ್ಟಿವೆ. ಬೆಟ್ಟಿಂಗ್ ಒಂದು ದೊಡ್ಡ ಉದ್ಯಮವಾಗಿ ಬೆಳೆದಿದ್ದು, ಸಾಕಷ್ಟು ಉದ್ಯೋಗ ಸೃಷ್ಟಿಸಿವೆ. ಕೆಲವು ರಾಷ್ಟ್ರಗಳಲ್ಲಿ ಎಲ್ಲಾ ಕ್ರೀಡೆಗಳನ್ನೂ ಬೆಟ್ಟಿಂಗ್‌ನ ವ್ಯಾಪ್ತಿಗೆ ತರಲಾಗಿದೆ. ಇನ್ನೂ ಕೆಲವು ರಾಷ್ಟ್ರಗಳು ಒಂದೆರಡು ಕ್ರೀಡೆಗಳಲ್ಲಿ ಮಾತ್ರ ಬೆಟ್ಟಿಂಗ್‌ಗೆ ಅವಕಾಶ ನೀಡಿವೆ



ಆಧಾರ: ವಿವಿಧ ಮೂಲಗಳು ವರದಿ: ಜಯಸಿಂಹ. ಆರ್. ಪ್ರಜಾವಾಣಿ ಗ್ರಾಫಿಕ್ಸ್: ಶಶಿಕಿರಣ್ ದೇಸಾಯಿ ಬಿ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಬಿಹಾರದ ಯುವ ರೈತನೊಬ್ಬ ಹಾಪ್‌ಶೂಟ್ ಎಂಬ ಬೆಳೆಯನ್ನು ಬೆಳೆಯುತ್ತಿದ್ದು. ಇದು ಪ್ರತಿ ಕೆ.ಜಿ.ಗೆ ₹1 ಲಕ್ಷ ದರದಲ್ಲಿ ಬಿಕರಿಯಾಗುತ್ತಿದೆ. ಬೇರೆ ಎಲ್ಲಾ ರೈತರು ಇದೇ ಬೆಳೆಯನ್ನು ಬೆಳೆದರೆ, ಆರಾಮವಾಗಿ ದುಡ್ಡು ಸಂಪಾದಿಸಬಹುದು. ರೈತರು ಹೀಗೆ ಪ್ರಗತಿಪರರಾಗಬೇಕು ಎಂಬ ವಿವರ ಇರುವ ಪೋಸ್ಟ್, ಸಾಮಾಜಿಕ ಜಾಲತಾಣಗಳಲ್ಲಿ ಹಲವು ದಿನಗಳಿಂದ ವೈರಲ್ ಆಗಿದೆ. ಯುವಕನೊಬ್ಬ ಹೊಲದಲ್ಲಿ, ಬೆಳೆಯೊಂದರ ಮಧ್ಯೆ ಕುಳಿತಿರುವ ಚಿತ್ರವೂ ವೈರಲ್ ಆಗಿವೆ. ಬಿಹಾರದ ಐಎಎಸ್ ಅಧಿಕಾರಿ ಸುಪ್ರಿಯಾ ಸಾಹು ಸಹ ಈ ಬಗ್ಗೆ ಟ್ವೀಟ್ ಮಾಡಿದ್ದರು. ಹಲವು ಮಾಧ್ಯಮಗಳು ವರದಿ ಪ್ರಕಟಿಸಿದ್ದವು.



ಇದು ಸುಳ್ಳು ಸುದ್ದಿ ಎಂದು ದಿ ಪ್ರಿಂಟ್, ದಿ ಲಾಜಿಕಲ್ ಇಂಡಿಯನ್, ಆಲ್ಟ್‌ನ್ಯೂಸ್, ಫ್ಯಾಕ್ಟ್ಲೀ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ಈ ಸುದ್ದಿ ಪ್ರಕಟವಾದ ನಂತರ ಹಲವು ಪತ್ರಕರ್ತರು ಆ ಯುವ ರೈತನನ್ನು ಭೇಟಿ ಮಾಡಲು ಯತ್ನಿಸಿದ್ದಾರೆ. ಆತನ ವಿಳಾಸವನ್ನೇ ತಪ್ಪಾಗಿ ನೀಡಲಾಗಿದೆ. ಆದರೆ ಅಂತಿಮವಾಗಿ ಆ ಯುವಕ ಸಿಕ್ಕಿದ್ದಾನೆ. ತಾನು ಬ್ಲ್ಯಾಕ್ ರೈಸ್ ಮತ್ತು ಗೋಧಿಯನ್ನು ಮಾತ್ರ ಬೆಳೆದಿದ್ದೇನೆ. ಹಾಪ್‌ಶೂಟ್ ಅನ್ನು ಬೆಳೆದಿಲ್ಲ ಎಂದು ಸ್ಪಷ್ಟಪಡಿಸಿದ್ದಾನೆ. ಬಿಹಾರದಲ್ಲಿ ಎಲ್ಲಿಯೂ ಹಾಪ್ ಶೂಟ್ ಬೆಳೆದಿಲ್ಲ ಎಂದು, ಅಲ್ಲಿನ ಕೃಷಿ ಇಲಾಖೆ ಸ್ಪಷ್ಟಪಡಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಕಾರಕ, ಪ್ರೇರಕ ಶಕ್ತಿಗಳು

ದೇವರ್ಕಳುದಿಸಿ ಮರೆಯಹರು; ದೇವತ್ವ ಚಿರ |
ಜಾವದಿನ ಬಂದು ಪೋಗುವುವು; ಕಾಲ ಚಿರ ||
ಜೀವದ ವ್ಯಕ್ತಿ ಸಾಯ್ವುದು; ಜೀವಸತ್ತ್ವ ಚಿರ |
ಭಾವಿಸಾ ಕೇವಲವ – ಮಂಕುತಿಮ್ಮ || 404 ||

ಪದ-ಅರ್ಥ: ದೇವರ್ಕಳುದಿಸಿ (ದೇವರುಗಳು) + ಉದಿಸಿ, ಮರೆಯಹರು (ಮರೆಯಾಗಿದ್ದಾರೆ), ಚಿರ = ಶಾಶ್ವತ, ಜಾವ = ಬೆಳಗು, ಪೋಗುವುವು = ಹೋಗುವುವು, ಕೇವಲವ = ಕೈವಲ್ಯವನ್ನು

ವಾಚ್ಯಾರ್ಥ: ದೇವರುಗಳು ಉದಿಸಿ ಮರೆಯಾಗುತ್ತಾರೆ ಆದರೆ ದೇವತ್ವ ಶಾಶ್ವತ. ಬೆಳಗು, ದಿನಗಳು ಬಂದು ಹೋಗುತ್ತವೆ ಆದರೆ ಕಾಲ ಶಾಶ್ವತವಾದದ್ದು. ಒಂದು ಜೀವವಿರುವ ವ್ಯಕ್ತಿ ಸಾಯುತ್ತದೆ ಆದರೆ ಜೀವಸತ್ವ ಶಾಶ್ವತ. ಈ ಅನಂತವಾದ ಸತ್ಯವನ್ನು ಚಿಂತಿಸು.

ವಿವರಣೆ: ಪ್ರಾಚೀನ ಕಾಲದಲ್ಲಿ ಪ್ರಕೃತಿಯ ಅದೃಶ್ಯ ಶಕ್ತಿಯನ್ನು ದೇವರೆಂದು ಕರೆದು, ಜನ ಆ ದೇವರುಗಳನ್ನೇ ಆಗೋಚರ ಶಕ್ತಿಯ ಸಂಕೇತಗಳನ್ನಾಗಿ ಪೂಜಿಸಿದರು. ಅಗ್ನಿ, ಆಕಾಶ, ಭೂಮಿ, ನೀರು, ವಾಯುಗಳೇ ದೇವರಾದವು. ನಿರಾಕಾರವನ್ನು ಕಲ್ಪಿಸಿ ಪೂಜೆ ಮಾಡಲು ಕಷ್ಟವೆಂದರಿತ ಮಾನವ, ತನ್ನ ಮಿತಿಯನ್ನು ಮೀರಿದ, ಕಲ್ಪನೆಗೆ ನಿಲುಕದ ಶಕ್ತಿಗಳಿಗೆ ರೂಪ ಕೊಟ್ಟ. ಆತ ಯಾವ ರೂಪ ಕೊಡಬಹುದಿತ್ತು? ಖ್ಯಾತ ನೋಬೆಲ್ ಪ್ರಶಸ್ತಿ ಪುರಸ್ಕೃತ, ಚಿಂತಕ ಡಾ. ಬರ್ಟ್ರಾಂಡ್ ರಸೆಲ್ ಹೇಳುತ್ತಾರೆ, 'ಒಂದು ಇರುವೆ ದೇವರನ್ನು ಕಲ್ಪಿಸುವುದಾದರೆ ಅದೊಂದು ಅತ್ಯಂತ ದೊಡ್ಡ ಇರುವೆಯಾಗಿರುತ್ತದೆ'. ಅಂತೆಯೇ ನಾವು ದೇವರಿಗೆ ಮನುಷ್ಯರೂಪ ಕಲ್ಪಿಸಿದೆವು. ಅವನು ಅನಂತ, ಅಸಾಧಾರಣ ಮತ್ತು ಶಾಶ್ವತನಾದ್ದರಿಂದ ಅವನಿಗೆ ವಿರಾಟ್ ರೂಪ ಕೊಟ್ಟೆವು. ಭಗವಂತನಿಗೆ ವಿಶ್ವವೇ ಕಣ್ಣು, ವಿಶ್ವವೇ ಮುಖ, ವಿಶ್ವವೇ ಬಾಹು, ವಿಶ್ವವೇ ಪಾದ. ಅವನು ಸರ್ವವ್ಯಾಪಿ. ಮುಂದೆ ಅವತಾರಗಳ ಕಲ್ಪನೆ ಬಂದಿತು. ಈ ಅವತಾರಗಳ ಕಲ್ಪನೆ ಜೀವದ ವಿಕಾಸದ ಹಂತಗಳು. ಮೊದಲು ಜೀವ ಹುಟ್ಟಿದ್ದು ನೀರಿನಲ್ಲಿ ಆದ್ದರಿಂದ ಮತ್ಸ್ಯಾವತಾರ, ನಂತರ ಅದು ನೆಲ-ನೀರು ಎರಡರಲ್ಲಿಯೂ ನೆಲಸಿತು, ಆದ್ದರಿಂದ ಕೂರ್ಮಾವತಾರ. ಆಮೇಲೆ ಅದು ಭೂಮಿಯ ಮೇಲೆ ಹೆಚ್ಚು ನೆಲೆಸಿತು. ಅದನ್ನು ವರಾಹವತಾರ ಎಂದೆವು.

ಹೀಗೆ ಜೀವವಿಕಾಸದ ಹಂತಗಳಲ್ಲಿ ಮನುಷ್ಯನ ಮನಸ್ಸು ಬೆಳೆಯುತ್ತ ಬೇರೆ ಬೇರೆ ದೇವರ ಕಲ್ಪನೆಗಳು ಬಂದವು. ನಂತರ ಮಹಾನ್ ಸಾಧಕರು ದೇವರಾದರು. ರಾಮ, ಕೃಷ್ಣ, ಪರಶುರಾಮ, ಬುದ್ಧ, ಮಹಾವೀರ, ಝುರತುಷ್ಟ್ರ, ಶಂಕರ, ಬಸವಣ್ಣ ಹೀಗೆ ದೇವರುಗಳ ಚಿಂತನೆ ಮುಂದುವರೆಯಿತು. ಕಗ್ಗ ಈ ಮಾತನ್ನು ಹೇಳುತ್ತದೆ. ಕಾಲಕಾಲಕ್ಕೆ ನಮ್ಮ ದೇವರುಗಳ ಕಲ್ಪನೆ ಬದಲಾಗುತ್ತ ಬಂದರೂ ದೇವತ್ವವೆಂಬುದು ಒಂದಿದೆ ಎಂಬುದನ್ನು ಮನುಷ್ಯ ಒಪ್ಪಿದ್ದಾನೆ. ನಮ್ಮ ಶಕ್ತಿಯ, ಚಿಂತನೆಯ ಮಿತಿಗಳನ್ನು ದಾಟಿದ ಮಹಾನ್ ಶಕ್ತಿಯೊಂದು ನಮ್ಮನ್ನು ಕಾಪಿಡುತ್ತದೆ ಎನ್ನುವ ನಂಬಿಕೆ ಮಾತ್ರ ಅನೂಚಾನವಾಗಿ ಬಂದು ಶಾಶ್ವತವಾಗಿದೆ. ದೇವರುಗಳು ಬದಲಾಗುತ್ತಾರೆ ಆದರೆ ದೇವತ್ವ ಶಾಶ್ವತ. ಅದರಂತೆ ಎಂದಿನಿಂದಲೂ ಋತುಗಳು ಬದಲಾಗುತ್ತವೆ, ಬೆಳಗು, ದಿನ, ರಾತ್ರಿಗಳು ಚಕ್ರದಂತೆ ಸುತ್ತುತ್ತವೆ. ಆದರೆ ಕಾಲ ಶಾಶ್ವತವಾಗಿದೆ. ವ್ಯಕ್ತಿಗಳು ಸಾಯುತ್ತಾರೆ. ಆದರೆ ಮಾನವ ಜನಾಂಗ ನಿಂತಿದೆ. ಅಂದರೆ ಸದಾಕಾಲ ಬದಲಾಗುವ ವಿಶ್ವದ ಹಿಂದೆ ಎಂದಿಗೂ ಬದಲಾಗದ, ಅನಂತವಾದ, ಕರ್ಮಾತೀತವಾದ, ಸರ್ವಶಕ್ತವಾದ, ಕೈವಲ್ಯವಿದೆ. ನಮ್ಮ ಚಿಂತನೆಯನ್ನು ಅದರೆಡೆಗೆ ತಿರುಗಿಸಬೇಕು. ❖

ದಿನ ಭವಿಷ್ಯ

ಬುಧವಾರ 7 ಏಪ್ರಿಲ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೇವತಿ ಏಕಾದಶೀ ಗಂ. 54-46 (ರಾ. 4-13) ಬುಧವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 57-19 (ಬೆ.ಝಾ. 5-14) ಸಾಧ್ಯ ನಾಮ ಯೋಗ ಗಂ 25-41 ಬವ ಕರಣ ಗಂ. 25-30 ವಿಷ ಗಂ. 7-10 ಅಮೃತ ಗಂ. 31-25 ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-15 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 2 7

ಮೇಷ: ಆರ್ಥಿಕ ವಿಷಯದಲ್ಲಿ ಸ್ವಲ್ಪಮಟ್ಟಿನ ಸುಧಾರಣೆ. ಶುಭಕಾರ್ಯಗಳಲ್ಲಿ ಯಶಸ್ಸು. ಕೆಲಸ ಕಾರ್ಯಗಳಲ್ಲಿ ಪ್ರಗತಿ. ಆರೋಗ್ಯದಲ್ಲಿಯೂ ಸುಧಾರಣೆ.

ವೃಷಭ: ನೀವು ಕೈಗೊಂಡಿರುವ ಕಾರ್ಯಗಳು ಪೂರ್ಣಗೊಳ್ಳಲಿದೆ. ವ್ಯವಹಾರದಲ್ಲಿ ಸ್ವಲ್ಪ ಮಟ್ಟದ ಚೇತರಿಕೆ. ಸರ್ಕಾರಿ ಕೆಲಸಗಳಲ್ಲಿದ್ದವರಿಗೆ ಹೆಚ್ಚಿನ ತೊಂದರೆ ತಾಪತ್ರಯಗಳು ಕಂಡುಬರುವ ಸಾಧ್ಯತೆ.

ಮಿಥುನ: ಬಂಧು ಮಿತ್ರರ ಸಹಾಯದಿಂದಾಗಿ ಕಾರ್ಯಗಳಲ್ಲಿ ಯಶಸ್ಸು. ಕೌಟುಂಬದಲ್ಲಿ ನೆಮ್ಮದಿ. ಆರೋಗ್ಯದಲ್ಲಿ ಸುಧಾರಣೆ. ಧನ ವ್ಯಯವಾಗುವ ಸಂಭವ.

ಕರ್ಕಾಟಕ: ಧರ್ಮಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆ. ಸಜ್ಜನರ ಸಹವಾಸದಿಂದಾಗಿ ನೆಮ್ಮದಿ. ವಸ್ತ್ರ ಒಡವೆಗಳನ್ನು ಪಡೆಯಲಿದ್ದೀರಿ. ವ್ಯಾಪಾರಸ್ಥರಿಗೆ ಹೆಚ್ಚಿನ ಲಾಭ. ಕಾರ್ಮಿಕ ವರ್ಗದವರಿಂದ ಅನುಕೂಲ.

ಸಿಂಹ: ಕಾರ್ಯಾನುಕೂಲವು ನಿಧಾನಗತಿಯಲ್ಲಿರುವುದು. ಬಂಧು ಮಿತ್ರರೊಂದಿಗೆ ಹೆಚ್ಚಿನ ಸಂಯಮ ವಹಿಸುವುದು ಉತ್ತಮ. ಸರ್ಕಾರಿ ನೌಕರರಿಗೆ ಅತಿಯಾದ ತೊಂದರೆ ತಾಪತ್ರಯಗಳು ಕಂಡುಬರುತ್ತಿದೆ.

ಕನ್ಯಾ: ನಿವೇಶನ ಅಥವಾ ಗೃಹ ಖರೀದಿ ಸಾಧ್ಯತೆ. ದೂರದ ಪ್ರಯಾಣ ಮಾಡುವ ಸಾಧ್ಯತೆ. ಮಕ್ಕಳ ಕಡೆಯಿಂದ ಸಿಹಿ ಸುದ್ದಿ. ಉನ್ನತ ಹುದ್ದೆಯಲ್ಲಿರುವವರಿಗೆ ಹೆಚ್ಚಿನ ಕೆಲಸದಿಂದ ಆಯಾಸ.

ತುಲಾ: ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ. ಆರೋಗ್ಯದಲ್ಲಿ ಸುಧಾರಣೆ. ಸಾರ್ವಜನಿಕ ಕ್ಷೇತ್ರದಲ್ಲಿ ಮನ್ನಣೆ. ಶುಭ ಕಾರ್ಯವೊಂದನ್ನು ನಿಶ್ಚಯಿಸಲಿದ್ದೀರಿ.

ವೃಶ್ಚಿಕ: ಸರ್ಕಾರಿ ನೌಕರಿಯಲ್ಲಿರುವವರಿಗೆ ಬಿಡುವಿಲ್ಲದ ತಿರುಗಾಟ. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ. ಆರೋಗ್ಯದಲ್ಲಿ ಸುಧಾರಣೆ ಜೊತೆಗೆ ಕಾಳಜಿಯೂ ಅಗತ್ಯ.

ಧನು: ವ್ಯಾಪಾರ ವ್ಯವಹಾರಗಳಲ್ಲಿ ನಿಧಾನಗತಿಯ ಪ್ರಗತಿ. ತಾಳ್ಮೆ ಮತ್ತು ಸಂಯಮವನ್ನು ರೂಪಿಸಿಕೊಳ್ಳುವುದು ಉತ್ತಮ. ಕುಟುಂಬದಲ್ಲಿ ಅಹಿತಕರ ಘಟನೆಗಳು ಸಂಭವಿಸಬಹುದು.

ಮಕರ: ಆರೋಗ್ಯ ಸಮಸ್ಯೆಗಳು ಪರಿಹಾರ ಕಾಣಲಿವೆ. ಬಂಧುಮಿತ್ರರ ಸಹಕಾರ. ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆ. ಮಾನಸಿಕ ಕಿರಿಕಿರಿಯುಂಟಾದೀತು.

ಕುಂಭ: ಸಜ್ಜನರ ಸಹಕಾರದಿಂದಾಗಿ ಕಾರ್ಯಗಳಲ್ಲಿ ಯಶಸ್ಸು. ಕುಟುಂಬದಲ್ಲಿ ನೆಮ್ಮದಿಯ ವಾತಾವರಣ. ಖರ್ಚು ವೆಚ್ಚಗಳ ಮೇಲೆ ನಿಗಾ ವಹಿಸುವುದು ಉತ್ತಮ. ಉನ್ನತ ಹುದ್ದೆಯಲ್ಲಿರುವವರಿಗೆ ಅತಿಯಾದ ಕಾರ್ಯಬಾಹುಳ್ಯ.

ಮೀನ: ವ್ಯಾಪಾರ ವ್ಯವಹಾರದಲ್ಲಿ ಅಧಿಕ ಪ್ರಗತಿ. ಕೆಲಸ ಕಾರ್ಯಗಳಲ್ಲಿ ನಿಧಾನಗತಿಯ ಯಶಸ್ಸು. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ. ಮಾನಸಿಕ ಚಿಂತೆ ದಾಯಾದಿ ಕಲಹಗಳು ದೂರವಾಗುವವು.

ನಿಮ್ಮ ಜನ್ಮದಿನ 7-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಯಶಸ್ಸಿಗಾಗಿ ಹೊಸ ಹೊಸ ಕಾರ್ಯತಂತ್ರಗಳನ್ನು ಹೆಣೆಯುವಿರಿ. ಅತಿಯಾದ ಕುತಂತ್ರ ಕುಟಿಲತೆಯಿಂದಾಗಿ ಸಮಾಜದ ಕೆಂಗಣ್ಣಿಗೆ ಗುರಿಯಾಗುವ ಸಾಧ್ಯತೆ. ಅನುಚಿತ ಸಂಪಾದನೆಯನ್ನು ಕಳೆದುಕೊಂಡು ಮಾನಹಾನಿಯನ್ನೂ ಅನುಭವಿಸಬೇಕಾದೀತು.

ಪದಬಂಧ 4560 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರೇಮಿಗಳ ಹುಸಿಜಗಳ (6)
4.ದ್ರವದಿಂದ ತುಂಬಿದುದು (4)
5.ಹಣ್ಣಿನ ಬಳಿಯಿರಿಸಿದ ಥಾಲು (3)
7.ಕೊನೆಗೆ ವರನಿದ್ದರೆ ಇದು ಸ್ಥಿರ (3)
10.ಭಾಗಲಬ್ಧ ಕಲಿಯುತ್ತಿರುವ ಜಿಪುಣ (3)
12.ಬಳ್ಳಿ ಇಲ್ಲಿ ಹಬ್ಬಿದೆ (3)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಕಣ್ಣಿಗೆ ಕಾಣುವ ಸಾಕ್ಷಿ (6)

ಮೇಲಿಂದ ಕೆಳಕ್ಕೆ
1.ಮಾಡಿದ ಕೆಲಸಕ್ಕೆ ದೊರೆತ ಲಾಭ (4)
2.ಹತ್ತಿರದಲ್ಲೇ ಪ್ರತ್ಯಕ್ಷನಾಗಿರುವ ಶಿವ (2)
3.ಆಯಾಳು ಹಿಡಿದಿರುವ ಸೂಜಿಗಲ್ಲು (4)
6.ಬೈರಾಗಿಗಳು ಬಳಸುವ ನೀರಿನ ಪಾತ್ರೆ (4)
7.ಈತ ಪ್ರತಿಷ್ಠಾಪಿಸುವವನು (4)
8.ನೆತ್ತರು ಸುರಿಯುವಿಕೆ (4)
9.ಹೂವಿನ ಶರವಿದು (4)
11.ವಿಷ್ಣುವಿನ ಮುಂದಿರಿಸಿದ ಅಗಲವಾದ ತಟ್ಟೆ (4)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)

1					2	■	■	3
	■	■	■	■	4			
5		6	■	■	■	■	■	
	■		■	7		8	■	
■	■		■		■		■	■
9	■	10			■		■	11
	■	■	■	■	■	12		
13			14	■	■	■	■	
	■	■	15					

4559ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸ್ಥಾನಪಲ್ಲಟ 4.ಗರ್ಜನೆ 5.ಗಯ್ಯಾಳಿ 6.ಪುಕಾರು 7.ಕೆಸರು 9.ಮಂಠ 10.ನಾಕ 12.ಸೆರಗು 14.ಪದಕ 15.ಜಠರ 16.ಆಳ್ವೇರಿ 17.ಮರಣಕಾಲ

ಮೇಲಿಂದ ಕೆಳಕ್ಕೆ: 1.ಸ್ಥಾನಭ್ರಷ್ಟ 2.ಪಠ್ಯಪುಸ್ತಕ 3.ಟಗರು 4.ಗಳಿಕೆ 8.ಸಭಿಕ 9.ಮಂದಿರ 10.ನಾಮಕರಣ 11.ಇಳಿಗಾಲ 13.ಗುಜರಿ 14.ಪರಮ

ಸುಡೊಕು 4946


6						7		8
				7	1		4	
1		7		4				6
		1				9		7
			3	9	7			4
7		9				8		
5				6		4		
4					3		2	1
	6	2		8	4			5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4945 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,638
ಇಂದಿನ ಅಂತ್ಯ	14,683
▲	45
ದಿನದ ಗರಿಷ್ಠ	14,779

ವಿನಿಮಯ ದರ

$ ಡಾಲರ್	73.42
£ ಪೌಂಡ್	101.57
€ ಯುರೊ	86.74
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹440
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1320 (1280)
ಸೂರ್ಯಕಾಂತಿ (ರಿಫೈನ್ಡ್)	₹1660 (1710)
ಪಾಮೋಲಿನ್	₹1235 (1235)

ಕೊಬ್ಬರಿ ಧಾರಣೆ

ಅರಸೀಕೆರೆ	₹14000-15075
ಮಂಗಳೂರು	₹8000-11500
ತುರುವೇಕೆರೆ	₹16000-16000

8ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಹೆಚ್. ಹೆಚ್. ಮುನಿಸ್ವಾಮಿ ಗೌಡ
DGM (Rtd)
(Karnataka State Agro Corn Products Ltd, Hebbal, Bangalore)
ಜನನ: 3-10-1937 ಮರಣ: 7-04-2013
ಇಂತಿ ದುಃಖತಪ್ತರು – ಕುಟುಂಬದವರು

OBITUARY



Pratima Devi Singh
W/o. Late D.Shankar Singh
DOB:9.4.1933 DOD:6.4.2021
"Gone from our sight, but never from our Hearts"
From,
S V.Rajendra Singh (babu) and family
Sangram Singh (late) and family
Jairaj Singh and family
Vijayalakshmi Singh and family

ನಿಧನ



ಶ್ರೀಮತಿ ಕಮಲಮ್ಮ
(ದಿ. ಶ್ರೀ ನಾಗಲಿಂಗೇಗೌಡರ ಧರ್ಮಪತ್ನಿ)
ಬಸಪ್ಪನ ದೊಡ್ಡಿ, ಕೊಳ್ಳೇಗಾಲ ತಾಲ್ಲೂಕ್
ಇವರು ದಿನಾಂಕ 31-03-2021, ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಇಂತಿ ದುಃಖತಪ್ತ ಕುಟುಂಬ ವರ್ಗದವರು
ನಂ. 381, 11ನೇ ಅಡ್ಡರಸ್ತೆ, 20ನೇ ಮೈನ್, ಜೆ.ಪಿ. ನಗರ 2ನೇ ಹಂತ, ಬೆಂಗಳೂರು.
ಮೊ. 9880606592

IN LOVING MEMORY OF



P.RAJA REDDY (DRLS)
1952 -2021
Paying homage to the departed soul on 7th April 2021 at 12.30 p.m
VENUE : # 6, 60ft. Road, Amarjyothi Layout Sanjay Nagar, Bangalore -560094
Contact No : 9900095775, 9916265775

ಮುಂಬೈ ಧಾರಣೆ

ಶೇಂಗಾ

6-4-2021

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10500-10550
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	1300 (1280)
ಪಾಮ್ ವಾರದ ಡೆಲಿವರಿ	1233 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1660 (1650)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	45,300(45,050)
ಬೆಳ್ಳಿ ಕೆ.ಜಿ	65,400 (64,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮೇ ತಿಂಗಳಿನಲ್ಲಿ ಶೇ 36ರಷ್ಟು ಕಡಿಮೆ ಪ್ರಮಾಣದ ಖರೀದಿ: ಮೂಲಗಳ ಮಾಹಿತಿ

ಸೌದಿ ಕಚ್ಚಾತೈಲ ಖರೀದಿಗೆ ಕತ್ತರಿ

ನವದೆಹಲಿ/ಲಂಡನ್ (ರಾಯಿಟರ್ಸ್): ದೇಶದ ತೈಲ ಸಂಸ್ಕರಣ ಕಂಪನಿಗಳು ಸೌದಿ ಅರೇಬಿಯಾದಿಂದ ಸದ್ಯ ಖರೀದಿಸುತ್ತಿರುವ ಕಚ್ಚಾತೈಲದ ಪ್ರಮಾಣಕ್ಕೆ ಹೋಲಿಸಿದರೆ ಮೇ ತಿಂಗಳಲ್ಲಿ ಶೇಕಡ 36ರಷ್ಟು ಕಡಿಮೆ ತೈಲ ಖರೀದಿ ಮಾಡಲಿವೆ ಎಂದು ಮೂಲಗಳು ಹೇಳಿವೆ.

ಈ ಹಿಂದೆ ಯೋಜಿಸಲಾದ 1.08 ಕೋಟಿ ಬ್ಯಾರಲ್‌ಗೆ ಹೋಲಿಸಿದರೆ, ಮೇ ತಿಂಗಳಲ್ಲಿ 95 ಲಕ್ಷ ಬ್ಯಾರಲ್ ತೈಲವನ್ನು ಮಾತ್ರ ಸೌದಿಯಿಂದ ಖರೀದಿಸಲು ಕಂಪನಿಗಳು ನಿರ್ಧರಿಸಿವೆ ಎಂದು ಮೂಲಗಳು ಮಾಹಿತಿ ನೀಡಿವೆ. ಈ ಕುರಿತು ಭಾರತದ ಕಂಪನಿಗಳು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಸೌದಿ ಆರಾಮ್ಕೊ ಕಂಪನಿಯು ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಕೆಮಿಕಲ್ ಲಿಮಿಟೆಡ್ ಕಂಪನಿಗಳು ಒಂದು ತಿಂಗಳಿಗೆ ಸೌದಿಯಿಂದ ಸಾಮಾನ್ಯವಾಗಿ 1.48 ಕೋಟಿ ಬ್ಯಾರಲ್ ತೈಲ ಖರೀದಿಸುತ್ತವೆ.

ತೈಲ ಉತ್ಪಾದನೆಯನ್ನು ಕ್ರಮೇಣ ಹೆಚ್ಚಿಸಲು ಒಪೆಕ್ ಮತ್ತು ಅದರ ಮಿತ್ರರಾಷ್ಟ್ರಗಳು ಕಳೆದ ವಾರ ಒಪ್ಪಿಗೆ ನೀಡಿವೆ. ಹೀಗಿದ್ದರೂ ಕಚ್ಚಾ ತೈಲ ದರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಸೌದಿ ಅರೇಬಿಯಾ ಮಧ್ಯೆ ಅಸಮಾಧಾನ ಮೂಡಿರುವ ಕಾರಣ ಭಾರತವು ಈ ಕ್ರಮ ಕೈಗೊಂಡಿದೆ.

ಮುಖ್ಯಾಂಶಗಳು
- ಖರೀದಿ ಪ್ರಮಾಣ ಶೇ 36ರಷ್ಟು ಇಳಿಕೆಗೆ ನಿರ್ಧಾರ
- ಬ್ರೆಂಟ್ ತೈಲ ದರ ಶೇ 2.43ರಷ್ಟು ಏರಿಕೆ



ದೇಶದ ಆರ್ಥಿಕತೆಯು ಕೋವಿಡ್–19 ಸಾಂಕ್ರಾಮಿಕದ ಬಿಕ್ಕಟ್ಟಿನಿಂದ ಚೇತರಿಕೆ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವಾಗ ಸೌದಿ ಮತ್ತು ಇತರೆ ತೈಲ ಉತ್ಪಾದನಾ ದೇಶಗಳು ಉತ್ಪಾದನೆ ತಗ್ಗಿಸುವ ಮೂಲಕ ಬೆಲೆ ಏರಿಕೆ ಆಗುವಂತೆ ಮಾಡಿವೆ ಎಂದು ಕೇಂದ್ರ ಸರ್ಕಾರ ಆರೋಪಿಸಿದೆ.

ಭಾರತದ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಮತ್ತು ಸೌದಿ ಇಂಧನ ಸಚಿವ ರಾಜಕುಮಾರ ಅಬ್ದುಲ್‌ಅಜೀಜ್ ಬಿನ್ ಸಲ್ಮಾನ್ ಅವರು ಶನಿವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ. ಆ ಬಳಿಕ ಕಡಿಮೆ ಪ್ರಮಾಣದಲ್ಲಿ ತೈಲ ಖರೀದಿಗೆ ನಿರ್ಧರಿಸಲಾಯಿತು. ಇಬ್ಬರು ಸಚಿವರ ಮಧ್ಯೆ ಯಾವೆಲ್ಲಾ ವಿಷಯಗಳ ಕುರಿತು ಮಾತುಕತೆ ನಡೆದಿದೆ ಎನ್ನುವುದು ಗೊತ್ತಾಗಿಲ್ಲ. ಶನಿವಾರದ ಮಾತುಕತೆ ಕುರಿತು ಅರಿತಿರುವ ಮೂಲಗಳ ಪ್ರಕಾರ ಮಾತುಕತೆಯು ಸಕಾರಾತ್ಮಕವಾಗಿತ್ತು.

ಸೌದಿ ಆರಾಮ್ಕೊ ಕಂಪನಿಯು ಏಷ್ಯಾದ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ತನ್ನ ತೈಲದ ಅಧಿಕೃತ ಮಾರಾಟ ಬೆಲೆಯನ್ನು (ಒಎಸ್‌ಪಿ) ಭಾನುವಾರ ಹೆಚ್ಚಿಸಿದೆ. ಆದರೆ, ಯುರೋಪ್ ಮತ್ತು ಅಮೆರಿಕದ ಮಾರುಕಟ್ಟೆಗಳಲ್ಲಿ ಬೆಲೆ ಇಳಿಕೆ ಮಾಡಿದೆ. ಏಷ್ಯಾದ ಮಾರುಕಟ್ಟೆಗೆ ಒಎಸ್‌ಪಿ ಹೆಚ್ಚಿಸಿ ಇತರೆ ಮಾರುಕಟ್ಟೆಗಳಿಗೆ ಒಎಸ್‌ಪಿ ಕಡಿತ ಮಾಡಿದ್ದು ಅಚ್ಚರಿ ಮೂಡಿಸಿದೆ ಎಂದು ಮೂಲಗಳು ಹೇಳಿವೆ.

ಏರ್‌ಟೆಲ್ ತರಂಗಾಂತರ ಮಾರಾಟ

ನವದೆಹಲಿ (ಪಿಟಿಐ): ಆಂಧ್ರಪ್ರದೇಶ, ದೆಹಲಿ ಮತ್ತು ಮುಂಬೈ ಟೆಲಿಕಾಂ ವೃತ್ತಗಳಲ್ಲಿ ಭಾರ್ತಿ ಏರ್‌ಟೆಲ್ ಕಂಪನಿಯಿಂದ ಕೆಲವು ತರಂಗಾಂತರಗಳನ್ನು ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ರಿಲಯನ್ಸ್ ಜಿಯೊ ಕಂಪನಿಯು ಮಂಗಳವಾರ ತಿಳಿಸಿದೆ. ಈ ಖರೀದಿಯ ಮೊತ್ತ ₹ 1,497 ಕೋಟಿ. 'ನಾವು ಬಳಕೆ ಮಾಡಿಕೊಳ್ಳದಿದ್ದ ತರಂಗಾಂತರಕ್ಕೆ (ಸ್ಪೆಕ್ಟ್ರಂ) ಒಂದು ಮೌಲ್ಯ ಕಂಡುಕೊಳ್ಳಲು ನಮಗೆ ಈ ಮಾರಾಟ ಒಪ್ಪಂದದಿಂದ ಸಾಧ್ಯವಾಗಿದೆ' ಎಂದು ಭಾರ್ತಿ ಏರ್‌ಟೆಲ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಗೋಪಾಲ್ ವಿಟ್ಟಲ್ ಹೇಳಿದ್ದಾರೆ.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ರಾಜಗೋಪಾಲ್, ಜೆ.ಪಿ. ನಗರ

- **ಪ್ರಶ್ನೆ: ನಾನು ಐ.ಟಿ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತೇನೆ. ನನ್ನ ತಂದೆಗೆ 84 ವರ್ಷ ವಯಸ್ಸು. ಅವರು ಸ್ವಂತ ಹಣದಿಂದ ಕೊಂಡ ನಿವೇಶನ–ಮನೆ ಮಾರಾಟ ಮಾಡಿದಲ್ಲಿ ಅವರು ಅತೀ ಹಿರಿಯ ನಾಗರಿಕರಾದ್ದರಿಂದ ಅವರಿಗೆ ಬಂಡವಾಳ ಗಳಿಕೆ ತೆರಿಗೆ ವಿನಾಯಿತಿ ಇದೆಯೇ? ಮಾರಾಟ ಮಾಡಿದ ಹಣದಿಂದ ನನ್ನ ಹೆಸರಿನಲ್ಲಿ ಇನ್ನೊಂದು ಮನೆ ಕೊಳ್ಳಬಹುದೇ? ತಂದೆಯವರು 1995ರಲ್ಲಿ ₹ 5 ಲಕ್ಷಕ್ಕೆ ಕೊಂಡ ಆಸ್ತಿ ಇದು. ತೆರಿಗೆ ಬಾರದಿರುವಂತೆ ಸಲಹೆ ನೀಡಿ.**

ಉತ್ತರ: ಬಂಡವಾಳ ವೃದ್ಧಿ ತೆರಿಗೆಯಲ್ಲಿ ಹಿರಿಯ ಅಥವಾ ಅತೀ ಹಿರಿಯ ನಾಗರಿಕರಿಗೆ ವಿನಾಯಿತಿ ಇಲ್ಲ. ನಿಮ್ಮ ತಂದೆಯವರು 1995ರಲ್ಲಿ ಆಸ್ತಿ ಕೊಂಡಿದ್ದಾರೆ. ಹೀಗಾಗಿ 2020ರ ಏಪ್ರಿಲ್ 1ರ ಸರ್ಕಾರಿ ಬೆಲೆಯ ಮೇಲೆ ಆಸ್ತಿ ಬೆಲೆ ನಿರ್ಧರಿಸಿ. 2021ರ ಏಪ್ರಿಲ್ 1ರಿಂದ ಮಾರಾಟ ಮಾಡುವ ವರ್ಷಗಳ ಅಂತರಕ್ಕೆ ಖರೀದಿಸಿದ ಮೊತ್ತದ ಹಣದುಬ್ಬರ ಲೆಕ್ಕಹಾಕಿ, ಈಗ ಮಾರಾಟದಿಂದ ಬರುವ ಮೊತ್ತದಲ್ಲಿ ಅದನ್ನು ಕಳೆದು ಬಂಡವಾಳ ವೃದ್ಧಿ ತೆರಿಗೆ ಕೊಡಬಹುದು. ನಿಮ್ಮ ತಂದೆಯವರು ಮಾರಾಟ ಮಾಡಿ ಬರುವ ಹಣದಿಂದ ನಿಮ್ಮ ಹೆಸರಿನಲ್ಲಿ ಮನೆ ಕೊಳ್ಳಲು ಬರುವುದಿಲ್ಲ. ಅವರ ಹೆಸರಿನಲ್ಲಿಯೇ ಕೊಳ್ಳಬೇಕು. ತೆರಿಗೆ ಉಳಿಸಲು ಸೆಕ್ಷನ್ 54ಇಸಿ ಆಧಾರದ ಮೇಲೆ ಗರಿಷ್ಠ ₹ 50 ಲಕ್ಷ ಎನ್‌ಎಚ್‌ಐಎ–ಆರ್‌ಇಸಿ ಬಾಂಡುಗಳಲ್ಲಿ 5 ವರ್ಷಗಳ ಅವಧಿಗೆ ಇರಿಸಬಹುದು. ಏನಾದರೂ ಗೊಂದಲ ಇದ್ದರೆ ನನಗೆ ಕರೆ ಮಾಡಿರಿ.

ರಾಘವೇಂದ್ರ ಮಯ್ಯ ಯು. ಬೆಂಗಳೂರು

- **ಪ್ರಶ್ನೆ: ಪಿಪಿಎಫ್ ವಿಚಾರವಾಗಿ ಈ ವರ್ಷದ ಬಜೆಟ್‌ನಲ್ಲಿ ತಿಳಿಸಿದ್ದಕ್ಕೆ ಸಂಬಂಧಿಸಿದಂತೆ ನನ್ನ ಪ್ರಶ್ನೆ: ನಾನು 2020–21ರಲ್ಲಿ ₹ 3.50 ಲಕ್ಷ ಪಿಪಿಎಫ್‌ಗೆ ಕಟ್ಟಿದರೆ 2021–22ರ ಆರ್ಥಿಕ ವರ್ಷದಲ್ಲಿ ₹ 1 ಲಕ್ಷಕ್ಕೆ ತೆರಿಗೆ ವಿಧಿಸುವರೇ? ಹಾಗೂ ಮುಂದಿನ ವರ್ಷಗಳಲ್ಲಿಯೂ ತೆರಿಗೆ ಕೊಡಬೇಕಾಗುತ್ತದೆಯೇ ತಿಳಿಸಿ. ಇನ್ನೊಂದು ಪ್ರಶ್ನೆ ಪಿಪಿಎಫ್‌ಗೆ ವಾರ್ಷಿಕ ಹಣ ಕಟ್ಟದಿರುವಲ್ಲಿ ಅಂದರೆ ನಾನು ಉದ್ಯೋಗ ನಿಲ್ಲಿಸಿ ಪಿಪಿಎಫ್‌ಗೆ ಹಣ ಕಟ್ಟದೇ ಹಣ ಅಲ್ಲಿಯೇ ಬಿಟ್ಟರೆ ಪಿಪಿಎಫ್ ಬಡ್ಡಿಗೆ ತೆರಿಗೆ ವಿಧಿಸುವರೇ ತಿಳಿಸಿ.**

ಉತ್ತರ: ಇದುವರೆಗೆ ಸೆಕ್ಷನ್ 10 (II) ಆಧಾರದ ಮೇಲೆ ಪಿಎಫ್ ಸೌಲಭ್ಯ ಇರುವ ನೌಕರರು ಕಟ್ಟಬೇಕಾದ ಕಂತಿಗಿಂತ ಹೆಚ್ಚಿಗೆ ಹಣ ತುಂಬುತ್ತಿದ್ದಲ್ಲಿ ಅಂತಹ ಮೊತ್ತದಿಂದ ಬರುವ ಬಡ್ಡಿ ಆದಾಯಕ್ಕೆ ತೆರಿಗೆ ವಿನಾಯಿತಿ ಇತ್ತು. ಈ ವರ್ಷದ ಬಜೆಟ್‌ನಲ್ಲಿ ತಿಳಿಸಿದಂತೆ ಇನ್ನುಮುಂದೆ ಪಿಎಫ್ ಖಾತೆಗೆ ನೌಕರರ ಕಡೆಯಿಂದ ಜಮಾ ಆಗುವ ವಾರ್ಷಿಕ ₹ 2.50 ಲಕ್ಷದವರೆಗಿನ ಮೊತ್ತದ ಮೇಲಿನ ಬಡ್ಡಿಗೆ ಮಾತ್ರ ತೆರಿಗೆ ವಿನಾಯಿತಿ ಇರಲಿದೆ. ಕಂಪನಿ ಕಡೆಯಿಂದ ಕೊಡುಗೆ ಇಲ್ಲದಿರುವಲ್ಲಿ ಅಂತಹ ನೌಕರರಿಂದ ಜಮಾ ಆಗುವ ₹ 5 ಲಕ್ಷದವರೆಗಿನ ಕೊಡುಗೆಯ ಮೇಲಿನ ಬಡ್ಡಿಗೆ ತೆರಿಗೆ ವಿನಾಯಿತಿ ಇರುತ್ತದೆ. ನಿಮ್ಮ ಇನ್ನೊಂದು ಪ್ರಶ್ನೆ; ಪಿಪಿಎಫ್‌ಗೆ ವಾರ್ಷಿಕ ಕನಿಷ್ಠ ಕಂತು ₹ 500 ಮಾತ್ರ. ಉದ್ಯೋಗ ಇರಲಿ ಇಲ್ಲದಿರಲಿ ₹ 500 ವಾರ್ಷಿಕವಾಗಿ ತುಂಬಿ. ಇಲ್ಲಿ ಬರುವ ಬಡ್ಡಿ ಆದಾಯ ತೆರಿಗೆ ಮುಕ್ತವಾಗಿದೆ.

ಹೆಸರು ಬೇಡ, ಹೊಸಪೇಟೆ

- **ಪ್ರಶ್ನೆ: ನಾನು ನಿವೃತ್ತ ನೌಕರ. ನನ್ನ ಮಗ ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಆರು ತಿಂಗಳ ಹಿಂದೆ ಕೆಲಸ ಕಳೆದುಕೊಂಡಿದ್ದಾನೆ. ನನ್ನ ಮೊಮ್ಮಗ ದ್ವಿತೀಯ ಪಿಯು ಓದುತ್ತಿದ್ದು, ಈ ವರ್ಷ ಎಂಬಿಬಿಎಸ್ ಓದಲು ಬಯಸಿದ್ದಾನೆ. ಮೊಮ್ಮಗನ ಸಲುವಾಗಿ ಬ್ಯಾಂಕ್‌ನಲ್ಲಿ ಶಿಕ್ಷಣ ಸಾಲ ಪಡೆಯುವುದಾದರೆ ನಮಗೆ ಸದ್ಯ ಸಾಲದ ಕಂತು ಕಟ್ಟುವ ಸಾಮರ್ಥ್ಯವಿಲ್ಲ. ಈ ವಿಚಾರದಲ್ಲಿ ಮಾರ್ಗದರ್ಶನ ಮಾಡಿ.**

ಉತ್ತರ: ಸಾಲ ಪಡೆದ ತಕ್ಷಣ ಶಿಕ್ಷಣ ಸಾಲದ ಕಂತು ತುಂಬುವ ಅವಶ್ಯವಿಲ್ಲ. ವಿದ್ಯಾರ್ಥಿಯ ಅಧ್ಯಯನದ ಕೋರ್ಸಿನ ಅವಧಿ ಹಾಗೂ ಒಂದು ವರ್ಷ ಅಥವಾ ಕೆಲಸಕ್ಕೆ ಸೇರಿದ ಆರು ತಿಂಗಳು, ಇವುಗಳಲ್ಲಿ ಯಾವುದು ಮೊದಲೋ ಅದನ್ನು ಆರಿಸಿಕೊಳ್ಳಬೇಕು. ಕೇಂದ್ರ ಸರ್ಕಾರ 2009ರ ಏಪ್ರಿಲ್ 1ರಿಂದ ಬಡ್ಡಿ ಅನುದಾನಿತ ಶಿಕ್ಷಣ ಸಾಲವನ್ನು (Interest subsidy education loan) ಜಾತಿ, ಪಂಗಡ ಅಥವಾ ಇನ್ನಿತರ ನಿರ್ಬಂಧಗಳಿಲ್ಲದೇ ನೀಡುತ್ತಿದೆ. ಆರ್ಥಿಕವಾಗಿ ಹಿಂದುಳಿದ ಕುಟುಂಬದಲ್ಲಿ ಜನಿಸಿದ ಮಕ್ಕಳ ಹೆತ್ತವರ ವಾರ್ಷಿಕ ಆದಾಯ ₹ 4.50 ಲಕ್ಷದೊಳಗೆ ಇದ್ದರೆ ಬ್ಯಾಂಕುಗಳಲ್ಲಿ ಈ ಸಾಲ ದೊರೆಯಲಿದೆ. ಈ ಸಾಲ ವೃತ್ತಿಪರ ಕೋರ್ಸ್‌ಗಳಿಗೆ ಮಾತ್ರ ಸೀಮಿತ. ನಿಮ್ಮ ಮೊಮ್ಮಗ ದ್ವಿತೀಯ ಪಿಯು ಪಾಸಾಗಿ ನೀಟ್ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಪಡೆದು ಎಂಬಿಬಿಎಸ್ ಸೇರಲಿ ಎಂದು ಆಶಿಸುತ್ತೇನೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಭಾರತದ ಬೆಳವಣಿಗೆ ಈ ವರ್ಷ ಶೇ12.5ರಷ್ಟು: ಐಎಂಎಫ್

ವಾಷಿಂಗ್ಟನ್ (ಪಿಟಿಐ): 2021ರಲ್ಲಿ ಭಾರತದ ಅರ್ಥ ವ್ಯವಸ್ಥೆಯು ಶೇಕಡ 12.5ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜಿಸಿದೆ. ಇದು ಚೀನಾ ಸಾಧಿಸಲಿರುವ ಬೆಳವಣಿಗೆ ಪ್ರಮಾಣಕ್ಕಿಂತ ಹೆಚ್ಚು.

2022ರಲ್ಲಿ ಭಾರತದ ಅರ್ಥ ವ್ಯವಸ್ಥೆಯು ಶೇ 6.9ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ಸಂಸ್ಥೆಯು ತನ್ನ ವಾರ್ಷಿಕ 'ವಿಶ್ವ ಆರ್ಥಿಕ ಮುನ್ನೋಟ' ವರದಿಯಲ್ಲಿ ಹೇಳಿದೆ. 2021ರಲ್ಲಿ ಚೀನಾದ ಬೆಳವಣಿಗೆ ಶೇ 8.6ರಷ್ಟು, 2022ರಲ್ಲಿ ಶೇ 5.6ರಷ್ಟು ಇರಲಿದೆ ಎಂದು ಅದು ಅಂದಾಜಿಸಿದೆ.

'ಜಾಗತಿಕ ಅರ್ಥ ವ್ಯವಸ್ಥೆಯು 2021ರಲ್ಲಿ ಶೇ 6ರಷ್ಟು ಹಾಗೂ 2022ರಲ್ಲಿ ಶೇ 4.4ರಷ್ಟು ಬೆಳವಣಿಗೆ ಕಾಣಲಿದೆ ಎಂಬುದು ನಮ್ಮ ಅಂದಾಜು' ಎಂದು ಐಎಂಎಫ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಹೇಳಿದ್ದಾರೆ.

'ಸಾಂಕ್ರಾಮಿಕವನ್ನು ನಾವು ಇನ್ನೂ ಸೋಲಿಸಿ ಆಗಿಲ್ಲ. ಕೋವಿಡ್ ಪ್ರಕರಣಗಳು ಹಲವು ದೇಶಗಳಲ್ಲಿ ಹೆಚ್ಚಾಗುತ್ತಿವೆ. ಈಗಿನ ಸಂದರ್ಭದಲ್ಲಿ ಆರೋಗ್ಯ ಬಿಕ್ಕಟ್ಟಿನಿಂದ ಪಾರಾಗುವುದಕ್ಕೆ ಆದ್ಯತೆ ಇರಬೇಕು. ಆರೋಗ್ಯ ಸೇವೆಗಳ ಮೇಲೆ, ಲಸಿಕೆ ನೀಡುವುದರ ಮೇಲೆ, ಚಿಕಿತ್ಸೆಗೆ ಹಾಗೂ ಆರೋಗ್ಯ ಸೇವಾ ಮೂಲ ಸೌಕರ್ಯದ ಮೇಲೆ ಹೂಡಿಕೆ ಹೆಚ್ಚಾಗಬೇಕು' ಎಂದು ಗೀತಾ ಅವರು ತಮ್ಮ ಬ್ಲಾಗ್‌ನಲ್ಲಿ ಬರೆದಿದ್ದಾರೆ.

100 ಬಿಲಿಯನ್ ಡಾಲರ್ ದಾಟಿದ ಅದಾನಿ ಸಮೂಹದ ಮಾರುಕಟ್ಟೆ ಮೌಲ್ಯ

ಮುಂಬೈ (ಪಿಟಿಐ): ಗೌತಮ್ ಅದಾನಿ ಮಾಲೀಕತ್ವದ ಅದಾನಿ ಸಮೂಹವು 100 ಬಿಲಿಯನ್ ಡಾಲರ್‌ಗಿಂತ (₹ 7.35 ಲಕ್ಷ ಕೋಟಿ) ಹೆಚ್ಚಿನ ಮಾರುಕಟ್ಟೆ ಬಂಡವಾಳ ಹೊಂದಿರುವ ಭಾರತದ ಮೂರನೆಯ ಉದ್ಯಮ ಸಮೂಹ ಎಂಬ ಹೆಗ್ಗಳಿಕೆಗೆ ಮಂಗಳವಾರ ಪಾತ್ರವಾಯಿತು.

ಅದಾನಿ ಸಮೂಹದ, ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಆರು ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳವು ಮಂಗಳವಾರದ ವಹಿವಾಟಿನ ಅಂತ್ಯಕ್ಕೆ ₹ 7.84 ಲಕ್ಷ ಕೋಟಿ (106.8 ಬಿಲಿಯನ್ ಡಾಲರ್) ಆಗಿತ್ತು.

ಟಾಟಾ ಸಮೂಹ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ನಂತರ, 100 ಬಿಲಿಯನ್ ಡಾಲರ್‌ಗಿಂತ ಹೆಚ್ಚಿನ ಮಾರುಕಟ್ಟೆ ಬಂಡವಾಳ ಹೊಂದಿರುವ ಭಾರತದ ಮೂರನೆಯ ಉದ್ಯಮ ಸಮೂಹ ಅದಾನಿ ಅವರದ್ದು. ಗಣಿ, ಬಂದರು, ವಿದ್ಯುತ್ ಉತ್ಪಾದನಾ ಕೇಂದ್ರ, ವಿಮಾನ ನಿಲ್ದಾಣ, ದತ್ತಾಂಶ ಕೇಂದ್ರ, ರಕ್ಷಣೆ ಸೇರಿದಂತೆ ಹಲವು ಉದ್ಯಮ ವಲಯಗಳಲ್ಲಿ ಅದಾನಿ ಸಮೂಹದ ಚಟುವಟಿಕೆಗಳು ವಿಸ್ತರಿಸಿವೆ.

ಟಾಟಾ ಸಮೂಹದ ಈಗಿನ ಮಾರುಕಟ್ಟೆ ಬಂಡವಾಳ ಮೌಲ್ಯವು ಅಂದಾಜು 17.78 ಲಕ್ಷ ಕೋಟಿ (242 ಬಿಲಿಯನ್ ಡಾಲರ್), ರಿಲಯನ್ಸ್ ಇಂಡಸ್ಟ್ರೀಸ್‌ನ ಮಾರುಕಟ್ಟೆ ಮೌಲ್ಯ ₹ 12.57 ಲಕ್ಷ ಕೋಟಿ (171 ಬಿಲಿಯನ್ ಡಾಲರ್).

ಶ್ರೀಲಂಕಾ: ಬುದ್ಧನ ಪ್ರತಿಮೆ ಧ್ವಂಸಗೊಳಿಸಿದ್ದ ಆರೋಪಿ ಸಾವು

ಕೊಲಂಬೊ: 'ಶ್ರೀಲಂಕಾದ ವಾಯವ್ಯ ಪ್ರಾಂತ್ಯದಲ್ಲಿ ಬುದ್ಧನ ಪ್ರತಿಮೆಗಳಿಗೆ ಹಾನಿ ಮಾಡಿದ ಆರೋಪದ ಮೇಲೆ ಪೊಲೀಸರ ವಶದಲ್ಲಿದ್ದ 45 ವರ್ಷದ ಭಾರತೀಯ ಪ್ರಜೆಯೊಬ್ಬರು ಉಸಿರಾಟದ ಸಮಸ್ಯೆಯಿಂದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಜೈಲಿನ ಅಧಿಕಾರಿಗಳು ತಿಳಿಸಿದ್ದಾರೆ.

ವಾಯವ್ಯ ಪ್ರಾಂತ್ಯದ ಕುಲಿಯ ಪಿಟಿಯಾ ಪಟ್ಟಣದಲ್ಲಿ ಬುದ್ಧನ ಪ್ರತಿಮೆಗಳಿಗೆ ಹಾನಿ ಮಾಡಿದ ಆರೋಪದಲ್ಲಿ ಭಾರತೀಯ ಪ್ರಜೆಯನ್ನು ಮಾರ್ಚ್ 18ರಂದು ಪೊಲೀಸರು ಬಂಧಿಸಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	395

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	23500-41000
ಹಳತು	42500-50500

ಸಿದ್ದಾಪುರ

ಬಿಳಿಗೋಟು	23890-31699
ಚಾಲಿ	35091-38009
ಕೋಕ	17199-32108
ಕೆಂಪುಗೋಟು	24599-29089
ರಾಶಿ	38689-42009
ತಟ್ಟಿಬೆಟ್ಟೆ	33019-39899

ಯಲ್ಲಾಪುರ

ಬಿಳಿಗೋಟು	24611-31810
ಚಾಲಿ	32131-38399
ಕೋಕ	19009-39499
ಕೆಂಪುಗೋಟು	28000-31505
ರಾಶಿ	39899-44299
ತಟ್ಟಿಬೆಟ್ಟೆ	33699-39169

ಶಿವಮೊಗ್ಗ ಎಪಿಎಂಸಿ

ಬೆಟ್ಟೆ	43009-43510
ಗೊರಬಲು	25109-29559
ರಾಶಿ	40500-42589

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	9600	9650	122.10 ಸೆಂಟ್ಸ್
ಎಸಿ	---	3700	3675	
ಆರ್‌ಪಿ	---	5050	5025	
ಆರ್‌ಸಿ	---	2900	2825	--- ಡಾಲರ್ಸ್

ಸಂಕ್ಷಿಪ್ತ ಸುದ್ದಿ

ಮ್ಯಾನ್ಮಾರ್: ಪ್ರತಿಭಟನೆ ಬೆಂಬಲಿಸುವ ಗಣ್ಯರ ವಿರುದ್ಧ ಕ್ರಮ

ಯಾಂಗೂನ್ (ಎಪಿ): ಮ್ಯಾನ್ಮಾರ್‌ನಲ್ಲಿ ತಮ್ಮ ಆಡಳಿತದ ವಿರುದ್ಧ ರಾಷ್ಟ್ರವ್ಯಾಪಿ ನಡೆಯುತ್ತಿರುವ ಪ್ರತಿಭಟನೆಯನ್ನು ಬೆಂಬಲಿ ಸುತ್ತಿರುವ ಗಣ್ಯರ ವಿರುದ್ಧ ಪ್ರಕರಣ ದಾಖಲಿಸಲು ಮಿಲಿಟರಿ ಆಡಳಿತ ಮುಂದಾಗಿದ್ದು, ಕೆಲವರ ಹೆಸರನ್ನು ಫೋಟೊ ಸಹಿತ ಪತ್ರಿಕೆಯಲ್ಲಿ ಪ್ರಕಟಿಸಿ, ಎಚ್ಚರಿಕೆಯನ್ನೂ ರವಾನಿಸಿದೆ.

ಗ್ಲೋಬಲ್ ನ್ಯೂ ಲೈಟ್ ಆಫ್ ಮ್ಯಾನ್ಮಾರ್ ಪತ್ರಿಕೆಯಲ್ಲಿ ಭಾನುವಾರ ಮತ್ತು ಸೋಮವಾರ ಪ್ರಕಟವಾದ ಗಣ್ಯರ ಪಟ್ಟಿಗಳಲ್ಲಿ ನಟರು, ಸಂಗೀತಗಾರರು ಮತ್ತು ಸಾಮಾಜಿಕ ಮಾಧ್ಯಮದ ಪ್ರಭಾವಿಗಳ ಹೆಸರಿದೆ. ಈ ಪಟ್ಟಿಯಲ್ಲಿರುವವರ ವಿರುದ್ಧ 'ಸ್ಥಿರತೆಗೆ ಧಕ್ಕೆ ತರುವ ಸುದ್ದಿಗಳನ್ನು ಹರಡಲಾಗುತ್ತಿದೆ' ಎಂಬ ಆರೋಪ ಹೊರಿಸಲಾಗಿದೆ. ಈ ಅಪರಾಧಕ್ಕೆ ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು ದಂಡವಿದೆ. ಪತ್ರಿಕೆಯಲ್ಲಿ 20 ಗಣ್ಯರ ಪಟ್ಟಿಯ ಜತೆಗೆ, ಫೋಟೊಗಳು, ಪ್ರತಿಯೊಬ್ಬರ ಫೇಸ್‌ಬುಕ್ ಪೇಜ್‌ಗಳನ್ನೂ ಪ್ರಕಟಿಸಲಾಗಿದೆ.

ಐವರು ಐಸಿಸ್ ಶಂಕಿತ ಉಗ್ರರ ಬಂಧನ

ಲಾಹೋರ್ (ಪಿಟಿಐ): ನಿಷೇಧಿತ ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆಗೆ ಸೇರಿದ ಐವರು ಶಂಕಿತ ಭಯೋತ್ಪಾದಕರನ್ನು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮಸೀದಿಯಿಂದ ಬಂಧಿಸಲಾಗಿದೆ.

ಇವರು ದ್ವೇಷಬಿತ್ತುವ ಸಾಮಗ್ರಿಗಳನ್ನು ವಿತರಿಸುತ್ತಿದ್ದರು ಮತ್ತು ಜನರಿಂದ ಭಯೋತ್ಪಾದನಾ ಚಟುವಟಿಕೆಗೆ ಹಣ ಸಂಗ್ರಹಿಸುತ್ತಿದ್ದರು ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಬಂಧಿತ ಭಯೋತ್ಪಾದಕರನ್ನು ನಜೀಫ್ ಉಲ್ಲಾ, ಜಿಯಾ ಉರ್ ರೆಹಮಾನ್, ಮುಹಮ್ಮದ್ ಇಶ್ತಿಯಾಕ್, ಅಬ್ದುಲ್ ರೆಹಮಾನ್ ಬಟ್ ಮತ್ತು ಮಲಿಕ್ ಕಾಶಿಫ್ ಎಂದು ಗುರುತಿಸಲಾಗಿದೆ ಎಂದು ಸಿಟಿಡಿ ಹೇಳಿಕೆಯಲ್ಲಿ ತಿಳಿಸಿದೆ.

ನೆತನ್ಯಾಹು ನೇತೃತ್ವದ ಸರ್ಕಾರ ರಚನೆ ಯತ್ನ

ಟೆಲ್ ಅವಿವ್ (ಎಪಿ): ಇಸ್ರೇಲಿನ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿರುವ ಇಸ್ರೇಲ್ ಅಧ್ಯಕ್ಷ ರೆಯುವೆನ್ ರಿವ್ಲಿನ್ ಸರ್ಕಾರ ರಚನೆಗೆ ಬಹುಮತ ಒಗ್ಗೂಡಿಸಲು ಪ್ರಯತ್ನಿಸುತ್ತಿದ್ದಾರೆ.

ಭ್ರಷ್ಟಾಚಾರದ ಆರೋಪ ಹೊತ್ತಿರುವ ನೆತನ್ಯಾಹು ಅವರ ಆಯ್ಕೆಯನ್ನು ಮಂಗಳವಾರ ಜೆರುಸಲೇಂನಲ್ಲಿ ಇಸ್ರೇಲ್ ಅಧ್ಯಕ್ಷ ಘೋಷಿಸಿದ್ದಾರೆ. ಇದರ ಬೆನ್ನಲ್ಲೇ ನೆತನ್ಯಾಹು ಅವರ ಭ್ರಷ್ಟಾಚಾರದ ಪ್ರಕರಣ ಚರ್ಚೆ ಪುನರಾರಂಭವಾಗಿದೆ.

ಐದು ವಿಧಾನಸಭೆಗಳಿಗೆ ಚುನಾವಣೆ: ಕೇರಳ, ತಮಿಳುನಾಡು, ಪುದುಚೇರಿಯಲ್ಲಿ ಒಂದೇ ಹಂತದ ಮತದಾನ

ಬಂಗಾಳದಲ್ಲಿ ಘರ್ಷಣೆ; ಉಳಿದೆಡೆ ಶಾಂತ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಐದು ವಿಧಾನಸಭೆಗಳಿಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ಕೆಲವು ಘಟನೆಗಳನ್ನು ಹೊರತುಪಡಿಸಿದರೆ, ಮತದಾನ ಶಾಂತಿಯುತವಾಗಿತ್ತು ಎಂದು ಚುನಾವಣಾ ಆಯೋಗ ತಿಳಿಸಿದೆ.

ಸಂಜೆ 6 ಗಂಟೆವರೆಗಿನ ಮಾಹಿತಿ ಪ್ರಕಾರ, ಅಸ್ಸಾಂ ಶೇ 82.33, ಕೇರಳ ಶೇ 75, ಪುದುಚೇರಿ ಶೇ 81.55, ತಮಿಳುನಾಡು ಶೇ 72, ಪಶ್ಚಿಮ ಬಂಗಾಳದಲ್ಲಿ ಶೇ 77.68 ಮತದಾನವಾಗಿದೆ.

ಕೇರಳ, ತಮಿಳುನಾಡು, ಪುದುಚೇರಿ ವಿಧಾನಸಭೆಗೆ ಒಂದೇ ಹಂತದಲ್ಲಿ ಮತದಾನ ನಡೆಯಿತು. ಐದೂ ವಿಧಾನಸಭೆಯ 475 ಅಭ್ಯರ್ಥಿಗಳ ಭವಿಷ್ಯವು ಮತಪೆಟ್ಟಿಗೆ ಸೇರಿತು.

ಅಸ್ಸಾಂ, ಕೇರಳ ಶಾಂತಿಯುತ

ಅಸ್ಸಾಂನಲ್ಲಿ 126 ಕ್ಷೇತ್ರಗಳ ಪೈಕಿ 40 ಕ್ಷೇತ್ರಗಳಿಗೆ ನಡೆದ ಚುನಾವಣೆ ಶಾಂತಿಯುತವಾಗಿತ್ತು. 337 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಕೆಲವು ಸಣ್ಣಪುಟ್ಟ ಹಿಂಸಾಚಾರ ಘಟನೆಗಳನ್ನು ಹೊರತುಪಡಿಸಿದರೆ ಕೇರಳದಲ್ಲೂ ಮತದಾನ ಶಾಂತಿಯುತವಾಗಿತ್ತು.

ಪತ್ತನಂತಿಟ್ಟದ ಆರನ್ಮುಳ ಹಾಗೂ ಕೊಟ್ಟಾಯಂ ಜಿಲ್ಲೆಯ ಚವಿಟ್ಟುವಾರಿಯಲ್ಲಿ ಸರತಿಯಲ್ಲಿ ನಿಂತಿದ್ದ ಮಹಿಳೆ ಸೇರಿದಂತೆ ಇಬ್ಬರು ಮತದಾರರು ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ.


ಅಸ್ಸಾಂನ ಗುವಾಹಟಿಯಲ್ಲಿ ಮಂಗಳವಾರ ಮತದಾನ ಮಾಡಲು ಜನರು ಸಾಲುಗಟ್ಟಿರುವುದು

ತಿರುವನಂತಪುರ ಜಿಲ್ಲೆಯ ಮಾರ್ಕ್ಸ್‌ವಾದಿ ಪಕ್ಷದ ಭದ್ರಕೋಟೆಯಾದ ಕಾಟ್ಟಾಯಿಕೋಣಂ ಕ್ಷೇತ್ರದ ಕಳಕೂಟ್ಟಂನಲ್ಲಿ ಸಿಪಿಎಂ ಮತ್ತು ಬಿಜೆಪಿ ಕಾರ್ಯಕರ್ತರು ಘರ್ಷಣೆ ನಡೆಸಿದರು. ನಾಲ್ವರು ಬಿಜೆಪಿ ಕಾರ್ಯಕರ್ತರು ಗಾಯಗೊಂಡಿದ್ದು, ಒಂದು ವಾಹನಕ್ಕೆ ಹಾನಿಯಾಗಿದೆ. ಮೂವರು ಸಿಪಿಎಂ ಕಾರ್ಯಕರ್ತರು ಹಾಗೂ ದೇವಸ್ವಂ ಸಚಿವ ಕಡಂಪಳ್ಳಿ ಸುರೇಂದ್ರನ್ ಅವರ ಆಪ್ತ ಸಹಾಯಕನನ್ನು ವಶಕ್ಕೆ ಪಡೆಯಲಾಗಿದೆ.

ಸೀರೆ ಮೇಲೆ ಕಮಲದ ಚಿಹ್ನೆ: ದೂರು

ಮತ ಚಲಾಯಿಸುವಾಗ ಕಮಲದ ಚಿಹ್ನೆ ಇರುವ ಸೀರೆ ಧರಿಸಿದ್ದ ಕೊಯಮತ್ತೂರು ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವನತಿ ಶ್ರೀನಿವಾಸನ್ ವಿರುದ್ಧ ಮಾದರಿ ನೀತಿ ಸಂಹಿತೆ ಉಲ್ಲಂಘನೆಯ ದೂರು ದಾಖಲಿಸಲಾಗಿದೆ.

ಪಶ್ಚಿಮ ಬಂಗಾಳಲ್ಲಿ ಹಿಂಸಾಚಾರ

ಪಶ್ಚಿಮ ಬಂಗಾಳದಲ್ಲಿ ಮಂಗಳವಾರ ನಡೆದ ಮೂರನೇ ಹಂತದ ಚುನಾವಣೆ ವೇಳೆ ಅಲ್ಲಲ್ಲಿ ಹಿಂಸಾಚಾರ ನಡೆದಿದೆ. ಹೂಗ್ಲಿ ಜಿಲ್ಲೆಯ ಬಿಜೆಪಿ ಕಾರ್ಯಕರ್ತೆಯ ತಾಯಿ ಮಾಧಬಿ ಅದಾಕ್ ಅವರು ಮಂಗಳವಾರ ಮುಂಜಾನೆ ಕೊನೆಯುಸಿರೆಳೆದರು. ಅವರ ಮೇಲೆ ಸೋಮವಾರ ತಡರಾತ್ರಿ ಟಿಎಂಸಿ ಕಾರ್ಯಕರ್ತರು ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಹೂಗ್ಲಿ ಜಿಲ್ಲೆಯ ಖಾನಕುಲ್ ಪ್ರದೇಶದಲ್ಲಿ ಟಿಎಂಸಿ ಅಭ್ಯರ್ಥಿ ನಜ್ಮುಲ್ ಖಾನ್ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಬಿಜೆಪಿ ಕಾರ್ಯಕರ್ತರು ಮತದಾರರಿಗೆ ಅಡ್ಡಿ ಉಂಟುಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಮತಗಟ್ಟೆಗೆ ತೆರಳಿದಾಗ ಹಲ್ಲೆ ನಡೆದಿದೆ ಎಂದು ಖಾನ್ ಹೇಳಿದ್ದಾರೆ.

ಅರಂಬಾಗ್ ವಿಧಾನಸಭಾ ಕ್ಷೇತ್ರದ ಟಿಎಂಸಿ ಅಭ್ಯರ್ಥಿ ಸುಜಾತಾ ಮಂಡಲ್ ಖಾನ್ ಅವರನ್ನು ಬಿಜೆಪಿ ಕಾರ್ಯಕರ್ತರು ಅಟ್ಟಿಸಿಕೊಂಡು ಹೋಗಿ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಹಲ್ಲೆ ವೇಳೆ ಅವರ ತಲೆಗೆ ಪೆಟ್ಟಾಗಿದೆ. ಸ್ಥಳೀಯ ಸುದ್ದಿ ವಾಹಿನಿಗಳು ಈ ದೃಶ್ಯವನ್ನು ಪ್ರಸಾರ ಮಾಡಿವೆ. ಈ ಆರೋಪವನ್ನು ಸ್ಥಳೀಯ ಬಿಜೆಪಿ ನಾಯಕರು ನಿರಾಕರಿಸಿದ್ದಾರೆ. ಘಟನೆ ಕುರಿತು ಚುನಾವಣಾ ಆಯೋಗ ವರದಿ ಕೋರಿದೆ. ಘಟನೆ ಸಂಬಂಧ ಐವರನ್ನು ಬಂಧಿಸಲಾಗಿದೆ.

ತಮ್ಮ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ಮಾಡಿ ವಾಹನವನ್ನು ಧ್ವಂಸ ಮಾಡಿದ್ದಾರೆ ಎಂದು ಟಿಎಂಸಿ ಅಭ್ಯರ್ಥಿ ನಿರ್ಮಲ್ ಮಾಝಿ ಆರೋಪಿಸಿದ್ದಾರೆ. ಫಾಲ್ಟಾದ ಬಿಜೆಪಿ ಅಭ್ಯರ್ಥಿಯ ವಾಹನವನ್ನು ಟಿಎಂಸಿ ಕಾರ್ಯಕರ್ತರು ಧ್ವಂಸ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ದಕ್ಷಿಣ 24 ಪರಗಣ ಜಿಲ್ಲೆಯ ಡೈಮಂಡ್ ಹಾರ್ಬರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ದೀಪಕ್ ಹಲ್ದಾರ್ ಅವರು, 'ಟಿಎಂಸಿ ಕಾರ್ಯಕರ್ತರು ಮತದಾರರನ್ನು ತಡೆದಿದ್ದಾರೆ' ಎಂದು ಆರೋಪಿಸಿದ್ದಾರೆ. ಕೇಂದ್ರ ಪಡೆಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಮತ್ತು ಬಿಜೆಪಿ ಕಾರ್ಯಕರ್ತರು ಮತದಾರರಿಗೆ ಮತಗಟ್ಟೆಗೆ ಹೋಗದಂತೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಟಿಎಂಸಿ ಅಭ್ಯರ್ಥಿ ಆಶಿಮಾ ಪಾತ್ರ ಆರೋಪಿಸಿದ್ದಾರೆ.

ಕ್ಯಾನಿಂಗ್ ಪೂರ್ವ ವಿಧಾನಸಭಾ ಕ್ಷೇತ್ರದಲ್ಲಿ ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಬೆಂಬಲಿಗರು ಕಚ್ಚಾ ಬಾಂಬ್‌ಗಳನ್ನು ಎಸೆದಿದ್ದಾರೆ ಎಂದು ಆರೋಪಿಸಲಾಗಿದೆ. ಒಬ್ಬ ವ್ಯಕ್ತಿ ಗಾಯಗೊಂಡಿದ್ದಾನೆ ಎಂದು ಟಿಎಂಸಿ ಆರೋಪಿಸಿದೆ. ಐಎಸ್‌ಎಫ್ ಈ ಆರೋಪವನ್ನು ನಿರಾಕರಿಸಿದೆ. ಘಟನೆಯನ್ನು ವಿರೋಧಿಸಿ ಸ್ಥಳೀಯ ಟಿಎಂಸಿ ಮುಖಂಡರು ರಸ್ತೆತಡೆ ನಡೆಸಿದರು.

ವಿಜಯ್ ಸೈಕಲ್ ಏರಿದ ಪ್ರಸಂಗ

ಚೆನ್ನೈ: ತಮಿಳು ನಟ ದಳಪತಿ ವಿಜಯ್ ಅವರು ಮಂಗಳವಾರ ಮತ ಚಲಾಯಿಸಲು ಸೈಕಲ್ ಏರಿ ಬಂದದ್ದು ಭಾರಿ ಚರ್ಚೆಗೆ ಗ್ರಾಸವಾಗಿತ್ತು.

ತಮ್ಮ ಮನೆಯ ಸನಿಹವೇ ಇದ್ದ ಮತಗಟ್ಟೆಗೆ ಹೋಗಲು ವಿಜಯ್ ಅವರು ಸೈಕಲ್ ಬಳಸಿದರು. ಅವರ ಸೈಕಲ್ ಸವಾರಿಯ ವೇಳೆ ನೂರಾರು ಮಂದಿ ಅವರನ್ನು ಬೈಕ್‌ಗಳಲ್ಲಿ ಹಿಂಬಾಲಿಸಿದರು. ವಿಡಿಯೊ ಚಿತ್ರೀಕರಿಸಿದರು, ಚಿತ್ರ ತೆಗೆದುಕೊಂಡರು. ಆಗ ಸಂಚಾರ ದಟ್ಟಣೆ ಉಂಟಾದ ಕಾರಣ, ಪೊಲೀಸರು ಮಧ್ಯಪ್ರವೇಶಿಸಬೇಕಾಯಿತು.

ಸಾಮಾಜಿಕ ಜಾಲತಾಣಗಳಲ್ಲಿ ಇದು ಭಾರಿ ಚರ್ಚೆಗೆ ಕಾರಣವಾಯಿತು. 'ವಿಜಯ್ ಅವರು ಪೆಟ್ರೋಲ್ ಬೆಲೆ ಏರಿಕೆಯ ವಿರುದ್ಧ ಪ್ರತಿಭಟಿಸಲು ಸೈಕಲ್ ಏರಿದ್ದಾರೆ' ಎಂದು ಹಲವರು ಟ್ವೀಟ್ ಮಾಡಿದರು. ಇದರ ಬೆನ್ನಲ್ಲೇ ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರು, 'ಪೆಟ್ರೋಲ್ ಬೆಲೆ ಏರಿಸುತ್ತಿರುವ ಬಿಜೆಪಿ ಜತೆ ಕೈಜೋಡಿಸಿರುವ ಎಐಎಡಿಎಂಕೆಗೆ ಸ್ಪಷ್ಟ ಸಂದೇಶ ರವಾನಿಸಲೇ ವಿಜಯ್ ಸೈಕಲ್ ಏರಿದ್ದಾರೆ' ಎಂದು ಟ್ವೀಟ್ ಮಾಡಿದರು.

ಈ ಟ್ವೀಟ್‌ಗೆ ಬಿಜೆಪಿಯ ಖುಷ್ಬು ಸುಂದರ್ ಅವರು ತಿರುಗೇಟು ನೀಡಿದರು. 'ವಿಜಯ್ ಪೆಟ್ರೋಲ್ ಏರಿಕೆ ವಿರುದ್ಧ ಪ್ರತಿಭಟಿಸಲು ಸೈಕಲ್ ಏರಿಲ್ಲ. ನೀವು ಬೇರೆಯವರ ಸೈಕಲ್ ಏರುವುದನ್ನು ನಿಲ್ಲಿಸಿ' ಎಂದು ಟ್ವೀಟ್ ಮಾಡಿದರು. ಅಷ್ಟರಲ್ಲೇ ವಿಜಯ್ ಆಪ್ತರು ಈ ಬಗ್ಗೆ ಸ್ಪಷ್ಟನೆ ನೀಡಿದರು. 'ವಿಜಯ್ ಅವರ ಮನೆಯ ಸನಿಹವೇ ಮತಗಟ್ಟೆ ಇತ್ತು. ಅಲ್ಲಿ ರಸ್ತೆ ಚಿಕ್ಕದು. ಕಾರಿನಲ್ಲಿ ಹೋದರೆ, ಸಂಚಾರ ದಟ್ಟಣೆ ಉಂಟಾಗುತ್ತದೆ ಎಂಬ ಕಾರಣಕ್ಕೆ ಸೈಕಲ್‌ನಲ್ಲಿ ಹೋದರು' ಎಂದು ವಿಜಯ್ ಅವರ ಪ್ರಚಾರ ಸಿಬ್ಬಂದಿ ಟ್ವೀಟ್ ಮಾಡಿದರು.

ಟಿಎಂಸಿ ನಾಯಕನ ಮನೆಯಲ್ಲಿ ಇವಿಎಂ, ವಿವಿಪ್ಯಾಟ್ ಪತ್ತೆ

ಉಲುವೇಡಿಯ (ಪಶ್ಚಿಮ ಬಂಗಾಳ) (ಪಿಟಿಐ): ಟಿಎಂಸಿ ಮುಖಂಡನ ಮನೆಯಲ್ಲಿ ನಾಲ್ಕು ಇವಿಎಂ ಹಾಗೂ ವಿವಿಪ್ಯಾಟ್ ಯಂತ್ರಗಳು ಪತ್ತೆಯಾಗಿದ್ದು, ಘಟನೆಗೆ ಸಂಬಂಧಿಸಿದಂತೆ ಚುನಾವಣಾ ಅಧಿಕಾರಿಯನ್ನು ಅಮಾನತು ಮಾಡಲಾಗಿದೆ.

ಉಲುವೇಡಿಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುಳಸಿಬೇಡಿಯ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಚುನಾವಣಾ ಆಯೋಗದ ಫಲಕವಿದ್ದ ವಾಹನವು ಟಿಎಂಸಿ ಮುಖಂಡನ ಮನೆ ಮುಂದೆ ನಸುಕಿನ ವೇಳೆಯಲ್ಲಿ ಇದ್ದುದನ್ನು ಕಂಡ ಗ್ರಾಮಸ್ಥರು ಇದನ್ನು ಪ್ರತಿಭಟಿಸಿದ್ದಾರೆ. ಸ್ಥಳಕ್ಕೆ ಬಂದ ಆಯೋಗದ ಅಧಿಕಾರಿಗಳು ಯಂತ್ರಗಳನ್ನು ವಶಕ್ಕೆ ಪಡೆದಿದ್ದಾರೆ. 'ಈ ನಾಲ್ಕೂ ಮತಯಂತ್ರಗಳನ್ನು ಮಂಗಳವಾರ ನಡೆದ ಚುನಾವಣೆಯಲ್ಲಿ ಬಳಸಿಲ್ಲ. ಘಟನೆ ಸಂಬಂಧ ವರದಿ ಕೇಳಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ಮತಗಟ್ಟೆಗೆ ಬಂದಾಗ ತಡವಾಗಿದ್ದರಿಂದ ಅದು ಮುಚ್ಚಿತ್ತು. ಮತಯಂತ್ರಗಳು ಸುರಕ್ಷಿತವಾಗಿರಬೇಕು ಎಂಬ ಉದ್ದೇಶದಿಂದ ಸಂಬಂಧಿಕರ ಮನೆಯಲ್ಲಿ ಉಳಿದುಕೊಂಡೆ' ಎಂದು ಅಮಾನತುಗೊಂಡ ಅಧಿಕಾರಿ ಪ್ರತಿಕ್ರಿಯೆ ನೀಡಿದ್ದಾರೆ.

ಮತದಾನದ ದಿನವೂ ಶಬರಿಮಲೆ ಚರ್ಚೆ

ತಿರುವನಂತಪುರ (ಪಿಟಿಐ): ಶಬರಿಮಲೆ ದೇವಸ್ಥಾನದ ವಿಚಾರವು ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ಪಕ್ಷದವರಿಗೂ ಪ್ರಚಾರದ ಪ್ರಮುಖ ವಿಷಯಗಳಲ್ಲಿ ಒಂದಾಗಿತ್ತು. ಬಹಿರಂಗ ಪ್ರಚಾರ ಅಂತ್ಯವಾಗುವುದರೊಂದಿಗೆ ಉಳಿದೆಲ್ಲಾ ವಿಚಾರಗಳು ಹಿಂದೆ ಸರಿದರೂ ಶಬರಿಮಲೆಯ ವಿಚಾರ ಮತದಾನದ ದಿನವೂ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಕೇರಳದ ಪ್ರಭಾವಿ ನಾಯರ್ ಸಮುದಾಯದ ಸಂಘಟನೆಯಾದ 'ನಾಯರ್ ಸರ್ವಿಸ್ ಸೊಸೈಟಿ'ಯ ಕಾರ್ಯದರ್ಶಿ ಸುಕುಮಾರನ್ ನಾಯರ್ ಅವರ ಹೇಳಿಕೆಯೊಂದಿಗೆ ಮಂಗಳವಾರ ಇಡೀ ಪ್ರಕರಣ ತೆರೆದುಕೊಂಡಿತ್ತು.

'ರಾಜ್ಯದ ಜನರು ಆಡಳಿತದಲ್ಲಿ ಬದಲಾವಣೆ ಬಯಸುತ್ತಿದ್ದಾರೆ. ಶಬರಿಮಲೆ ದೇವಸ್ಥಾನವನ್ನು ಕುರಿತ ಸರ್ಕಾರದ ತೀರ್ಮಾನಕ್ಕೆ ಅಯ್ಯಪ್ಪ ಭಕ್ತರ ವಿರೋಧವು ಈಗಲೂ ಜೀವಂತವಾಗಿದೆ' ಎಂದು ಅವರು ಹೇಳಿದ್ದರು.

ಇದಾಗುತ್ತಿದ್ದಂತೆಯೇ 'ಅಯ್ಯಪ್ಪ ಮತ್ತು ಇತರ ಎಲ್ಲಾ ದೇವರುಗಳೂ ರಾಜ್ಯದಲ್ಲಿ ಜನಪರವಾಗಿ ದುಡಿದ ಎಲ್‌ಡಿಎಫ್ ಸರ್ಕಾರದ ಜತೆಗಿದ್ದಾರೆ' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದರು.

ಮುಖ್ಯಮಂತ್ರಿಯ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ವಿರೋಧಪಕ್ಷದ ನಾಯಕ ರಮೇಶ್ ಚನ್ನಿತಲ, 'ಈ ಚುನಾವಣೆಯಲ್ಲಿ ಎಡಪಂಥೀಯ ಸರ್ಕಾರವು ಅಯ್ಯಪ್ಪ ಹಾಗೂ ಅವರ ಭಕ್ತರ ಕೋಪಕ್ಕೆ ಗುರಿಯಾಗುವುದು ಖಚಿತ' ಎಂದರು. ಜತೆಗೆ, 'ನಾಸ್ತಿಕರಾಗಿರುವ ವಿಜಯನ್ ಅವರು ಚುನಾವಣೆಯ ಗೆಲುವಿಗೆ ಅಯ್ಯಪ್ಪನ ಆಶೀರ್ವಾದ ಕೇಳುತ್ತಿದ್ದಾರೆಯೇ' ಎಂದು ಪ್ರಶ್ನಿಸಿದರು.

ವಿಜಯನ್ ಅವರ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್, 'ಮೂರು ವರ್ಷಗಳ ಹಿಂದೆ ಶಬರಿಮಲೆಯಲ್ಲಿ ಮುಖ್ಯಮಂತ್ರಿಯವರು ರಾಕ್ಷಸೀ ಪ್ರವೃತ್ತಿ ತೋರಿಸಿದ್ದರು. ಇಂಥ ದುಷ್ಕೃತ್ಯಗಳನ್ನು ರಾಜ್ಯದ ಜನರು ಎಂದಿಗೂ ಮರೆಯಲಾರರು' ಎಂದರು.

ಕಾಂಗ್ರೆಸ್ ಮುಖಂಡರಾದ ಎ.ಕೆ. ಆ್ಯಂಟನಿ, ಉಮ್ಮನ್ ಚಾಂಡಿ, ವಿವಿಧ ಸಮುದಾಯಗಳ ನಾಯಕರು, ಜನಸಾಮಾನ್ಯರು ಸಹ ಮುಖ್ಯಮಂತ್ರಿಯ ಹೇಳಿಕೆಗೆ ಪರ–ವಿರೋಧಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಒಟ್ಟಿನಲ್ಲಿ ಇಡೀ ದಿನ ಈ ವಿಚಾರ ಚರ್ಚೆಯಲ್ಲಿತ್ತು.

ಮತ ಹಾಕುವಂತೆ ಮುಸ್ಲಿಮರಿಗೆ ಮಮತಾ ಬ್ಯಾನರ್ಜಿ ಮನವಿ: ಪ್ರಧಾನಿ ಮೋದಿ ಟೀಕೆ

'ದೀದಿಗೆ ಅಲ್ಪಸಂಖ್ಯಾತರ ಮತ ಕೈತಪ್ಪುವ ಭೀತಿ'

ಕೂಚ್‌ಬಿಹಾರ್ (ಪಿಟಿಐ): 'ಮುಸ್ಲಿಮರೆಲ್ಲರೂ ಒಗ್ಗಟ್ಟಾಗಿ ಟಿಎಂಸಿಗೆ ಮತ ಹಾಕಬೇಕು ಎಂದು ಮಮತಾ ಬ್ಯಾನರ್ಜಿ ಅವರು ಮನವಿ ಮಾಡುತ್ತಿರುವುದನ್ನು ನೋಡಿದರೆ, ಅವರಿಗೆ ಅಲ್ಪಸಂಖ್ಯಾತರ ಮತಗಳು ಕೈತಪ್ಪುವ ಆತಂಕ ಎದುರಾಗಿರುವುದು ಸ್ಪಷ್ಟವಾಗುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದ್ದಾರೆ.

'ಇದೇ ರೀತಿ, 'ಎಲ್ಲಾ ಹಿಂದೂಗಳು ಒಂದಾಗಬೇಕು' ಎಂದು ನಾವು ಹೇಳಿದ್ದಿದ್ದರೆ ಎಲ್ಲರೂ ನಮ್ಮನ್ನು ಟೀಕಿಸುತ್ತಿದ್ದರು. ನಾವು ಖಂಡನೆಗೆ ಒಳಗಾಗುತ್ತಿದ್ದೆವು, ಚುನಾವಣಾ ಆಯೋಗವು ನಮಗೆ ನೋಟಿಸ್ ಕಳುಹಿಸುತ್ತಿತ್ತು' ಎಂದು ಪ್ರಧಾನಿ ಹೇಳಿದ್ದಾರೆ.

'ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಪರ ಅಲೆ ನಿಚ್ಚಳವಾಗಿದ್ದು, ಪಕ್ಷವು ಸರ್ಕಾರ ರಚನೆ ಮಾಡಲಿದೆ. ತಿಲಕ ಇಡುವ ಮತ್ತು ಕೇಸರಿ ಧರಿಸುವ ಜನರೆಂದರೆ ಮಮತಾ ಅವರಿಗೆ ಏನೋ ಸಮಸ್ಯೆ, ಅವರ ಪ್ರತಿಕ್ರಿಯೆಗಳನ್ನು ಗಮನಿಸಿದರೆ, ಅವರು ಸೋಲೊಪ್ಪಿಕೊಂಡಂತೆ ತೋರುತ್ತಿದೆ' ಎಂದು ಇಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ಹೇಳಿದ್ದಾರೆ.

'ಮುಸ್ಲಿಮರು ಒಗ್ಗೂಡಿ ತಮ್ಮ ಪಕ್ಷ ಟಿಎಂಸಿಗೆ ಮತ ಚಲಾಯಿಸುವಂತೆ ಮನವಿ ಮಾಡುವ ಮೂಲಕ ಮಮತಾ ಅವರು ಜನಪ್ರತಿನಿಧಿ ಕಾಯ್ದೆಯನ್ನು ಉಲ್ಲಂಘಿಸಿದ್ದಾರೆ' ಎಂದು ಆರೋಪಿಸಿ ಬಿಜೆಪಿ ಚುನಾವಣಾ ಆಯೋಗಕ್ಕೆ ಸೋಮವಾರ ದೂರು ನೀಡಿದೆ.

'ಯಾರು ಸೋಲುತ್ತಾರೆ ಮತ್ತು ಯಾರು ಗೆಲ್ಲುತ್ತಾರೆ ಎಂದು ತಿಳಿಯಲು ದೇವರಿಗೆ ತೊಂದರೆ ಕೊಡಬೇಕಿಲ್ಲ. ದೇವರ ರೂಪದಲ್ಲಿರುವ 'ಜನತಾ ಜನಾರ್ದನ' (ಜನಸಾಮಾನ್ಯ) ಪ್ರತಿಕ್ರಿಯೆ ನೀಡಿದ್ದಾನೆ. ಗಾಳಿಯು ಬಿಜೆಪಿ ಪರವಾಗಿ ಬೀಸುತ್ತಿದೆ ಎಂದು ತಿಳಿಯಲು ಅತಿಮಾನುಷ ಶಕ್ತಿಯ ಅಗತ್ಯವಿಲ್ಲ' ಎಂದು ಮೋದಿ ಹೇಳಿದರು.

'ಬಿಜೆಪಿ ಗೆಲ್ಲಲಿದೆ ಎಂದು ಹೇಳಲು ಪ್ರಧಾನಿ ದೇವರೇ ಅಥವಾ ಅತಿಮಾನುಷ ಶಕ್ತಿಯೇ' ಎಂದು ಮಮತಾ ಅವರು ಇತ್ತೀಚೆಗೆ ಪ್ರಶ್ನಿಸಿದ್ದಕ್ಕೆ ಮೋದಿ ಈ ಪ್ರತಿಕ್ರಿಯೆ ನೀಡಿದ್ದಾರೆ.



ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯಲ್ಲಿ ನಡೆದ ಬಿಜೆಪಿ ಸಮಾವೇಶದಲ್ಲಿ ಭಾಗವಹಿಸಿದ್ದ ಕಾರ್ಯಕರ್ತರ ಉತ್ಸಾಹ–ಪಿಟಿಐ ಚಿತ್ರ

'ಬಿಜೆಪಿ ಕಾರ್ಯಕರ್ತರಿಂದ ದೌರ್ಜನ್ಯ'


ಕಾಲಚೀನಿ (ಪಶ್ಚಿಮ ಬಂಗಾಳ) (ಪಿಟಿಐ): 'ಬಿಜೆಪಿ ಕಾರ್ಯಕರ್ತರು ಮತಗಟ್ಟೆಗಳನ್ನು ಒತ್ತಾಯಪೂರ್ವಕವಾಗಿ ಅತಿಕ್ರಮಣ ಮಾಡಿಕೊಂಡು, ಟಿಎಂಸಿ ಸದಸ್ಯರು ಮತ್ತು ಅಭ್ಯರ್ಥಿಗಳ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಮಮತಾ ಬ್ಯಾನರ್ಜಿ ಮಂಗಳವಾರ ಆರೋಪಿಸಿದ್ದಾರೆ.

ಬಿಜೆಪಿಯ ಇಂತಹ ಬೆದರಿಕೆ ತಂತ್ರಗಳಿಂದ ನಾನು ವಿಚಲಿತಳಾಗುವುದಿಲ್ಲ ಎಂದೂ ಅವರು ಹೇಳಿದ್ದಾರೆ. ಅಲಿಪುರ್‌ದೌರ್ ಜಿಲ್ಲೆಯಲ್ಲಿ ಪಕ್ಷದ ಸಮಾವೇಶದಲ್ಲಿ ಮಾತನಾಡಿದ ಅವರು, 'ಟಿಎಂಸಿ ಅಭ್ಯರ್ಥಿ ಸುಜಾತಾ ಮಂಡಲ್ ಅವರನ್ನು ಬಿಜೆಪಿ ಕಾರ್ಯಕರ್ತರು ಮತಗಟ್ಟೆ ಬಳಿ ಅಟ್ಟಿಸಿಕೊಂಡು ಹೋಗಿ ತಲೆಗೆ ಹೊಡೆದಿದ್ದಾರೆ ಎಂದು ಆರೋಪಿಸಿದರು.

'ನಮ್ಮ ಪಕ್ಷದ ಪರಿಶಿಷ್ಟ ಜಾತಿ ಅಭ್ಯರ್ಥಿ ಸುಜಾತಾ ಅವರು ಮತಗಟ್ಟೆಗೆ ಭೇಟಿ ನೀಡಿದಾಗ ಬಿಜೆಪಿ ಸದಸ್ಯರು ಗಂಭೀರ ಗಾಯ ಮಾಡಿದ್ದಾರೆ. ಖಾನಕುಲ್‌ನಲ್ಲಿ ಪಕ್ಷದ ಮತ್ತೊಬ್ಬ ಅಭ್ಯರ್ಥಿಯನ್ನೂ ಹೊಡೆದಿದ್ದಾರೆ. ನಮ್ಮ ಅಭ್ಯರ್ಥಿ ಶೌಕತ್ ಮೊಲ್ಲಾ ಅವರನ್ನು ಮತಗಟ್ಟೆಗೆ ಪ್ರವೇಶಿಸದಂತೆ ಭದ್ರತಾ ಪಡೆಗಳು ತಡೆದಿವೆ. ಇಂತಹ ಹಲವಾರು ನಿದರ್ಶನಗಳು ಇವೆ. ರಾಜ್ಯದಾದ್ಯಂತ ನಮ್ಮ ಅಭ್ಯರ್ಥಿಗಳು ಹಾಗೂ ಪಕ್ಷದ ಕಾರ್ಯಕರ್ತರ ಮೇಲೆ ದೌರ್ಜನ್ಯ ನಡೆದಿವೆ ಎಂದು ಬ್ಯಾನರ್ಜಿ ಹೇಳಿದ್ದಾರೆ.

'ಹಿಂಸಾಚಾರದ ಕುರಿತಂತೆ ಬೆಳಿಗ್ಗೆಯಿಂದ ತಮಗೆ ಕನಿಷ್ಠ 100 ದೂರುಗಳು ಬಂದಿವೆ. ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಲಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಬಿಜೆಪಿ ಹಮ್ಮಿಕೊಂಡ ಸಮಾವೇಶದಲ್ಲಿ ಜನರು ಅಷ್ಟಾಗಿ ಸೇರದ ಕಾರಣ, ಪಕ್ಷದ ನಾಯಕತ್ವವು ದೊಡ್ಡ ಷಡ್ಯಂತ್ರ ಹೆಣೆದಿದೆ. ಮತಗಟ್ಟೆ ವಶಪಡಿಸಿಕೊಳ್ಳಲು ಬಂದಾಗ ತಡೆಯಬೇಡಿ ಎಂದು ಭದ್ರತಾಪಡೆಗಳಿಗೆ ಸೂಚನೆ ರವಾನಿಸಿದೆ' ಎಂದು ಅವರು ಆರೋಪಿಸಿದರು.

'ಚುನಾವಣೆ ಪ್ರಾರಂಭವಾದಾಗಿನಿಂದ ನಮ್ಮ ನಾಲ್ವರು ಕಾರ್ಯಕರ್ತರನ್ನು ಹತ್ಯೆ ಮಾಡಲಾಗಿದೆ. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ. ನಿಮ್ಮ (ಬಿಜೆಪಿ) ಇಂತಹ ಬೆದರಿಕೆ ಕ್ರಮಗಳಿಂದ ನಮ್ಮನ್ನು ಅಧೀರರನ್ನಾಗಿಸಲು ಸಾಧ್ಯವಿಲ್ಲ' ಎಂದು ಮಮತಾ ಹೇಳಿದ್ದಾರೆ.


ಟಿಎಂಸಿ ಚುನಾವಣಾ ಸಮಾವೇಶದಲ್ಲಿ ಮಮತಾ ಬ್ಯಾನರ್ಜಿ ಮಾತನಾಡಿದರು–ಪಿಟಿಐ ಚಿತ್ರ



ಮಸ್ಕಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಪಾಮನಕಲ್ಲೂರು ಗ್ರಾಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ ಪರ ಸಾರ್ವಜನಿಕ ಸಭೆಯಲ್ಲಿ ಮತಯಾಚಿಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಧ್ರುವನಾರಾಯಣ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ ಇದ್ದರು (ಎಡಚಿತ್ರ). ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಅವರು ಮಸ್ಕಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಹಾಲಾಪುರದಲ್ಲಿ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ ಪರ ಮಂಗಳವಾರ ಮತಯಾಚಿಸಿದರು

20 ಪರ್ಸೆಂಟ್ ಸರ್ಕಾರ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರವು 20 ಪರ್ಸೆಂಟ್ ಕಮೀಷನ್ ಸರ್ಕಾರವಾಗಿದ್ದು, ಬಿ.ವೈ. ವಿಜಯೇಂದ್ರ ಅವರಿಗೆ ಹಣಕೊಟ್ಟರೆ ಮಾತ್ರ ಅನುದಾನ ಬಿಡುಗಡೆ ಮಾಡಲಾಗುತ್ತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಮಂಗಳವಾರ ಪ್ರಚಾರ ನಡೆಸಿದ ಅವರು, ಪಗಡದಿನ್ನಿ ಕ್ಯಾಂಪ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಸರ್ಕಾರಕ್ಕೆ ಸಮಸ್ಯೆಗಳನ್ನು ನಿಭಾಯಿಸುವ ಶಕ್ತಿ ಇಲ್ಲ. ಸಚಿವ ಕೆ.ಎಸ್. ಈಶ್ವರಪ್ಪ ಅವರು ರಾಜ್ಯಪಾಲರಿಗೆ ಪತ್ರ ಬರೆದಿರುವುದು ಗಂಭೀರ ವಿಚಾರ. ಶಾಸಕ ಬಸನಗೌಡ ಪಾಟೀಲ ಯತ್ನಾಳ ನಾಲ್ಕು ತಿಂಗಳಿಂದ ಮುಖ್ಯಮಂತ್ರಿ ವಿರುದ್ಧ ವಾಗ್ದಾಳಿ ಮಾಡುತ್ತಿದ್ದರೂ ಏಕೆ ಕ್ರಮ ಕೈಗೊಂಡಿಲ್ಲ? ಸರ್ಕಾರದಲ್ಲಿ ಎಲ್ಲವೂ ಸರಿ ಇಲ್ಲ' ಎಂದರು.

'ಯತ್ನಾಳ ಹಾಗೂ ಈಶ್ವರಪ್ಪ ಅವರಿಗೆ ಆರ್‌ಎಸ್‌ಎಸ್ ಮತ್ತು ಬಿ.ಎಲ್.ಸಂತೋಷ ಅವರ ಬೆಂಬಲ ಇದೆ. ಮುಖ್ಯಮಂತ್ರಿ ಹುದ್ದೆಯಿಂದ ಯಡಿಯೂರಪ್ಪರನ್ನು ಬದಲಿಸಲು ಆರ್‌ಎಸ್‌ಎಸ್ ಬಯಸಿದೆ' ಎಂದು ಹೇಳಿದರು.

'ಹತಾಶೆಯಿಂದ ಆರೋಪ'

ಮಸ್ಕಿ: 'ನಮ್ಮನ್ನು ಟೀಕಿಸಲು ಕಾಂಗ್ರೆಸ್ ಮುಖಂಡರ ಬಳಿ ಯಾವ ವಿಷಯಗಳೂ ಇಲ್ಲ. ಮಸ್ಕಿ ಉಪ ಚುನಾವಣೆಯಲ್ಲಿ ಸೋಲುವ ಹತಾಶೆಯಿಂದಾಗಿ ಆರೋಪ ಮಾಡುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕ್ಷೇತ್ರದಲ್ಲಿ ಬಿಜೆಪಿ ಪರ ಅಲೆ ಹೆಚ್ಚುತ್ತಿದ್ದು, ಕಾಂಗ್ರೆಸ್‌ಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ವಿಜಯೇಂದ್ರ ಹಣ ಹಂಚಲು ಬಂದಿದ್ದಾನೆ ಎಂದು ಅಪಪ್ರಚಾರ ಮಾಡುವ ಮೂಲಕ ಕ್ಷೇತ್ರದ ಜನರಿಗೆ ಅಪಮಾನ ಮಾಡುತ್ತಿದ್ದಾರೆ' ಎಂದರು. '5 (ಎ) ಕಾಲುವೆ ಯೋಜನೆ ವಿಷಯ ಪ್ರಸ್ತಾಪಿಸಿದ ಅವರು, ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು, ಅವರಿಗೆ ಆಗ ಈ ಯೋಜನೆ ಕಣ್ಣಿಗೆ ಕಾಣಲಿಲ್ಲ. ಈಗ ಉಪ ಚುನಾವಣೆ ಸಮಯದಲ್ಲಿ ಮೊಸಳೆ ಕಣ್ಣೀರು ಹಾಕುತ್ತಿದ್ದಾರೆ. ಇದಕ್ಕೆ ಕ್ಷೇತ್ರದ ಮತದಾರರು ಕರಗುವುದಿಲ್ಲ. ಯೋಜನೆ ಬಗ್ಗೆ ಚುನಾವಣೆ ನಂತರ ಮುಖ್ಯಮಂತ್ರಿ ಅವರು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲಿದ್ದಾರೆ' ಎಂದರು.

ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಠ್ ನೇಮಕ

ನವದೆಹಲಿ (ಪಿಟಿಐ): ಆರ್ಥಿಕ ವ್ಯವಹಾರಗಳ ಇಲಾಖೆಯ (ಡಿಇಎ) ಕಾರ್ಯದರ್ಶಿಯಾಗಿ ಕರ್ನಾಟಕ ಕೇಡರ್‌ನ 1987ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಅಜಯ್ ಸೇಠ್ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ.

ಇದುವರೆಗೂ ಈ ಸ್ಥಾನದಲ್ಲಿದ್ದ ಹರಿಯಾಣ ಕೇಡರ್‌ನ 1988ನೇ ಬ್ಯಾಚ್‌ನ ಅಧಿಕಾರಿ ತರುಣ್ ಬಜಾಜ್ ಅವರನ್ನು ಕಂದಾಯ ಸಚಿವಾಲಯದ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ.

ತಾಪಮಾನ ಬದಲಾವಣೆ: ಅಮೆರಿಕ ಅಧ್ಯಕ್ಷರ ವಿಶೇಷ ರಾಯಭಾರಿ –ಪರಿಸರ ಸಚಿವ ಚರ್ಚೆ

ನವದೆಹಲಿ: ತಾಪಮಾನ ಬದಲಾವಣೆ ಕುರಿತ ಅಮೆರಿಕದ ಅಧ್ಯಕ್ಷರ ವಿಶೇಷ ರಾಯಭಾರಿ ಜಾನ್ ಕೆರ್ರಿ ನೇತೃತ್ವದ ನಿಯೋಗ ಮಂಗಳವಾರ ಇಲ್ಲಿ ಕೇಂದ್ರ ಪರಿಸರ ಸಚಿವ ಪ್ರಕಾಶ್ ಜಾವಡೇಕರ್ ಅವರನ್ನು ಭೇಟಿಯಾಗಿ ಚರ್ಚಿಸಿತು.

ತಾಪಮಾನ ಪರಿಸ್ಥಿತಿ, ಜಂಟಿ ಸಂಶೋಧನೆ ಮತ್ತು ಸಹಭಾಗಿತ್ವ ಕುರಿತು ಚರ್ಚೆ ನಡೆಯಿತು. ಏಳು ಸದಸ್ಯರ ನಿಯೋಗ ನಾಲ್ಕು ದಿನ ಪ್ರವಾಸ ಕೈಗೊಳ್ಳಲಿದೆ. ಕೇಂದ್ರ, ಖಾಸಗಿ ವಲಯ ಮತ್ತು ಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು ಭೇಟಿಯಾಗಲಿದೆ.

ಮುಷ್ಕರ: ಓಡಾಟಕ್ಕೆ ಸಂಚಕಾರ

ಒಂದನೇ ಪುಟದಿಂದ

ರಾತ್ರಿ ತಂಗುವ ಕರ್ತವ್ಯಕ್ಕೆ ಹಾಜರಾಗಬೇಕಾದ ಸಿಬ್ಬಂದಿ ಡಿಪೊಗಳಿಗೆ ಬರಲೇ ಇಲ್ಲ. ಬಸ್‌ಗಳು ಡಿಪೊಗಳಲ್ಲೇ ಉಳಿದವು. ಬಸ್‌ಗಳಿಲ್ಲದೆ ಪ್ರಯಾಣಿಕರು ಪರದಾಡುವಂತಾಯಿತು. ನಾಲ್ಕೂ ನಿಗಮಗಳಿಂದ 20 ಸಾವಿರ ಬಸ್‌ಗಳಿದ್ದು, ಮಂಗಳವಾರದ ಬೆಳವಣಿಗೆ ಗಮನಿಸಿದರೆ ಬುಧವಾರ ಬಸ್ ಸಂಚಾರ ಸ್ಥಗಿತಗೊಳ್ಳುವ ಸಾಧ್ಯತೆ ಹೆಚ್ಚಾಗಿದೆ.

ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ನಡೆಯುತ್ತಿವೆ. ಬೆಂಗಳೂರು ಮತ್ತು ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳು ಸಾರಿಗೆ ಸಂಸ್ಥೆ ಬಸ್‌ಗಳನ್ನೇ ನಂಬಿಕೊಂಡಿದ್ದಾರೆ. ಸರ್ಕಾರಿ ಮತ್ತು ಖಾಸಗಿ ನೌಕರರು, ಸಾಮಾನ್ಯ ಪ್ರಯಾಣಿಕರು ಬುಧವಾರ ಬಸ್‌ಗಳಿಗಾಗಿ ಪರದಾಡಬೇಕಾದ ಸ್ಥಿತಿ ಇದೆ. ಬೆಂಗಳೂರಿನಲ್ಲಿ 30 ಲಕ್ಷ ಪ್ರಯಾಣಿಕರು ಬಿಎಂಟಿಸಿ ನೆಚ್ಚಿಕೊಂಡಿದ್ದರೆ, ಕೆಎಸ್‌ಆರ್‌ಟಿಸಿ, ಎನ್‌ಇಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿ ಬಸ್‌ಗಳು ಸೇರಿ 70 ಲಕ್ಷದಿಂದ 80 ಲಕ್ಷ ಪ್ರಯಾಣಿಕರು ಬುಧವಾರದಿಂದ ತೊಂದರೆ ಅನುಭವಿಸಬೇಕಾಗುತ್ತದೆ.

ಮುಷ್ಕರ ನಡೆಸಿದರೆ ಎಸ್ಮಾ–ಸಿ.ಎಸ್.: 'ಸಾರಿಗೆ ನೌಕರರು ಮುಷ್ಕರ ಕೈಬಿಡಬೇಕು. ಮುಷ್ಕರ ನಡೆಸಿದರೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ, ಪೊಲೀಸ್ ಕಾಯ್ದೆ, ಅಗತ್ಯ ಸೇವಾ ನಿರ್ವಹಣಾ ಕಾಯ್ದೆ (ಎಸ್ಮಾ) ಸೇರಿದಂತೆ ಕಟ್ಟುನಿಟ್ಟಿನ ಕಾನೂನು ಕ್ರಮ ಖಚಿತ' ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಮುಖ್ಯಮಂತ್ರಿ ಸಮ್ಮುಖದಲ್ಲಿ ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಮಂಗಳವಾರ ನಡೆದ ಸಭೆಯ ಬಳಿಕ ಮಾತನಾಡಿದ ಪಿ. ರವಿಕುಮಾರ್, 'ಸಾರಿಗೆ ನೌಕರರ ವೇತನವನ್ನು ಶೇ 8ರಷ್ಟು ಹೆಚ್ಚಿಸಲು ನಿರ್ಧರಿಸಲಾಗಿದೆ. ಸದ್ಯ ಚುನಾವಣಾ ನೀತಿಸಂಹಿತೆ ಜಾರಿಯಲ್ಲಿದೆ. ಹೀಗಾಗಿ, ವೇತನ ಹೆಚ್ಚಳಕ್ಕೆ ಅನುಮತಿ ನೀಡುವಂತೆ ಚುನಾವಣಾ ಆಯೋಗಕ್ಕೆ ಸೋಮವಾರವೇ (ಏ. 5) ಪತ್ರ ಬರೆಯಲಾಗಿದೆ' ಎಂದರು.

'ಸಾರಿಗೆ ನಿಗಮಗಳಿಗೆ ನಿತ್ಯ ₹ 4 ಕೋಟಿ ನಷ್ಟವಾಗುತ್ತಿದ್ದರೂ ನೌಕರರ ವೇತನವನ್ನು ಸರ್ಕಾರ ಕಡಿತ ಮಾಡಿಲ್ಲ. ಕಳೆದ ವರ್ಷ ಆದಾಯ ಇಲ್ಲದಿದ್ದರೂ ಸಾರಿಗೆ ನೌಕರರ ಸಂಬಳಕ್ಕೆ ₹ 2,100 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದರು.

'ಪ್ರತಿದಿನ 45 ಲಕ್ಷ ಜನರು ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದರು. ಕೋವಿಡ್ ಕಾರಣದಿಂದ ಆ ಸಂಖ್ಯೆ 20 ಲಕ್ಷಕ್ಕೆ ಇಳಿದಿದೆ. ಈ ಸಂಖ್ಯೆ ಇನ್ನೂ ಕಡಿಮೆಯಾಗುವ ಸಾಧ್ಯತೆ ಇದೆ. ಸಾರಿಗೆ ಬಸ್ಸುಗಳು ಸಾರ್ವಜನಿಕ ಆಸ್ತಿ. ಮುಷ್ಕರ ನಿರತರು ಬಸ್ಸುಗಳಿಗೆ ಹಾನಿ ಮಾಡಿದರೆ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

ಸರ್ಕಾರದ ಸಿದ್ಧತೆಗಳೇನು?

ಒಂದನೇ ಪುಟದಿಂದ

ಬೆಂಗಳೂರಿನಲ್ಲೇ ಮೂರು ಸಾವಿರಕ್ಕೂ ಹೆಚ್ಚು ಖಾಸಗಿ ಬಸ್‌ಗಳನ್ನು ಓಡಿಸಲು ಸಾರಿಗೆ ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ಬೇರೆ ಜಿಲ್ಲೆಗಳಲ್ಲೂ ಖಾಸಗಿ ಬಸ್, ಮ್ಯಾಕ್ಸಿಕ್ಯಾಬ್‌ಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲು ಸಾರಿಗೆ ಇಲಾಖೆ ಅನುಮತಿ ನೀಡಿದೆ. ಮುಷ್ಕರ ಇದೆ ಎಂಬ ಕಾರಣಕ್ಕೆ ಪ್ರಯಾಣ ದರ ಹೆಚ್ಚಳ ಮಾಡಬಾರದು ಎಂಬ ಎಚ್ಚರಿಕೆಯನ್ನೂ ನೀಡಿದೆ.

ಖಾಸಗಿ ಬಸ್‌ಗಳು ಸರ್ಕಾರಿ ಬಸ್ ನಿಲ್ದಾಣಗಳಿಗೆ ಬಂದು ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಅವಕಾಶವನ್ನೂ ನೀಡಲಾಗಿದೆ. ಮುಷ್ಕರಕ್ಕೆ ಹೆದರದೆ ಕರ್ತವ್ಯಕ್ಕೆ ಬರುವ ಸಿಬ್ಬಂದಿಗೆ ಎಲ್ಲಾ ರೀತಿಯ ಭದ್ರತೆ ಒದಗಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದ್ದಾರೆ. ಹೆಚ್ಚುವರಿಯಾಗಿ ರೈಲುಗಳ ಸೇವೆ ಮತ್ತು ಬೆಂಗಳೂರಿನಲ್ಲಿ ಮೆಟ್ರೊ ರೈಲು ಸೇವೆಯನ್ನೂ ಹೆಚ್ಚಿಸಲು ಸರ್ಕಾರ ಕ್ರಮಗಳನ್ನು ಕೈಗೊಂಡಿದೆ.

ನೌಕರರ ನಿಲುವುಗಳೇನು?

ಒಂದನೇ ಪುಟದಿಂದ

ಈ ನಡುವೆ ನೌಕರರ ಕೂಟ ನೀಡಿರುವ ಬಂದ್ ಕರೆಗೆ ಎಚ್.ವಿ. ಅನಂತಸುಬ್ಬರಾವ್ ನೇತೃತ್ವದ ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಮತ್ತು ಕರಾರಸಾ ನಿಗಮಗಳ ನೌಕರರ ಫೆಡರೇಶನ್ (ಸಿಐಟಿಯು) ನೈತಿಕ ಬೆಂಬಲ ಸೂಚಿಸಿವೆ.

'ಶೇ 8ರಷ್ಟು ವೇತನ ಹೆಚ್ಚಳ ಸರ್ಕಾರದ ಏಕಪಕ್ಷೀಯ ನಿರ್ಧಾರ. ಹೋರಾಟ ಮುರಿಯಲು ದಾರಿಗಳನ್ನು ಹುಡುಕುತ್ತಿರುವುದು ದುರದೃಷ್ಟಕರ. ವೇತನ ಸಮಸ್ಯೆಯನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲು ಮುಂದಾಗಬೇಕುಲ' ಎಂದು ಫೆಡರೇಷನ್ ಪ್ರತಿಪಾದಿಸಿದೆ.

'6ನೇ ವೇತನ ಆಯೋಗದ ಶಿಫಾರಸು ಅನ್ವಯಗೊಳಿಸುವ ಬೇಡಿಕೆ ಮತ್ತು ಸರ್ಕಾರಿ ನೌಕರರನ್ನಾಗಿ ಮಾಡಬೇಕೆಂಬ ಬೇಡಿಕೆಗಳು ಹುಟ್ಟಿದ್ದೇ ಸರ್ಕಾರ ಕಡೆಯಿಂದ. ಡಿಸೆಂಬರ್‌ನಲ್ಲಿ ನಡೆದ ಸಂಧಾನ ಸಭೆಯಲ್ಲೇ ಸ್ಪಷ್ಟವಾಗಿ ಹೇಳಿದ್ದರೆ, ಈಗ ಈ ಪರಿಸ್ಥಿತಿ ಎದುರಾಗುತ್ತಿರಲಿಲ್ಲ. ಖಾಸಗಿ ಬಸ್‌ಗಳನ್ನು ನಿಗಮದ ಬಸ್ ನಿಲ್ದಾಣಗಳಿಗೆ ಬರಲು ಅವಕಾಶ ನೀಡದೆ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಬೇಕು' ಎಂದು ಕರಾರಸಾ ನಿಗಮಗಳ ನೌಕರರ ಫೆಡರೇಶನ್ (ಸಿಐಟಿಯು) ಕಾರ್ಯದರ್ಶಿ ಎಚ್.ಎಸ್. ಮಂಜುನಾಥ್ ಒತ್ತಾಯಿಸಿದರು.

'ಪತ್ನಿಗೆ ಆರ್ಥಿಕ ನೆರವು ನೀಡುವುದು ಪತಿಯ ಕರ್ತವ್ಯ'

ನವದೆಹಲಿ(ಪಿಟಿಐ): 'ಕಾನೂನು ಸಮ್ಮತಿಯುಳ್ಳ ನಿರ್ದಿಷ್ಟ ಪ್ರಕರಣ ಹೊರತುಪಡಿಸಿ ಪತ್ನಿಯನ್ನು ನೋಡಿಕೊಳ್ಳುವುದು ಮತ್ತು ಆಕೆಗೆ ಆರ್ಥಿಕವಾಗಿ ಬೆಂಬಲ ನೀಡುವುದು ಪತಿಯ ಕರ್ತವ್ಯ' ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಪ್ರತ್ಯೇಕವಾಗಿರುವ ಪತ್ನಿಗೆ ಮಾಸಿಕ ₹ 17000 ನೀಡಬೇಕು ಎಂದು ಕೆಳಹಂತದ ಕೋರ್ಟ್ ನೀಡಿದ್ದ ಆದೇಶವನ್ನು ಈ ಮೂಲಕ ನ್ಯಾಯಮೂರ್ತಿ ಸುಬ್ರಹ್ಮಣಿಯಂ ಪ್ರಸಾದ್ ಅವರು ಎತ್ತಿಹಿಡಿದರು.

ಕೆಳಹಂತದ ಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದ ವ್ಯಕ್ತಿ ಸಹಾಯಕ ಸಬ್‌ಇನ್‌ಸ್ಪೆಕ್ಟರ್ ಆಗಿದ್ದು, ಚೆನ್ನಾಗಿ ಸಂಪಾದನೆ ಮಾಡುತ್ತಿದ್ದಾರೆ. ನಿಶ್ಚಿತ ಆದಾಯವಿಲ್ಲದ ಪತ್ನಿಗೆ ಮಾಸಿಕ ₹ 17 ಸಾವಿರ ನೀಡಲು ಶಕ್ತರಾಗಿದ್ದಾರೆ ಎಂದು ತಿಳಿಸಿತು. ಮಹಿಳೆ ಸ್ವಂತ ಬಲದಿಂದ ಬದುಕಬಲ್ಲರು ಎಂಬುದಕ್ಕೆ ಯಾವುದೇ ದಾಖಲೆ ಒದಗಿಸಿಲ್ಲ. ನಿಯತಕಾಲಿಕವೊಂದರ ಮುಖಪುಟ ಈ ವಾದವನ್ನು ಪುರಸ್ಕರಿಸುವುದಿಲ್ಲ ಎಂದು ಕೋರ್ಟ್ ಹೇಳಿತು.

ಕೆಳಹಂತದ ನ್ಯಾಯಾಲಯದಲ್ಲಿ ನೀಡಿರುವ ಹೇಳಿಕೆಯಲ್ಲಿ ಮಹಿಳೆಯರು ತಾನು ರೂಪದರ್ಶಿಯಾಗಿದ್ದು, ಕಡಿಮೆ ಪ್ರಮಾಣದ ಆದಾಯವಿದೆ ಎಂದು ತಿಳಿಸಿದ್ದಾರೆ. ಇದರರ್ಥ ಆಕೆ ಬದುಕಲು ಅಗತ್ಯವಿರುವಷ್ಟು ಸಂಪಾದನೆ ಮಾಡುತ್ತಿದ್ದಾರೆ ಎಂದರ್ಥವಲ್ಲ ಎಂದು ತಿಳಿಸಿತು.

ದಂಪತಿ 1985ರ ಜೂನ್‌ನಲ್ಲಿ ಮದುವೆಯಾಗಿದ್ದು, ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದರು. ಪುತ್ರಿ 2010ರಲ್ಲಿ ಮೃತಪಟ್ಟಿದ್ದು ಇಬ್ಬರು ಮಕ್ಕಳು ವಯಸ್ಕರಾಗಿದ್ದು, ಕೆಲಸದಲ್ಲಿದ್ದಾರೆ. ದಂಪತಿ 2012ರಲ್ಲಿ ಪ್ರತ್ಯೇಕಗೊಂಡಿದ್ದಾರೆ. ಪತಿಗೆ ಮಾಸಿಕ ₹ 50 ಸಾವಿರ ಆದಾಯವಿದ್ದು, ಕೃಷಿಯಿಂದಲೂ ಆದಾಯ ಬರುತ್ತಿದೆ ಎಂದು ಪತ್ನಿ ಪ್ರತಿಪಾದಿಸಿದ್ದರು. ಕಿರುಕುಳ ನೀಡುತ್ತಿದ್ದಾರೆ ಎಂಬ ಆರೋಪವನ್ನು ತಳ್ಳಿಹಾಕಿದ್ದ ಪತಿ, ಮಕ್ಕಳನ್ನು ಚೆನ್ನಾಗಿ ನೋಡಿಕೊಂಡಿದ್ದು, ಪತ್ನಿ ಕೂಡಾ ಗೌರವಾನ್ವಿತ ಮೊತ್ತವನ್ನು ಸಂಪಾದಿಸುತ್ತಿದ್ದಾರೆ ಎಂದು ವಾದಿಸಿದ್ದರು.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್: ಡೆಲ್ಲಿ ಸಾರಥ್ಯ ವಹಿಸಲಿರುವ ಪಂತ್‌ಗೆ ಮೊದಲ ಪಂದ್ಯ

ರಿಷಭ್ ನಾಯಕತ್ವಕ್ಕೆ 'ಕೂಲ್ ಕ್ಯಾಪ್ಟನ್' ಸವಾಲು

ಮುಂಬೈ (ಪಿಟಿಐ): ರಿಷಭ್ ಪಂತ್ ಅವರು ದೆಹಲಿ ಕ್ಯಾಪಿಟಲ್ಸ್ ತಂಡದ ನಾಯಕನಾಗಿ ಆಡಲಿರುವ ಮೊದಲ ಪಂದ್ಯದಲ್ಲಿ ತಮ್ಮ ರೋಲ್ ಮಾಡೆಲ್ ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿದ್ದಾರೆ.

ಇದೇ ಶನಿವಾರ ಪಂದ್ಯವು ನಡೆಯಲಿದೆ. 23 ವರ್ಷದ ವಿಕೆಟ್‌ಕೀಪರ್ ರಿಷಭ್ ಭಾರತ ತಂಡದಲ್ಲಿ ಧೋನಿಯ ಸ್ಥಾನ ತುಂಬುವ ಭರವಸೆ ಮೂಡಿಸಿದವರು.

'ನಾಯಕನಾದ ನಂತರ ನನ್ನ ಮೊದಲ ಪಂದ್ಯವು ಮಹಿ ಭಾಯ್ ಎದುರು ನಡೆಯಲಿದೆ. ಅದೊಂದು ಉತ್ತಮ ಅನುಭವ ನೀಡುವುದು ಖಚಿತ. ಮಹಿಯಿಂದ ನಾನು ಇದು ವರೆಗೂ ಬಹಳಷ್ಟು ಕಲಿತಿದ್ದೇನೆ. ಇದೀಗ ಆಟಗಾರನಾಗಿ ಅನುಭವವೂ ಇದೆ' ಎಂದು ರಿಷಭ್ ಹೇಳಿದ್ದಾರೆ.

ಮಹಿಯಿಂದ ಕಲಿತದ್ದು ಮತ್ತು ಇದುವರೆಗಿನ ನನ್ನ ಅನುಭವಗಳನ್ನು ಮೇಳೈಸಿದ ತಂತ್ರಗಳನ್ನು ಸಿಎಸ್‌ಕೆ ಎದುರು ಬಳಸುತ್ತೇನೆ' ಎಂದು ಡೆಲ್ಲಿ ಕ್ಯಾಪಿಟಲ್ಸ್ ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಈಚೆಗೆ ಆಸ್ಟ್ರೇಲಿಯಾ ಪ್ರವಾಸ ಮತ್ತು ಭಾರತದಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ರಿಷಭ್ ಅಮೋಘ ಬ್ಯಾಟಿಂಗ್ ಮಾಡಿದ್ದರು. ವಿಕೆಟ್ ಕೀಪಿಂಗ್‌ನಲ್ಲಿಯೂ ಮಿಂಚಿದ್ದರು.

ಶ್ರೇಯಸ್ ಅಯ್ಯರ್ ಗಾಯಗೊಂಡು ಐಪಿಎಲ್‌ನಿಂದ ಹೊರಬಿದ್ದ ಕಾರಣ ಡೆಲ್ಲಿ ತಂಡದ ಸಾರಥ್ಯವನ್ನು ರಿಷಭ್‌ಗೆ ವಹಿಸಲಾಗಿದೆ. ಐಪಿಎಲ್‌ನಲ್ಲಿ ರಿಷಭ್ 68 ಪಂದ್ಯಗಳನ್ನು ಆಡಿದ್ದಾರೆ. ಒಟ್ಟು 2079 ರನ್‌ಗಳು ಅವರ ಖಾತೆಯಲ್ಲಿವೆ.

'ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಲು ಶ್ರಮಪಡುತ್ತಿದ್ದೇನೆ. ಇಲ್ಲಿಯವರೆಗೂ ನಮ್ಮ ತಂಡವು ಐಪಿಎಲ್ ಪ್ರಶಸ್ತಿ ಗೆದ್ದಿಲ್ಲ. ಕಳೆದ ಎರಡು ಮೂರು ವರ್ಷಗಳಲ್ಲಿ ಉತ್ತಮವಾಗಿ ಆಡಿದೆ. ತಂಡದಲ್ಲಿ ಎಲ್ಲರೂ ತುಂಬು ಆತ್ಮವಿಶ್ವಾಸದಲ್ಲಿದ್ದಾರೆ. ಪೂರ್ವಸಿದ್ಧತೆಯೂ ಚೆನ್ನಾಗಿ ನಡೆಯುತ್ತಿದೆ' ಎಂದು ರಿಷಭ್ ತಿಳಿಸಿದ್ದಾರೆ.

'ಕೋಚ್ ರಿಕಿ ಪಾಂಟಿಂಗ್ ಅವರ ಮಾರ್ಗದರ್ಶನ ಅಮೋಘವಾದದ್ದು. ಅವರು ತಂಡದಲ್ಲಿ ಹೊಸ ಚೈತನ್ಯ ತುಂಬಿದ್ದಾರೆ' ಎಂದರು.



ಮಹೇಂದ್ರಸಿಂಗ್ ಧೋನಿ ಮತ್ತು ರಿಷಭ್ ಪಂತ್

ವಾಂಖೆಡೆ ಕ್ರೀಡಾಂಗಣದ ಇಬ್ಬರು ಸಿಬ್ಬಂದಿಗೆ ಕೋವಿಡ್

ಮುಂಬೈ (ಪಿಟಿಐ): ಐಪಿಎಲ್ ಪಂದ್ಯಗಳು ನಡೆಯುವ ವಾಂಖೆಡೆ ಕ್ರೀಡಾಂಗಣದ ಇಬ್ಬರು ಸಿಬ್ಬಂದಿ ಸೇರಿದಂತೆ ಮೂವರಲ್ಲಿ ಕೋವಿಡ್–19 ದೃಢಪಟ್ಟಿದೆ. ಐಪಿಎಲ್ ಟೂರ್ನಿಯ ಪಂದ್ಯಗಳಿಗೆ ಕ್ರೀಡಾಂಗಣಗಳನ್ನು ಒದಗಿಸಲು ಮಹಾರಾಷ್ಟ್ರ ಸರ್ಕಾರ ಸೋಮವಾರ ಅನುಮತಿ ನೀಡಿತ್ತು.
ಈ ಋತುವಿನ ಐಪಿಎಲ್ ಟೂರ್ನಿಯ 10 ಪಂದ್ಯಗಳಿಗೆ ವಾಂಖೆಡೆ ಆತಿಥ್ಯ ವಹಿಸಬೇಕಿದೆ. ಇದೇ 10ರಂದು ಇಲ್ಲಿ ಮೊದಲ ಪಂದ್ಯವು ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವೆ ನಡೆಯಲಿದೆ.

'ಒಬ್ಬ ಪ್ಲಂಬರ್ ಹಾಗೂ ಇಬ್ಬರು ಕ್ರೀಡಾಂಗಣ ಸಿಬ್ಬಂದಿಗೆ ಸೋಂಕು ತಗಲಿದೆ' ಎಂದು ಮುಂಬೈ ಕ್ರಿಕೆಟ್ ಸಂಸ್ಥೆಯ (ಎಂಸಿಎ) ಮೂಲಗಳು ಮಂಗಳವಾರ ಹೇಳಿವೆ.

ಕಳೆದ ಶನಿವಾರ 10 ಮಂದಿ ಕ್ರೀಡಾಂಗಣ ಸಿಬ್ಬಂದಿಗೆ ಕೋವಿಡ್ ಖಚಿತಪಟ್ಟಿತ್ತು. ಆದರೆ ಬಳಿಕ ಅವರಲ್ಲಿ ಬಹುತೇಕರು ಚೇತರಿಸಿಕೊಂಡಿದ್ದರು.

ವಾರಾಂತ್ಯದ ಲಾಕ್‌ಡೌನ್ ಹಾಗೂ ರಾತ್ರಿ ಕರ್ಫ್ಯೂನಂತಹ ಕ್ರಮಗಳ ಮಧ್ಯೆಯೂ ಆಟಗಾರರ ಅಭ್ಯಾಸಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿತ್ತು.

ದೇವದತ್ತಗೆ ಕ್ವಾರಂಟೈನ್ ಇಲ್ಲ: ಕ್ಯಾಟಿಚ್

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟ್ಸ್‌ಮನ್ ದೇವದತ್ತ ಪಡಿಕ್ಕಲ್‌ಗೆ ಕಡ್ಡಾಯ ಕ್ವಾರಂಟೈನ್ ಇರುವುದಿಲ್ಲ ಎಂದು ಮುಖ್ಯ ಕೋಚ್ ಸೈಮನ್ ಕ್ಯಾಟಿಚ್ ಹೇಳಿದ್ದಾರೆ.

ದೇವದತ್ತ ಈಚೆಗೆ ಕೋವಿಡ್ ಸೋಂಕಿಗೆ ಒಳಗಾಗಿ ತಮ್ಮ ಮನೆಯಲ್ಲಿಯೇ ಪ್ರತ್ಯೇಕವಾಸದಲ್ಲಿದ್ದರು. ಇದೀಗ ಅವರು ಸಂಪೂರ್ಣ ಫಿಟ್ ಆಗಿದ್ದಾರೆ.ಈಗಲೂ ತಮ್ಮ ಮನೆಯಲ್ಲಿಯೇ ಇದ್ದಾರೆಂದು ಆರ್‌ಸಿಬಿ ತಿಳಿಸಿದೆ.

ಆದರೆ ತಂಡವನ್ನು ಸೇರಿಕೊಳ್ಳುವ ಮುನ್ನ ಬಯೋಬಬಲ್ ನಿಯಮದನ್ವಯ ಏಳು ದಿನಗಳ ಕ್ವಾರಂಟೈನ್‌ನಲ್ಲಿರಬೇಕು. ತಂಡದ ನಾಯಕ ವಿರಾಟ್ ಕೊಹ್ಲಿ, ಎಬಿ ಡಿವಿಲಿಯರ್ಸ್ ಮತ್ತು ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರ ಕ್ವಾರಂಟೈನ್ ಬುಧವಾರ ಮುಕ್ತಾಯವಾಗಲಿದೆ. ಅವರು ಅಭ್ಯಾಸಕ್ಕೆ ಮರಳುವರು.

'ಚೆನ್ನೈಗೆ ಅವರು ಶೀಘ್ರವೇ ಬರಲಿದ್ದಾರೆ. ತಂಡದ ಆಯ್ಕೆಗೂ ಅವರು ಲಭ್ಯರಾಗಲಿದ್ದಾರೆ. ಈಗಾಗಲೇ ದೀರ್ಘ ಪ್ರತ್ಯೇಕವಾಸ ಮತ್ತು ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಿದ್ದಾರೆ. ಆದ್ದರಿಂದ ಅವರಿಗೆ ಇಲ್ಲಿ ಮತ್ತೆ ಕ್ವಾರಂಟೈನ್ ಗೆ ಕಳುಹಿಸುವುದಿಲ್ಲ. ನಮ್ಮ ವೈದ್ಯಕೀಯ ತಂಡವು ಸಂಪೂರ್ಣ ನಿಗಾ ವಹಿಸಲಿದೆ' ಎಂದು ಕ್ಯಾಟಿಚ್ ಭರವಸೆ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಎಫ್ ಆ್ಯಂಡ್ ಬಿ' ಕಂಪನಿಯೊಂದಿಗೆ ಧೋನಿ ಪಾಲುದಾರಿಕೆ

ನವದೆಹಲಿ (ಪಿಟಿಐ): ಐಪಿಎಲ್ ಫ್ರಾಂಚೈಸ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು ಎಫ್ ಆ್ಯಂಡ್ ಬಿ ಕಂಪನಿಯೊಂದಿಗೆ ಪಾಲುದಾರಿಕೆ ಮಾಡಿಕೊಂಡಿದ್ದಾರೆ. ಸೆವೆನ್ ಇಂಕ್ ಬ್ರೇವ್ಸ್ ಎಂಬ ಸ್ಟಾರ್ಟ್ ಅಪ್ ಆರಂಭಿಸಿರುವ ಈ ಕಂಪನಿಯು ಆಹಾರ ಮತ್ತು ಪಾನೀಯಗಳನ್ನು ತಯಾರಿಸುತ್ತದೆ. ಧೋನಿ ಅವರ 'ಹೆಲಿಕಾಪ್ಟರ್ ಶಾಟ್'ನಿಂದ ಸ್ಫೂರ್ತಿ ಪಡೆದು ಮಂಗಳವಾರ ಹೊಸಬಗೆಯ ಚಾಕಲೇಟ್‌ಅನ್ನು ಬಿಡುಗಡೆ ಮಾಡಿದೆ.

ಮುಂಬೈ ಮೂಲದ ಈ ಕಂಪನಿಯನ್ನು ಮೋಹಿತ್ ಭಾಗಚಂದಾನಿ ಸ್ಥಾಪಿಸಿದ್ದಾರೆ. ಆದಿಲ್ ಮಿಸ್ತ್ರಿ ಮತ್ತು ಕುನಾಲ್ ಪಟೇಲ್ ಸಹ-ಸಂಸ್ಥಾಪಕರಾಗಿದ್ದಾರೆ.

ಬ್ಯಾಡ್ಮಿಂಟನ್ ಟೂರ್ನಿಗಳು ರದ್ದು

ನವದೆಹಲಿ (ಪಿಟಿಐ): ರಷ್ಯನ್ ಓಪನ್ ಹಾಗೂ ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಗಳನ್ನು ಕೋವಿಡ್–19 ಪಿಡುಗಿನ ನಿರ್ಬಂಧಗಳ ಹಿನ್ನೆಲೆಯಲ್ಲಿ ರದ್ದು ಮಾಡಲಾಗಿದೆ. ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಸೋಮವಾರ ಈ ವಿಷಯ ತಿಳಿಸಿದೆ.

ಕೋವಿಡ್‌ಗೆ ಸಂಬಂಧಿಸಿ ವಿಧಿಸಿರುವ ನಿರ್ಬಂಧಗಳ ಕಾರಣ ಸ್ಥಳೀಯ ಸಂಘಟಕರು ಟೂರ್ನಿಯನ್ನು ರದ್ದುಗೊಳಿಸುವ ನಿರ್ಧಾರಕ್ಕೆ ಬಂದಿದ್ದಾರೆ

ರಷ್ಯಾ ಓಪನ್ ಟೂರ್ನಿಯು ಜುಲೈ20ರಿಂದ 25ರವರೆಗೆ ವ್ಲಾಡಿವೊಸ್ತೊಕ್‌ನಲ್ಲಿ ನಿಗದಿಯಾಗಿತ್ತು. ಇಂಡೊನೇಷ್ಯಾ ಮಾಸ್ಟರ್ಸ್ ಅಕ್ಟೋಬರ್ 5ರಿಂದ 10ರವರೆಗೆ ನಡೆಯಬೇಕಿತ್ತು.

ಬಿಲಿಯರ್ಡ್ಸ್ ಟೂರ್ನಿ ಮುಂದಕ್ಕೆ

ಬೆಂಗಳೂರು: ನಗರದಲ್ಲಿ ಏಪ್ರಿಲ್ 12ರಿಂದ ನಡೆಯಬೇಕಿದ್ದ ರಾಜ್ಯ ರ‍್ಯಾಂಕಿಂಗ್ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಟೂರ್ನಿಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಕೋವಿಡ್–19 ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿರುವ ಕಾರಣ ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆ ಈ ನಿರ್ಧಾರ ತೆಗೆದುಕೊಂಡಿದೆ.

ವಾರ್ವಿಕ್ ಶೈರ್ ತಂಡದಲ್ಲಿ ಆಡಲಿರುವ ಹನುಮ ವಿಹಾರಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಬ್ಯಾಟ್ಸ್‌ಮನ್, ಟೆಸ್ಟ್ ಪರಿಣತ ಹನುಮ ವಿಹಾರಿ ಅವರು ಇಂಗ್ಲೆಂಡ್‌ನ ಕೌಂಟಿ ಕ್ಲಬ್ ವಾರ್ವಿಕ್‌ಶೈರ್ ಪರ ಆಡಲು ಸಜ್ಜಾಗಿದ್ದಾರೆ.

'ಬಲಗೈ, ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಹನುಮ ಅವರು ಈಗಾಗಲೇ ಇಂಗ್ಲೆಂಡ್‌ಗೆ ತೆರಳಿದ್ದು, ಬರ್ಮಿಂಗ್‌ಹ್ಯಾಂ ಮೂಲದ ತಂಡದ ಪರ ಕನಿಷ್ಠ ಮೂರು ಟೆಸ್ಟ್ ಪಂದ್ಯಗಳಲ್ಲಿ ಕಣಕ್ಕಿಳಿಯಲಿದ್ದಾರೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಕುರಿತು ವಾರ್ವಿಕ್‌ಶೈರ್ ಕ್ಲಬ್ ಯಾವುದೇ ಅಧಿಕೃತ ಪ್ರಕಟಣೆ ನೀಡಿಲ್ಲ.



ಹನುಮ ವಿಹಾರಿ

'ಹನುಮ ಅವರ ಒಪ್ಪಂದದ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಕನಿಷ್ಠ ಮೂರು ಪಂದ್ಯಗಳನ್ನು ಅವರು ಆಡಲಿದ್ದಾರೆ. ಇನ್ನಷ್ಟು ಪಂದ್ಯಗಳಲ್ಲಿ ಆಡುವ ಅವಕಾಶ ಇದೆಯೇ ಎಂಬುದನ್ನು ಕಂಡುಕೊಳ್ಳಲಿದ್ದೇವೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹನುಮ ಅವರು 2019ರಲ್ಲಿ ಕೊನೆಯ ಬಾರಿ ಐಪಿಎಲ್ ಟೂರ್ನಿಯಲ್ಲಿ ಆಡಿದ್ದರು. ಆ ಆವೃತ್ತಿಯಲ್ಲಿ ಅವರು ಡೆಲ್ಲಿ ಕ್ಯಾಪಿಟಲ್ಸ್ ಪರ ಕಣಕ್ಕಿಳಿದಿದ್ದರು.

ಆರ್‌ಸಿಬಿ–ಎಂಪಿಎಲ್ ಒಪ್ಪಂದ ನವೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಫ್ರಾಂಚೈಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡಕ್ಕೆ ಪ್ರಾಯೋಜಕತ್ವ ನೀಡುತ್ತಿರುವ ಇಸ್ಪೋರ್ಟ್ಸ್ ಸಂಸ್ಥೆ ಮೊಬೈಲ್ ಪ್ರೀಮಿಯರ್ ಲೀಗ್ (ಎಂಪಿಎಲ್), ತನ್ನ ಒಪ್ಪಂದವನ್ನು ಎರಡು ವರ್ಷಗಳಿಗೆ ನವೀಕರಿಸಿದೆ.

ಈ ವರ್ಷದ ಐಪಿಎಲ್ ಟೂರ್ನಿಯಲ್ಲದೆ 2022ರ ಟೂರ್ನಿಗೂ ಎಂಪಿಎಲ್ ಸಂಸ್ಥೆಯು ಆರ್‌ಸಿಬಿ ತಂಡದ ಕಿಟ್ ಪ್ರಾಯೋಜಕತ್ವ ವಹಿಸಿಕೊಳ್ಳಲಿದೆ. ಕಳೆದ ವರ್ಷ ಯುಎಇಯಲ್ಲಿ ನಡೆದ ಟೂರ್ನಿಯಲ್ಲಿ ಎಂಪಿಎಲ್ –ಆರ್‌ಸಿಬಿ ಒಪ್ಪಂದ ಮಾಡಿಕೊಂಡಿದ್ದವು.

ಮ್ಯಾಕ್ಸ್ ಲೈಫ್ ಇನ್ಸುರೆನ್ಸ್ ಕಂಪನಿ ಕೂಡ ಆರ್‌ಸಿಬಿಯೊಂದಿಗಿನ ಒಪ್ಪಂದವನ್ನು ಈ ವರ್ಷಕ್ಕೆ ನವೀಕರಿಸಿದೆ.

ಒಲಿಂಪಿಕ್ಸ್: ಭಾಗವಹಿಸದಿರಲು ಉತ್ತರ ಕೊರಿಯಾ ನಿರ್ಧಾರ

ಮೀರಾಬಾಯಿಗೆ ಪದಕದ ನಿರೀಕ್ಷೆ

ನವದೆಹಲಿ (ಪಿಟಿಐ): ಜಪಾನ್‌ನ ಟೋಕಿಯೊದಲ್ಲಿ ನಿಗದಿಯಾಗಿರುವ ಒಲಿಂಪಿಕ್ಸ್‌ನಲ್ಲಿ ಭಾಗವಹಿಸದಿರಲು ಉತ್ತರ ಕೊರಿಯಾ ಮಂಗಳವಾರ ನಿರ್ಧರಿಸಿದೆ. ಇದರೊಂದಿಗೆ ಭಾರತದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರು ಕೂಟದಲ್ಲಿ ಪದಕ ಗೆಲ್ಲುವ ಸಾಧ್ಯತೆ ಹೆಚ್ಚಾಗಿದೆ.

ಈ ವರ್ಷದ ಜುಲೈ 23ರಿಂದ ಆಗಸ್ಟ್ 8ರವರೆಗೆ ಒಲಿಂಪಿಕ್ಸ್ ನಡೆಯಬೇಕಿದ್ದು, ಕೋವಿಡ್–19 ಪಿಡುಗಿನಿಂದ ತನ್ನ ಅಥ್ಲೀಟ್‌ಗಳನ್ನು ರಕ್ಷಿಸಿಕೊಳ್ಳಲು ಉತ್ತರ ಕೊರಿಯಾ ಹಿಂದೆ ಸರಿಯುವ ನಿರ್ಧಾರಕ್ಕೆ ಬಂದಿದೆ.

ಮೀರಾಬಾಯಿ, ಅಂತರರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಫೆಡರೇಷನ್ ಲೆಕ್ಕಾಚಾರದ ಅನ್ವಯ, ಟೋಕಿಯೊ ಕೂಟದ ಮಹಿಳೆಯರ 49 ಕೆಜಿ ವಿಭಾಗದ ಅರ್ಹತಾ ಕ್ರಮಾಂಕದಲ್ಲಿ 3869 ಪಾಯಿಂಟ್‌ಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದ್ದಾರೆ.



ಮೀರಾಬಾಯಿ ಚಾನು

ಅವರ ಹತ್ತಿರದ ಪ್ರತಿಸ್ಪರ್ಧಿ, ಉತ್ತರ ಕೊರಿಯಾದ ರಿ ಸಾಂಗ್ ಗಮ್, 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 204 ಕೆ.ಜಿ. ಎತ್ತುವ ಮೂಲಕ ಕಂಚಿನ ಪದಕ ಗೆದ್ದುಕೊಂಡಿದ್ದರು. ಮೀರಾ 201 ಕೆ.ಜಿ. ಭಾರ ಎತ್ತಿದ್ದರು. ರಿ ಸಾಂಗ್ ಸದ್ಯ 4209 ಪಾಯಿಂಟ್‌ಗಳೊಂದಿಗೆ ರ‍್ಯಾಂಕಿಂಗ್‌ನಲ್ಲಿ 3ನೇ ಸ್ಥಾನದಲ್ಲಿದ್ದಾರೆ.

ಹೀಗಾಗಿ ಒಂದು ವೇಳೆ ಉತ್ತರ ಕೊರಿಯಾ ಕೂಟದಿಂದ ಹಿಂದೆ ಸರಿಯುವ ತನ್ನ ನಿರ್ಧಾರಕ್ಕೆ ಅಂಟಿಕೊಂಡರೆ, ಮೀರಾಗೆ ಅನುಕೂಲವಾಗಲಿದೆ.

49 ಕೆಜಿ ವಿಭಾಗದ ಸದ್ಯದ ಅರ್ಹತಾ ರ‍್ಯಾಂಕಿಂಗ್ಸ್‌ನ ಅಗ್ರ ಐವರ ಪಟ್ಟಿಯಲ್ಲಿ ಚೀನಾದ ಮೂವರು ವೇಟ್‌ಲಿಫ್ಟರ್‌ಗಳಿದ್ದಾರೆ. ಮೊದಲ ಸ್ಥಾನದಲ್ಲಿ ಆ ದೇಶದ ಹೋ ಜಿಹುಯಿ ಇದ್ದಾರೆ. ಪ್ರತಿ ತೂಕ ವಿಭಾಗದಲ್ಲಿ ಒಂದು ದೇಶದಿಂದ ಒಬ್ಬರಿಗೆ ಮಾತ್ರ ಸ್ಪರ್ಧಿಸುವ ಅವಕಾಶ ಇದೆ. ಹೀಗಾಗಿ ಸಹಜವಾಗಿಯೇ ಮೀರಾಬಾಯಿ ಎರಡನೇ ಶ್ರೇಷ್ಠ ಸ್ಪರ್ಧಿ ಆಗಿ ಹೊರಹೊಮ್ಮಲಿದ್ದಾರೆ.

ಮೀರಾಬಾಯಿ, ಏ.16 ರಿಂದ 25ರವರೆಗೆ ಉಜ್ಬೆಕಿಸ್ತಾನದ ತಾಷ್ಕೆಂಟ್‌ನಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲಿದ್ದಾರೆ.

ಸುದ್ದಿ 2 ನಿಮಿಷ

ಎಂಐಟಿ ವಿಚಾರ ಸಂಕಿರಣ: ರಾಹುಲ್ ದ್ರಾವಿಡ್‌ಗೆ ಆಹ್ವಾನ

ವಾಷಿಂಗ್ಟನ್ (ಪಿಟಿಐ): ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ, ಭಾರತ ತಂಡದ ಮಾಜಿ ಆಟಗಾರ ರಾಹುಲ್ ದ್ರಾವಿಡ್ ಅವರಿಗೆ ಅಮೆರಿಕದ ಮೆಸಾಚುಸೆಟ್ಸ್ ತಂತ್ರಜ್ಞಾನ ಸಂಸ್ಥೆ (ಎಂಐಟಿ)ಯ ಸ್ಪೋರ್ಟ್ಸ್ ಅನಾಲೆಟಿಕ್ಸ್ ವಿಚಾರ ಸಂಕಿರಣದಲ್ಲಿ ಉಪನ್ಯಾಸ ನೀಡಲು ಆಹ್ವಾನ ನೀಡಿದೆ. ಇದೇ ಮೊದಲ ಬಾರಿಗೆ ಎಂಐಟಿಯು ಕ್ರಿಕೆಟ್ ಕುರಿತು ಪ್ಯಾನಲ್ ಚರ್ಚೆಯನ್ನು ಆಯೋಜಿಸುತ್ತಿದೆ.


ಏಪ್ರಿಲ್ 8 ಮತ್ತು 9 ರಂದು ನಡೆಯುವ ಈ ವಿಚಾರ ಸಂಕಿರಣದ ವಿಷಯವು 'ಶೋ ಮೀ ದ ಡೇಟಾ' ಎಂಬುದಾಗಿದೆ ಎಂದು ಸೋಮವಾರ ನೀಡಲಾಗಿರುವ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಈ ವರ್ಚುವಲ್ ಸಂಕಿರಣದಲ್ಲಿ ದ್ರಾವಿಡ್ ಜೊತೆಗೆ ಖ್ಯಾತ ಕ್ರಿಕೆಟಿಗರಾದ ಗ್ಯಾರಿ ಕರ್ಸ್ಟನ್ ಮತ್ತು ಇಸಾ ಗುಹಾ ಸಹ ಸೇರಿಕೊಳ್ಳಲಿದ್ದಾರೆ.

ಕರ್ಸ್ಟನ್, 2011ರ ವಿಶ್ವಕಪ್ ವಿಜೇತ ಭಾರತ ಕ್ರಿಕೆಟ್ ತಂಡದ ತರಬೇತುದಾರರಾಗಿದ್ದರು. ಇಸಾ ಗುಹಾ ಇಂಗ್ಲೆಂಡ್ ಪರ ಆಡಿದ್ದರು. ಸದ್ಯ ಅವರು ಕಾಮೆಂಟೇಟರ್ ಆಗಿದ್ದಾರೆ.

ಡೆಲ್ ಟೆಕ್ನಾಲಜೀಸ್‌ನ ನಿರ್ದೇಶಕ ಅಲೋಕ್ ಆರ್. ಸಿಂಗ್ ಅವರು ಚರ್ಚೆಯನ್ನು ನಿರೂಪಣೆ ಮಾಡಲಿದ್ದಾರೆ.

ಕ್ರಿಕೆಟ್ ಬಗೆಗಿನ ಕುರಿತಾದ ಈ ಚರ್ಚೆಯು ಆಧುನಿಕ ಕ್ರಿಕೆಟ್ ಮತ್ತು ಅದರ ಜನಪ್ರಿಯ ಲೀಗ್‌ಗಳಾದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕುರಿತು ಹಲವಾರು ಒಳನೋಟಗಳನ್ನು ನೀಡುತ್ತದೆ ಎಂದು ಮಾಧ್ಯಮ ಪ್ರಕಟಣೆ ತಿಳಿಸಿದೆ.



ಫುಟ್‌ಬಾಲ್: ಜವಾಹರ್ ಯೂನಿಯನ್ ಎಫ್‌ಸಿಗೆ ಜಯ

ಬೆಂಗಳೂರು: ಸ್ಟಿಮಿನ್ಲೆನ್ ಹಾಕಿಪ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಜವಾಹರ್ ಯೂನಿಯನ್ ಎಫ್‌ಸಿ ತಂಡವು ಬಿಡಿಎಫ್‌ಎ ಎ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಗೆದ್ದಿತು. ಮಂಗಳವಾರ ನಡೆದ ಹಣಾಹಣಿಯಲ್ಲಿ 5–0ಯಿಂದ ಸಿಐಎಲ್ ಎಫ್‌ಸಿ ತಂಡವನ್ನು ಸೋಲಿಸಿತು.

ತಂಡದ ಪರ ಹಾಕಿಪ್ (18 ಹಾಗೂ 41ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಮೈಕೆಲ್ ಗೇಬ್ರಿಯಲ್ (14ನೇ ನಿಮಿಷ), ನಿಖಿಲ್ (32ನೇ ನಿಮಿಷ) ಹಾಗೂ ಮೋನಿಷ್ (49ನೇ ನಿಮಿಷ) ತಲಾ ಒಂದು ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಬಿಟಿಎಂ ಎಫ್‌ಸಿ 2–0ಯಿಂದ ಪೋಸ್ಟಲ್ ಡಿಪಾರ್ಟ್‌ಮೆಂಟ್ ಎಫ್‌ಸಿ ತಂಡವನ್ನು ಮಣಿಸಿತು. ವಿಜೇತ ತಂಡದ ಧ್ರುವ ಸಂದೀಪ್ ರಾವ್ (7ನೇ ನಿಮಿಷ, ಪೆನಾಲ್ಟಿ) ಹಾಗೂ ದೇವಾಂಶು ಸೀಯಲ್ (19ನೇ ನಿಮಿಷ) ಗೋಲು ದಾಖಲಿಸಿದರು.

ಬುಧವಾರ ನಡೆಯುವ ಬಿ ಡಿವಿಷನ್ ಲೀಗ್‌ನ ಎ ಗುಂಪಿನ ಪಂದ್ಯಗಳಲ್ಲಿ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ–ಸೌತ್ ಇಂಡಿಯನ್ ಎಫ್‌ಸಿ ಹಾಗೂ ಶ್ರೀ ಗಜಾನನ ಎಫ್‌ಸಿ–ರೆಬೆಲ್ಸ್ ಎಫ್‌ಸಿ ಸೆಣಸಲಿವೆ. ಮತ್ತೊಂದು ಪಂದ್ಯದಲ್ಲಿ ವೆಹಿಕಲ್ಸ್ ಎಫ್‌ಸಿ–ರಾಯಲ್ಸ್ ಎಫ್‌ಸಿ ಮುಖಾಮುಖಿಯಾಗಲಿವೆ.

ಭಾರತ ಮಹಿಳಾ ಹಾಕಿ ತಂಡಕ್ಕೆ 'ಮೈಂಡ್ ಟ್ರೇನಿಂಗ್'

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ಗೆ ಸಜ್ಜಾಗುತ್ತಿರುವ ಭಾರತ ಮಹಿಳಾ ಹಾಕಿ ತಂಡವು ಮಂಗಳವಾರ 'ಮೈಂಡ್ ಟ್ರೇನಿಂಗ್ ಕಾರ್ಯಾಗಾರದಲ್ಲಿ ಪಾಲ್ಗೊಂಡಿತ್ತು. ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಆಯೋಜಿಸಿದ್ದ ಈ ಕಾರ್ಯಾಗಾರದಲ್ಲಿ ಕ್ರೀಡಾ ಮನಶಾಸ್ತ್ರಜ್ಞೆ ಮುಗ್ಧಾ ಬಾವರೆ ಆಟಗಾರ್ತಿಯರಿಗೆ ಮಾರ್ಗದರ್ಶನ ಮಾಡಿದರು.

ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಯಡಿ, ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಅಥ್ಲೀಟ್‌ಗಳಿಗೆ ನಡೆಸುತ್ತಿರುವ ಕಾರ್ಯಕ್ರಮಗಳ ಭಾಗವಾಗಿ ಈ ಕಾರ್ಯಾಗಾರ ನಡೆಯಿತು.

'ಮೈಂಡ್ ಟ್ರೇನಿಂಗ್'ಬಲಪಡಿಸುವ, ಒಟ್ಟಾರೆಯಾಗಿ ತಂಡದ ಸಕಾರಾತ್ಮಕ ಮನೋಭಾವ ಹೆಚ್ಚಿಸುವ, ಮಾನಸಿಕ ತರಬೇತಿಯನ್ನು ದಿನನಿತ್ಯದ ಚಟುವಟಿಕೆಯನ್ನಾಗಿ ಮಾಡುವ ಭಾಗವಾಗಿ ಆಟಗಾರ್ತಿಯರಿಗೆ ಮಾರ್ಗದರ್ಶನ ನೀಡಲಾಯಿತು.

'2017ರಲ್ಲಿ ನಾನು ತರಬೇತಿ ಆರಂಭಿಸಿದಾಗಿನಿಂದ ಆಟಗಾರ್ತಿಯರ ಮನಸ್ಥಿತಿ ಉತ್ತಮಪಡಿಸಲು ಗಮನ ನೀಡಿದ್ದೇನೆ' ಎಂದು ತಂಡದ ಕೋಚ್ ಶೋರ್ಡ್ ಮ್ಯಾರಿಜ್ ಹೇಳಿದ್ದಾರೆ.



ಬೆಳ್ಳಿ ಗೆದ್ದ ಕರ್ನಾಟಕದ ಮಹಿಳೆಯರ ತಂಡ ಮತ್ತು ಕಂಚಿನ ಪದಕ ಗಳಿಸಿದ ಪುರುಷರ ತಂಡ

ಬಾಲ್ ಬ್ಯಾಡ್ಮಿಂಟನ್: ಪುರುಷರ ತಂಡಕ್ಕೆ ಕಂಚಿನ ಪದಕ

ರಾಜ್ಯ ಮಹಿಳಾ ತಂಡ ರನ್ನರ್ ಅಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಮಹಿಳಾ ತಂಡವು ರಾಜಸ್ಥಾನದ ಜೈಪುರದಲ್ಲಿ ನಡೆದ ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ಸ್ ಅಪ್ ಆಯಿತು. ಪುರುಷರ ತಂಡ ಕಂಚಿನ ಪದಕ ಪಡೆದುಕೊಂಡಿತು.

ಮಹಿಳೆಯರ ತಂಡವು ಫೈನಲ್ ಪಂದ್ಯದಲ್ಲಿ ತಮಿಳುನಾಡು ವಿರುದ್ಧ 29-35, 33-35ರಲ್ಲಿ ಸೋತಿತು. ಪುರುಷರ ತಂಡ ಸೆಮಿಫೈನಲ್‌ನಲ್ಲಿ ತಮಿಳುನಾಡು ವಿರುದ್ಧ ಸೋಲುಂಡಿತು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಆಂಧ್ರ ವಿರುದ್ಧ 35-26, 35-22ರಲ್ಲಿ ಗೆಲುವು ಸಾಧಿಸಿತು. ಪುರುಷರ ವಿಭಾಗದಲ್ಲಿ ರಾಜ್ಯದ ಚೇತನ್.ಬಿ.ಕೆ ಹಾಗೂ ಮಹಿಳೆಯರ ವಿಭಾಗದಲ್ಲಿ ಕವನ.ಎಂ.ಎಂ ಅವರು ಸ್ಟಾರ್ ಆಫ್ ಇಂಡಿಯಾ ಪ್ರಶಸ್ತಿಗೆ ಭಾಜನರಾದರು.

ಚಾಂಪಿಯನ್‌ಷಿಪ್‌ನ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ರಾಜ್ಯ ಮಹಿಳಾ ತಂಡ ತಮಿಳುನಾಡು ವಿರುದ್ಧ 35-14, 35-16ರಲ್ಲಿ ಜಯ ಗಳಿಸಿ ಚಿನ್ನದ ಪದಕ ಗಳಿಸಿತು.

ಪುರುಷರ ತಂಡ ಫೈನಲ್‌ನಲ್ಲಿ ತಮಿಳುನಾಡು ವಿರುದ್ಧ 22-35, 26-35ರಲ್ಲಿ ಸೋತು ಬೆಳ್ಳಿ ಪದಕ ಪಡೆಯಿತು.

ಕಿರಣ್ ಮೋರೆಗೆ ಕೋವಿಡ್ ದೃಢ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ವಿಕೆಟ್ ಕೀಪರ್ ಕಿರಣ್ ಮೋರೆ ಅವರಿಗೆ ಕೋವಿಡ್–19 ಇರುವುದು ಖಚಿತಪಟ್ಟಿದೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸ್ ಮುಂಬೈ ಇಂಡಿಯನ್ಸ್ ಮಂಗಳವಾರ ಈ ವಿಷಯ ತಿಳಿಸಿದೆ.



ಕಿರಣ್ ಮೋರೆ

58 ವರ್ಷದ ಮೋರೆ ಅವರು ಮುಂಬೈ ಇಂಡಿಯನ್ಸ್ ತಂಡದ ಪ್ರತಿಭಾ ಶೋಧ ಹಾಗೂ ವಿಕೆಟ್ ಕೀಪಿಂಗ್ ಸಲಹೆಗಾರ ಕೂಡ ಆಗಿದ್ದಾರೆ.

'ಮೋರೆ ಅವರಿಗೆ ಸೋಂಕಿನ ಲಕ್ಷಣಗಳು ಇಲ್ಲ. ಸದ್ಯ ಪ್ರತ್ಯೇಕವಾಸದಲ್ಲಿದ್ದಾರೆ. ಅವರು ಹಾಗೂ ನಮ್ಮ ಫ್ರಾಂಚೈಸ್, ಬಿಸಿಸಿಐನ ಎಲ್ಲ ಆರೋಗ್ಯ ಮಾರ್ಗಸೂಚಿಗಳನ್ನು ಅನುಸರಿಸುತ್ತಿದ್ದೇವೆ. ನಮ್ಮ ವೈದ್ಯರ ತಂಡ ಮೋರೆ ಅವರ ಆರೋಗ್ಯದ ಮೇಲೆ ನಿಗಾ ಇಟ್ಟಿದೆ' ಎಂದು ಮುಂಬೈ ಇಂಡಿಯನ್ಸ್ ಹೇಳಿದೆ.